

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 32 ಆಗಸ್ಟ್ 8, 2004 ಬೆಲೆ ರೂ. 3.00



ಬಿಜೆಪಿ: ಸಂಸದೀಯ ಪ್ರಜಾಪ್ರಭುತ್ವ ಬುಡಮೇಲು ಮಾಡುವತ್ತ



ಮಾಯ ! ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಮಂಗಮಾಯ ?!

ನಂಜನಗೂಡು : ಮಾಲೀಕರೊಂದಿಗೆ ಕೈ ಜೋಡಿಸಿರುವ ಕಿರಾತಕ ಪೊಲೀಸರು

ಸಿಪಿಐ(ಎಂ) ನಾಯಕರ ಮೇಲೆ ಹಲ್ಲೆ, ಅಕ್ರಮ ಬಂಧನ

- ಜೀತ ವಿಮುಕ್ತರಿಗೆ ಇನ್ನೂ ಭೂಮಿ ದಕ್ಕಲೇ ಇಲ್ಲ !
- ಶಹಪುರದಲ್ಲಿ ಸಿಕ್ಕಿಬಿದ್ದ ಅಕ್ಕಿ ಕಳ್ಳರು !
- ಶಿಕ್ಷಣಕ್ಕಾಗಿ ಕಾಲೇಜ್ ಬಂದ್ !

ಇರಾಕಿ ದುರಂತದಲ್ಲೂ ತೂರಿಬಂದ ಹೊಂಬೆಳಕು

ಸಾಮಾನ್ಯ ಕನಿಷ್ಠ ಕಾರ್ಯಕ್ರಮದಿಂದ ಅದೆಷ್ಟು ದೂರ?

ಕೇಂದ್ರದ ಯುಪಿಎ ಸರ್ಕಾರದ ಅರ್ಥ ಸಚಿವ ಚಿದಂಬರಂರವರ ಬಜೆಟ್‌ನ ಒಳಹೂರಣ ಏನು? ಅದು ಹಲವು ವೈರುಧ್ಯಗಳ ಕಂತೆಯೇ? ಒಂದು ಚಿಂತನೆ.

ಇಂದಿನ ಜಗತ್ತಿನಲ್ಲಿ ಎರಡೇ ಎರಡು ತರಹದ ಆರ್ಥಿಕ ನೀತಿ ಪ್ರಣೀತ ಬೆಳವಣಿಗೆ ಸಾಧ್ಯ. ಜಾಗತಿಕ ಬಂಡವಾಳಕ್ಕೆ ತೆರೆದುಕೊಳ್ಳುವುದು - ಆ ಮೂಲಕ ಸರಕು ಚಲನೆಗೂ ಅವಕಾಶ ನೀಡಿ ಆಂತರಿಕ ಆರ್ಥಿಕ ಈ ಪರಿಸ್ಥಿತಿಗೆ ಹೊಂದಿಕೊಳ್ಳಲು ಬಿಡುವುದು. ಇದರ ಮೇಲೆ ಸರ್ಕಾರಕ್ಕೆ ಬಹಳ ಹಿಡಿತವೇನಿರುವುದಿಲ್ಲ. ಎರಡನೇಯದು ದೇಶೀ ಆರ್ಥಿಕವನ್ನು ಕೆಲವು ಸಾಮಾಜಿಕ ಉದ್ದೇಶಗಳಿಗೆ ತಕ್ಕಂತೆ ರೂಪಿಸಿಕೊಳ್ಳುವುದು. ಎರಡನೇ ದಾರಿ ಆಯ್ದುಕೊಂಡರೆ ಜಾಗತಿಕ ಬಂಡವಾಳದ ಹರಿವಿನ ಮೇಲೆ ನಿರ್ಭಂಧಗಳನ್ನು ಹೇರಲೇಬೇಕಾಗುತ್ತದೆ.

ಈ ಮೇಲಿನ ಸಾಧ್ಯತೆಗಳನ್ನು ಗಮನಿಸಿದರೆ "ಮಾನವೀಯ ಮುಖದ ಉದಾರೀಕರಣ' ಅಸಾಧ್ಯ ಎಂಬುದು ಗೊತ್ತಾಗುತ್ತದೆ. 'ಮಾನವೀಯ ಮುಖ ಉಳಿಸಿಕೊಳ್ಳಬೇಕಾದರೆ ಉದಾರೀ ಕರಣದ ಮೇಲೆ ನಿರ್ಭಂಧಗಳನ್ನು ಹೇರಲೇ ಬೇಕಾಗುತ್ತದೆ. ಇದಲ್ಲದೆ ಉದಾರೀಕರಣವನ್ನೇ ಮುಂದುವರೆಸಬೇಕೆಂದಾದರೆ ಮಾನವೀಯ ಮುಖ ಎಂಬುದನ್ನು ಮರೆಯಬೇಕಾಗುತ್ತದೆ. ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿ ಮೂಲಭೂತ ವೈರುದ್ಯಗಳು ಇರುವುದು ಇದರಿಂದ ಸ್ಪಷ್ಟವಾಗುತ್ತದೆ.

2004-05 ಬಜೆಟ್ ಈ ಹಿನ್ನೆಲೆಯಲ್ಲೇ ಪ್ರಾಮುಖ್ಯತೆ ಪಡೆದಿರುವುದು. ಕೇಂದ್ರದ ಯುಪಿಎ ಸರ್ಕಾರ ಯಾವ ದಿಸೆಯಲ್ಲಿ ಚಲಿಸುತ್ತಿದೆ ಎಂಬ ಪ್ರಶ್ನೆಗೆ ಬಜೆಟ್‌ನಲ್ಲಿ ಉತ್ತರ ದೊರೆತೀತೆ? ಉತ್ತರ ಸ್ಪಷ್ಟವಾಗಿದೆ. ಯುಪಿಎ ಸರ್ಕಾರ ಉದಾರೀಕರಣ ನೀತಿಗಳತ್ತ ವಾಲಿದೆ. ಕನಿಷ್ಠ ಸಾಮಾನ್ಯ ಕಾರ್ಯಕ್ರಮದಿಂದ ಹಿಂದೆ ಸರಿದಿದೆ. ಬಜೆಟನ್ನು "ಬಡವರ ಪರ", 'ರೈತರಪರ' "ಕೃಷಿ, ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿಗಳ ಬಗ್ಗೆ ನೋಟವಿರುವ ಬಜೆಟ್ ಎಂದೆಲ್ಲ ಹೊಗಳಲಾಗಿದೆ. ಇವೆಲ್ಲ ಸತ್ವದಿಂದ ಬಹುದೂರ ಇವೆ. ಕೃಷಿ ಮತ್ತು ಸಹಕಾರ ಇಲಾಖೆಗಳಿಗೆ ಎನ್‌ಡಿಎ ಸರ್ಕಾರ ಮಧ್ಯಂತರ ಬಜೆಟ್‌ನಲ್ಲಿ ತೆಗೆದಿರಿಸಿದ 3014 ಕೋಟಿ ರೂಪಾಯಿಗಳಷ್ಟೇ ಇರುವುದು. ಕೆಲಸಕ್ಕೆ ಕಾಳು' ಯೋಜನೆಗೆ ಹೆಚ್ಚಿನ ಬೆಂಬಲವೇನಿಲ್ಲ. ಅಂತ್ಯೋದಯ ಅನ್ನ ಯೋಜನೆಯಡಿಯೂ ಸಹ ಹೆಚ್ಚಿನ ಅನುದಾನವೇನಿಲ್ಲ.


ವೈಪರೀತ್ಯವೇನೆಂದರೆ ಗ್ರಾಮೀಣ ಕೆಲಸ ಮಾಡಿದೆ. (9640 ಕೋಟಿ ರೂಪಾಯಿಗಳಿಂದ

2004-05 ರ ಕೇಂದ್ರ ಬಜೆಟ್


4590 ಕೋಟಿ ರೂಪಾಯಿಗಳು) ಕಳೆದ ಸಾಲಿನಲ್ಲಿ ಹಲವು ಬರಗಾಲ ಪೀಡಿತ ಪ್ರದೇಶಗಳಿದ್ದರಿಂದ ಈ ಮೊತ್ತ ದೊಡ್ಡದಾಗಿತ್ತು ಎಂಬುದನ್ನು ಒಪ್ಪಿಕೊಂಡರೂ ಒಟ್ಟಾರೆ ತೆಗೆದಿರಿಸಿದ ಹಣ ಕಡಿಮೆಯೇ.

ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ತೆಗೆದಿರಿಸಿದ ಮೊತ್ತ 10612 ಕೋಟಿ ರೂ.ಗಳಿಂದ 11437 ಕೋಟಿ ರೂ.ಗಳಿಗೇರಿದ ಗ್ರಾಮೀಣ ಅಂತರ್ರಚನೆ ಅಭಿವೃದ್ಧಿ ನಿಧಿ ಸ್ಥಾಪನೆ ಮತ್ತು ಮೂರು ವರ್ಷಗಳಲ್ಲಿ ಸಾಲವನ್ನು ದ್ವಿಗುಣಗೊಳಿಸುವ ಭರವಸೆ ನೀಡಲಾಗಿದೆ ಎಂಬುದು ನಿಜ. ಆದರೆ ಬಜೆಟ್ ಈ ವಲಯಕ್ಕೆ ಹಣ ತೆಗೆದಿರಿಸುವಲ್ಲಿ ಕೊಸರುತನ ತೋರಿದೆ ಎಂದೇ ಹೇಳಬಹುದು.

ಯೋಜನಾ ಬೆಂಬಲಕ್ಕೆ 10000 ಕೋಟಿ ರೂಪಾಯಿಗಳನ್ನು ತೆಗೆದಿರಿಸುವ ಮೂಲಕ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ಗೌರವ ತೋರುವ ಪ್ರಯತ್ನವನ್ನು ಅದು ಮಾಡಿದೆ ಎಂದು ಹೇಳಬಹುದು. ಆದರೆ ಐದರಲ್ಲಿ 4910 ಕೋಟಿ ರೂಪಾಯಿಗಳು ಶಿಕ್ಷಣಕ್ಕೆ ಹೋಗಬೇಕಾದದ್ದು ಉಳಿದದ್ದು ಬಹಳ ಅಲ್ಪ ಮೊತ್ತ ಇದಕ್ಕೆ



ವ್ಯತಿರಿಕ್ತವಾಗಿ ರಕ್ಷಣಾ ವೆಚ್ಚ 11000 ಕೋಟಿ ರೂಪಾಯಿಗಳಿಂದ ಮೇಲಕ್ಕೆ ಹೋಗಿದೆ. ಇಲ್ಲಿ ರಕ್ಷಣೆಗೆ ಹೆಚ್ಚಿಗೆ ನೀಡಬೇಕೋ ಬೇಡವೋ ಎಂಬುದು ಪ್ರಶ್ನೆಯಲ್ಲ. ಈ ಎರಡು ವಲಯಗಳ ಬಗ್ಗೆ ಎಂತಹ ಧೋರಣೆ ಇದೆ ಎಂಬುದು ಮುಖ್ಯ. ಅದು ಸ್ಪಷ್ಟವೂ ಹೌದು ರಕ್ಷಣಾ ವೆಚ್ಚಕ್ಕೆ ಹಣವಿದೆ. ಅಭಿವೃದ್ಧಿಗೆ ನೀಡಲು ಇಲ್ಲ. ಇಲ್ಲಿ ಎನ್‌ಡಿಎ ಮತ್ತು ಯುಪಿಎ ಸರ್ಕಾರಗಳ ನಡುವೆ ವ್ಯತ್ಯಾಸವೇ ಇಲ್ಲ ಎನ್ನಬಹುದು.



ಅರ್ಥ ಸಚಿವ ಚಿದಂಬರಂ, ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್

ಎನ್‌ಡಿಎ ತನ್ನ ಆಡಳಿತದ ಅವಧಿಯಲ್ಲಿ ಆರ್ಥಿಕದ ಸಂಕುಚನವನ್ನು ಸತತವಾಗಿ ಮಾಡಿತ್ತು. ಇದರಿಂದಾಗಿ ಔದ್ಯಮಿಕ ಪದಾರ್ಥಗಳು ಬಳಕೆಯಾಗಲಿಲ್ಲ. ಆಹಾರ ಧಾನ್ಯಗಳನ್ನು ಕೊಳ್ಳುವವರೇ ಇರಲಿಲ್ಲ. ನಿರುದ್ಯೋಗ ಹೆಚ್ಚಿತು. ಆರ್ಥಿಕದಲ್ಲಿ ಸರ್ಕಾರೀ ವೆಚ್ಚವನ್ನು ಹೆಚ್ಚಿಸುವ ಮೂಲಕ ಬೇಡಿಕೆ ಹೆಚ್ಚಿಸುವ ಕೆಲಸ ಮಾಡಬಹುದು. ಎನ್‌ಡಿಎ ಅದಕ್ಕೆ ವಿರುದ್ಧವಾದದ್ದನ್ನು ಮಾಡಿತು. ಯುಪಿಎ ಅದೇ ಹಾದಿಯಲ್ಲಿ ನಡೆದಿದೆ.

ಹಣಕಾಸು ಖೋತಾವನ್ನು ಶೇ4.8 ರಿಂದ ಶೇ4.4ಕ್ಕೆ ಇಳಿಸಬೇಕಿದೆ.-(ಬಜೆಟ್ ಅಂದಾಜುಗಳ ಪ್ರಕಾರ) ಇದು ಆರ್ಥಿಕದ ಮೇಲೆ ಸಂಕುಚನ ಪರಿಣಾಮ ಬೀರುತ್ತದೆ. ಎರಡನೇಯದಾಗಿ ರಕ್ಷಣಾ ವೆಚ್ಚದ ಬಹುಭಾಗ ಉಪಕರಣಗಳ ಆಮದಿಗೆ ಹೋಗುವುದರಿಂದ ನಮ್ಮ ಆರ್ಥಿಕದಲ್ಲಿ ಬೇಡಿಕೆ ಸೋರಿಹೋದಂತಾಗುತ್ತದೆ.

ಈ ಬಜೆಟ್‌ನ ಕಂದಾಯ ಅಂದಾಜುಗಳು ವಾಸ್ತವದಿಂದ ದೂರವೇ ಉಳಿದಿವೆ.

ಆದಾಯ ತೆರಿಗೆ ಸಂಗ್ರಹಣೆ ಶೇ 26.5 ರಷ್ಟು ಹೆಚ್ಚಲಿದೆ ಎಂದು ಹೇಳಿದ್ದರೂ ಅದು ಆಗುವ



ಸಾಧ್ಯತೆ ಕಾಣುವುದಿಲ್ಲ. ಕಂಪನಿಗಳ ತೆರಿಗೆ ಶೇ 40.4 ರ ದರದಲ್ಲಿ ಬೆಳೆಯಲಿದೆಯಂತೆ. ಸೇವಾ ತೆರಿಗೆಯನ್ನು ಶೇ 8 ರಿಂದ ಶೇ10 ಕ್ಕೆ ಏರಿಸಲಿದೆ.

ಈ ತೆರಿಗೆ ಸಂಗ್ರಹಣೆ ಹೆಚ್ಚುತ್ತದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ಸರಿ ಎಂದುಕೊಳ್ಳೋಣ. ಹಾಗಾಗದೆ ಸಂಗ್ರಹಣೆ ಕಡಿಮೆ ಆದರೆ ಆಗ ವೆಚ್ಚಗಳಲ್ಲಿ ಕಡಿತ ಮಾಡಲಾಗುತ್ತದೆ. ಆಗ ಈ ಕನಿಷ್ಠ ಸಾಮಾನ್ಯ ಕಾರ್ಯಕ್ರಮ ಇನ್ನೂ ಮೂಲೆಗೆ ಹೋಗುತ್ತದೆ.

> **ಕೇಂದ್ರದ ಯುಪಿಎ ಸರ್ಕಾರ ಯಾವ ದಿಸೆಯಲ್ಲಿ ಚಲಿಸುತ್ತಿದೆ ಎಂಬ ಪ್ರಶ್ನೆಗೆ ಬಜೆಟ್‌ನಲ್ಲಿ ಉತ್ತರ ದೊರೆತೀತೆ? ಉತ್ತರ ಸ್ಪಷ್ಟವಾಗಿದೆ. ಯುಪಿಎ ಸರ್ಕಾರ ಉದಾರೀಕರಣ ನೀತಿಗಳತ್ತ ವಾಲಿದೆ.**

ಎನ್‌ಡಿಎ ಸರ್ಕಾರ ಹಣಕಾಸು ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಕಾನೂನನ್ನು ಜಾರಿಗೆ ತಂದಿತು. ಇದು ಅಮೇರಿಕದ ಬಲಪಂಥೀಯ ಬುಜಾನನ್‌ನ ಸಿದ್ಧಾಂತದ ಪ್ರಕಾರ ಇದೆ. ಹಣಕಾಸು ಬಂಡವಾಳವನ್ನು ಮೆಚ್ಚಿಸುವ ಕ್ರಮ ಇದು. ಇದರ ಪ್ರಕಾರ ಹಣಕಾಸು ಖೋತಾ ಒಟ್ಟು ಉತ್ಪಾದನೆಯ ನಿಗದಿತ ಶೇಕಡಾ ಪ್ರಮಾಣಕ್ಕಿಂತ ಮೇಲೆ ಏರುವಂತಿಲ್ಲ. ಇದು ಅಮೆರಿಕಾದಂತಹ ದೇಶಕ್ಕೆ ಸರಿಯಿರಬಹುದು. ಆದರೆ ನಾವು ಇಂತಹ ನಿಯಮಕ್ಕೆ ನೇಣು ಹಾಕಿಕೊಳ್ಳುವ ಅವಶ್ಯಕತೆ ಇಲ್ಲ. ಯಾಕೆಂದರೆ ಹಣಕಾಸು ಖೋತಾದ ಮೂಲಕ ನಾವು ಆಂತರಿಕ ಬೇಡಿಕೆ ಹೆಚ್ಚಿಸುವುದು ಸಾಧ್ಯವಾಗುವುದಾದಲ್ಲಿ ಅದನ್ನು ಯಾಕೆ ಮಾಡಬಾರದು?

ಇದಲ್ಲದೆ ನಮ್ಮಲ್ಲಿ 120 ಶತಕೋಟಿ ಡಾಲರುಗಳ ವಿದೇಶಿ ವಿನಿಮಯ ಶಿಲ್ಕು ಕೊಳೆಯುತ್ತ ಬಿದ್ದಿದೆ. ಆದರೆ ನಮ್ಮ ದೇಶದ ಜನರಿಗೆ ನಾವು ಸಾಲ ಕೊಡುವಂತಿಲ್ಲ. ಬ್ಯಾಂಕುಗಳ ಪ್ರಕಾರ ಗ್ರಾಮೀಣ ಬಡಜನ ಸಾಲ ಪಡೆಯಲು ಅರ್ಹರಲ್ಲ.

ಭಾರತೀಯ ರಿಸರ್ವ್ ಬ್ಯಾಂಕು ಬ್ಯಾಂಕುಗಳ ಲಾಭ ಹೆಚ್ಚಿಸಲು ಸರ್ಕಾರಿ ಸೆಕ್ಯೂರಿಟಿಗಳನ್ನು ಅವುಗಳಿಗೆ ನೀಡುತ್ತಿದೆ. ಈ ಪ್ರಕ್ರಿಯೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಲಾಭದಾಯಕತೆ ಕಡಿಮೆಯಾಗುತ್ತಿದೆ. ಈಗ ರಿಸರ್ವ್ ಬ್ಯಾಂಕಿನ ಲಾಭ ಕಡಿಮೆಯಾದರೆ ಗ್ರಾಮೀಣ ಅಭಿವೃದ್ಧಿಗೆ ಕೇಂದ್ರ ಹಣಕಾಸು ಸಂಸ್ಥೆಯಾದ ನಬಾರ್ಡ್‌ನ ಹಣಕಾಸು ಸ್ಥಿತಿ ಶಿಥಿಲವಾಗುತ್ತದೆ. ಆದ್ದರಿಂದಲೇ ರಿಸರ್ವ್ ಬ್ಯಾಂಕಿನ ಲಾಭ ಹೆಚ್ಚಿಸುವ ಅವಶ್ಯಕತೆ ಇದೆ. ಇದಕ್ಕೆ ಹೆಚ್ಚು ಸರ್ಕಾರಿ ಸೆಕ್ಯೂರಿಟಿಗಳನ್ನು ರಿಸರ್ವ್ ಬ್ಯಾಂಕಿನ ಚೀಲಕ್ಕೆ ಹಾಕುವ ಅವಶ್ಯಕತೆ ಇದೆ.

ಇವೆಲ್ಲವುಗಳನ್ನು ಮಾಡಲು ದೇಶದೊಳಕ್ಕೆ ಮತ್ತು ದೇಶದಿಂದ ಹೊರಕ್ಕೆ ಹರಿದುಹೋಗುವ ಬಂಡವಾಳದ ಮೇಲೆ ನಿರ್ಬಂಧಗಳನ್ನು ಹೇರಬೇಕಾಗುತ್ತದೆ.

ವಿದೇಶಿ ನೇರ ಹೂಡಿಕೆ

ಟೆಲಿಕಮ್ಯೂನಿಕೇಷನ್, ವಿಮಾನಯಾನ ಮತ್ತು ವಿಮಾ ಕ್ಷೇತ್ರಗಳಲ್ಲಿ ವಿದೇಶಿ ನೇರ ಹೂಡಿಕೆ ಹೆಚ್ಚಿಸಿರುವ ಕ್ರಮವೂ ಅಂತಹದ್ದೇ. ಭಾರತದ ವಿಮಾ ಕಂಪನಿಗಳಲ್ಲಿ ಹೆಚ್ಚಿನ ಸಾಮಾಜಿಕ ಕಾಳಜಿ ಮತ್ತು ದಕ್ಷತೆಗಳಿವೆ. ಆದ್ದರಿಂದ ವಿದೇಶಿ ಹೂಡಿಕೆಯ ಅವಶ್ಯಕತೆಯಿಲ್ಲ: ಟೆಲಿಕಮ್ಯೂನಿಕೇಷನ್‌ನಲ್ಲಿ ವಿದೇಶಿ ನೇರ ಹೂಡಿಕೆ ಹೆಚ್ಚುವುದರಿಂದ ನಮ್ಮ ರಕ್ಷಣಾ ವ್ಯವಸ್ಥೆಗೆ ಹೆಚ್ಚು ಅಪಾಯವಿದೆ. ಹಾಗೆಯೇ ವಿಮಾನಯಾನದ ವಿಷಯದಲ್ಲೂ ವಿದೇಶಿ ನೇರ ಹೂಡಿಕೆಯ ಅನಿವಾರ್ಯತೆಯೇನಿಲ್ಲ.

ಬಜೆಟ್ ಸಾರ್ವಜನಿಕ ವಲಯದ ಉದ್ದಿಮೆಗಳ ಪುರನುಜ್ಜೀವನಕ್ಕೆ ಬೋರ್ಡನ್ನು ಸ್ಥಾಪಿಸುವ ಮಾತನಾಡಿದೆ. ಇದು ಒಳ್ಳೆಯ ಕ್ರಮ. ಅದೇ ಸಮಯದಲ್ಲಿ ಎಸ್‌ಟಿಪಿಸಿ ಯ ಷೇರು ಮಾರಾಟದ ಮಾತು ಇದಕ್ಕೆ ವಿರುದ್ಧವಾದ ಧೋರಣೆಯಿಂದ ಬಂದದ್ದು.

ಒಟ್ಟಾರೆಯಾಗಿ ಮತ್ತೆ ಮೊದಲೇ ಹೇಳಿದ ಮಾತಿಗೆ ಬರ ಬೇಕಾಗುತ್ತದೆ. ಮಾನವೀಯ ಮುಖದ ಉದಾರೀಕರಣ" ಅಸಾಧ್ಯವಾದ ಮಾತು.

ಅಲ್ಪ ಸ್ವಲ್ಪ 'ಮಾನವೀಯ ಮುಖ'ದ ಜೊತೆಗೆ ಎನ್‌ಡಿಎ ಸರ್ಕಾರದ ನೀತಿಗಳನ್ನೇ ಮುಂದುವರಿಸಲಾಗಿದೆ ಎಂದು ಹೇಳಬಹುದು.

ಪಿ.ಡಿಯಲ್ಲಿ ಪ್ರಕಟವಾದ ಪ್ರಭಾತ ಪಟ್ನಾಯಕ್‌ರ ಲೇಖನದ ಸಂಗ್ರಹಾನುವಾದ

ಇದು ಉದಾರೀಕರಣದ ವಿಪರ್ಯಾಸ

ವಿಮಾನ ನಿಲ್ದಾಣಗಳ ಖಾಸಗೀಕರಣದ ಬಗ್ಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ತುದಿಗಾಲ ಮೇಲೆ ನಿಂತಿದೆ. ಮೊನ್ನೆ ದೆಹಲಿಗೆ ಬಂದ ಸಿಂಗಾಪೂರದ ಪ್ರಧಾನ ಮಂತ್ರಿ ಗೊ ಚೊಕ್ ಟಾಂಗ್ ಅವರ ಗೌರವಾರ್ಥ ನಮ್ಮ ಪ್ರಧಾನ ಮಂತ್ರಿಗಳು ಔತಣಕೂಟವೊಂದನ್ನು ಏರ್ಪಡಿಸಿದ್ದರು.

ಅದರಲ್ಲಿ ಗೊ ಅವರು ನಮ್ಮ ವಿಮಾನ ನಿಲ್ದಾಣಗಳ ಖಾಸಗೀಕರಣದ ಮಾತೆತ್ತಿದರು. ಸಿಪಿಐ(ಎಂ)ನ ಪಾಲಿಟ್ ಬ್ಯೂರೋ ಸದಸ್ಯರಾದ ಸಿತಾರಾಂ ಯೆಚೂರಿ ಅವರೂ ಅಲ್ಲಿದ್ದರು. "ಮಾನ್ಯ ಪ್ರಧಾನಮಂತ್ರಿಗಳೇ ನಿಮ್ಮ ಸಿಂಗಾಪೂರ್ ವಿಮಾನ ನಿಲ್ದಾಣ ಯಾರ ಆಡಳಿತದಲ್ಲಿದೆ?" ಎಂದು ಯೆಚೂರಿ ಕೇಳಿದಾಗ ಗೊ ಅವರಲ್ಲಿ ಮೌನದ ಉತ್ತರವಷ್ಟೇ ಇತ್ತು.

ಯಾಕೆಂದರೆ ಸಿಂಗಾಪೂರ್ ವಿಮಾನ ನಿಲ್ದಾಣ ಸರ್ಕಾರಿ ಸ್ವಾಮ್ಯದಲ್ಲಿದೆ. ಅಂತೆಯೇ ಜಗತ್ತಿನ ಹಲವು ಅತ್ಯುತ್ತಮ ವಿಮಾನ ನಿಲ್ದಾಣಗಳೂ ಸಹ

ಹೇಗಿದೆ ಈ ವಿಪರ್ಯಾಸ?

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಆಗಸ್ಟ್ 8, 2004**
  ಪ್ರಾದೇಶಿಕ ಅಸಮಾನತೆ ಕುರಿತು ಸಮಾವೇಶ ಸ್ಥಳ : ಗುಲ್ಬರ್ಗಾ
- **ಆಗಸ್ಟ್ 9 ರಿಂದ 24,2004**
  ಅಂಧಶ್ರದ್ಧೆ, ಮೌಢ್ಯದ ವಿರುದ್ಧ ಜನಜಾಗೃತಿ, 24 ರಂದು ಸಮಾರೋಪ ದಾವಣಗೆರೆಯಲ್ಲಿ 4 ಜಾಥಾ
- **ಆಗಸ್ಟ್ 9 ರಿಂದ 14**
  ಪ್ರಚಾರ ಸಪ್ತಾಹ - ಅಖಿಲ ಬಾರತ ಸಿಐಟಿಯು ಕರೆ
  . ವಿಮೆ, ಟೆಲಿಕಾಂ, ವಿಮಾನ ಯಾನಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಹೆಚ್ಚಳದ ವಿರುದ್ಧ
  . ಪಿ.ಎಫ್. ಬಡ್ಡಿ ಶೇ. 12 ಕ್ಕೆ ಆಗ್ರಹಿಸಿ
- **ಆಗಸ್ಟ್ 12,2004**
  ಖಾಸಗೀಕರಣದ ವಿರುದ್ಧ
  ಹೊಸವೇತನ ಒಪ್ಪಂದಕ್ಕೆ ಆಗ್ರಹಿಸಿ ರಾಜ್ಯದ ರಾಜಧಾನಿಗಳಲ್ಲಿ ಬ್ಯಾಂಕ್ ನೌಕರರ ಧರಣಿ
  ಬ್ಯಾಂಕ್ ನೌಕರರ ಐಕ್ಯವೇದಿಕೆಯ ಕರೆ.

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ನಂಜನಗೂಡು : ಮಾಲೀಕರೊಂದಿಗೆ ಪೊಲೀಸರ ಶಾಮೀಲು – ಕಾರ್ಮಿಕ ಚಳುವಳಿ ದಮನಕ್ಕೆ ಯತ್ನ

ಮೈಸೂರು ಮಹಾನಗರದಿಂದ ಕೂಗಳತೆ ದೂರದಲ್ಲಿರುವ ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರು ತಮ್ಮ ನ್ಯಾಯಸಮ್ಮತ ಬೇಡಿಕೆಗಳಿಗೆ ಹೋರಾಟಕ್ಕಿಳಿದರೆ ಅದರ ದಮನಕ್ಕೆ ಪೊಲೀಸ್ ಲಾಠಿ, ಬೂಟುಗಳು ಬೀದಿಗಿಳಿಯುತ್ತವೆ! ಮಾಲೀಕರು ಎಸೆವ ಎಂಜಲು ಕಾಸಿಗೆ ಹಲ್ಲು ಗಿಂಜುತ್ತಾ ಹಪಾಹಪಿಸುವ ಈ 'ನಾಗರೀಕ ಅಧಿಕಾರಿಗಳ' ಅಟ್ಟಹಾಸ ಮಿತಿಮೀರಿದೆ. ಇದಕ್ಕೆ ಸವಾಲು ಹಾಕಿದ ಸಿಐಟಿಯು ನಾಯಕತ್ವದಲ್ಲಿ ಕಾರ್ಮಿಕರು ಹೋರಾಟ ದಿಟ್ಟತನದಿಂದ ಮುನ್ನಡೆಸುತ್ತಿದ್ದಾರೆ. ಇದನ್ನು ಸದೆ ಬಡಿಯಲು ಪ್ರಮುಖರನ್ನು ಅಕ್ರಮವಾಗಿ ಬಂಧಿಸಿ, ಲಾಕಪ್ಪಿಗೆ ತಳ್ಳಿದರು. ಅವರನ್ನು ಭೇಟಿ ಮಾಡಲೆಂದು ಹೋದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಸಿಐಟಿಯು ನಾಯಕರ ಮೇಲೆ ಪೊಲೀಸರು ಮೃಗಗಳಂತೆ ಎರಗಿದ್ದಾರೆ. ಹಲ್ಲೆ ಮಾಡಿ, ಬಂಧಿಸಿ ಸುಳ್ಳು ಕೇಸ್ ಹಾಕಿದ್ದಾರೆ. ಅದರತ್ತ ಈ ವರದಿ...

ರಾಜ್ಯ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್ ಹಾಗೂ ಸಿಐಟಿಯು ಮುಖಂಡರ ಮೇಲೆ ಪೊಲೀಸರ ಹಲ್ಲೆ, ಅಕ್ರಮ ಬಂಧನ, ಸುಳ್ಳು ಮೊಕದ್ದಮೆ ಹೂಡಿಕೆ!

ಈ ಸ್ಪನ್ಸ್‌ಜೆಂಗಿಂಗ್ ಕಾರ್ಖಾನೆ ಕಲ್ಕತ್ತಾ ಮಾಲೀಕವರ್ಗದ ನಂಜನಗೂಡಿನ ಪ್ರತಿಷ್ಠಿತ ಕಾರ್ಖಾನೆಗಳಲ್ಲೊಂದು. ಅಲ್ಲಿ ವೇತನ ಪರಿಷ್ಕರಣೆಯ ಒಪ್ಪಂದದ ಅವಧಿ ಪೂರ್ಣಗೊಂಡಾಗ ಹೊಸದಾಗಿ ಮಾತುಕತೆ ಪ್ರಾರಂಭಿಸುವಂತೆ ಬೇಡಿಕೆಪಟ್ಟಿ ಸಲ್ಲಿಸಿದ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಟನೆ ನಿರಂತರವಾಗಿ ಒತ್ತಾಯಿಸುತ್ತಿತ್ತು. ಮಾತುಕತೆ ಪ್ರಾರಂಭಿಸಲು ನಿರಾಕರಿಸಿದ ಮಾಲೀಕ ಸಿಐಟಿಯ ಸಂಘಟನೆಯ ಜೊತೆ ಸುತಾರಾಂ ಮಾತನಾಡಲಿಲ್ಲ. ಸಂಘಟನೆಯು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ರೂಪಿಸುತ್ತಿದೆ ಎಂದು ಸುಳಿವರಿತ ಮಾಲಿಕ ಭಾಗಶಃ ಲಾಕೌಟ್ ಘೋಷಿಸಿದ. ಈಗ ಎರಡೂವರೆ ತಿಂಗಳು ಗತಿಸಿದರೂ ಲಾಕೌಟ್ ತೆಗೆಯದೆ ಇಲ್ಲದ ತಗಾದೆ ಪ್ರಾರಂಭಿಸುವ ಮಾಲೀಕ ಸಹಾಯಕ ಕಾರ್ಮಿಕ ಆಯುಕ್ತರ ಸಭೆಯಲ್ಲೂ ಅಹಂಕಾರದಿಂದ ವರ್ತಿಸಿದ್ದಾನೆ. ಈಗ ಕಾರ್ಮಿಕ ಮುಖಂಡರ ಮೇಲೆ ಅತಿಕ್ರಮ ಪ್ರವೇಶದಂಥ ಸುಳ್ಳು ದೂರುಗಳನ್ನು ದಾಖಲಿಸಿ ಏಳು ಜನ ಮುಖಂಡರನ್ನು ಬಂಧಿಸಲಾಗಿದೆ. ಪಕ್ಷದ ಸಭೆಯೊಂದರಲ್ಲಿ ಭಾಗವಹಿಸಲು ನಂಜನಗೂಡಿಗೆ ಆಗಮಿಸಿದ್ದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ.ಜಿ.ಎನ್.ನಾಗರಾಜ್, ಸಿಐಟಿಯುನ ಜಿಲ್ಲಾ ಅಧ್ಯಕ್ಷ ಕಾಂ.ಜಯರಾಂ, ಪ್ರಧಾನ ಕಾರ್ಯದರ್ಶಿ ಕಾಂ.ಜಗದೀಶ್ ಹಾಗೂ ವಿಕ್ರಾಂತ್ ಕಾರ್ಖಾನೆ ಮುಖಂಡ ಕಾಂ.ಸೋಮಶೇಖರ್ ಜೊತೆಗೂಡಿ ನಂಜನಗೂಡಿನ ಗ್ರಾಮೀಣ ಪೊಲಿಸ್ ಠಾಣೆಗೆ ವಿಚಾರಿಸಲು ಹೋದಾಗ ಡಿವೈಎಸ್‌ಪಿ ಅನುಪಸ್ಥಿತಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಪ್ರವೋದ್ ಕುಮಾರ್‌ನನ್ನು ಭೇಟಿ ಮಾಡಿದರು. ಮಾತು ಪ್ರಾರಂಭಿಸುವ ಮುಂಚೆಯೇ ಜೋರಾಗಿ ರೇಗಲು ಪ್ರಾರಂಭಿಸಿದ ಈ 'ನಾಗರೀಕ' ಅಧಿಕಾರಿ ಅವಾಚ್ಯ ಶಬ್ದಗಳಿಂದ ನಾಯಕರನ್ನು ನಿಂದಿಸಿ ಬೆದರಿಕೆ ಒಡ್ಡಲು ಆರಂಭಿಸಿದ. ಬಂಧನಕ್ಕೆ ಕಾರಣವನ್ನು ತಿಳಿಸದೆ, ಕೇಳಲು ಹೋದ ಕಾಂ.ಜಿ.ಎನ್. ನಾಗರಾಜ್ ಹಾಗೂ ಸಿಐಟಿಯು ಮುಖಂಡರ ಮೇಲೆ ಅಲ್ಲಿದ್ದ ಪೇದೆಗಳು ಆಕ್ರಮಣ ಮಾಡಿ ಹಲ್ಲೆ ಮಾಡಿದರು. ಇದನ್ನು ಪ್ರತಿಭಟಿಸಿದ ಸಿಐಟಿಯುವಿನ ಮೂವತ್ತು ಜನ ಸಂಗಾತಿಗಳನ್ನು ನಿಂದಿಸುತ್ತ ಅವಾಚ್ಯವಾಗಿ ಬೈಯುತ್ತ ಹೊಡೆಯಲು ಪ್ರಾರಂಭಿಸಿದರು, ಠಾಣೆಯಿಂದ ಕಾರ್ಮಿಕರನ್ನು ಲಾಠಿಯಿಂದ ಥಳಿಸುತ್ತಲೇ ಸುಮಾರು ದೂರ ಅಟ್ಟಿಸಿಕೊಂಡು ಹೋಗಲಾಯಿತು.

ಕೈಗಾರಿಕಾ ಬಂದ್

ನಂಜನಗೂಡಿನ ಪೊಲೀಸರು ಕಳೆದ ಕೆಲವಾರು ವರ್ಷಗಳಿಂದ ಅಲ್ಲಿನ ಮಾಲೀಕವರ್ಗದ ಜೊತೆ ಶಾಮೀಲಾಯಿಸಿದ್ದಾರೆ. ಅನೈತಿಕ ಸಂಬಂಧ ಬೆಳೆಸಿ, ಅವರು ನೀಡುವ ಎಂಜಲು ಕಾಸಿಗೆ ಬಾಯೊಡ್ಡಿ ಕಾರ್ಮಿಕರನ್ನು ಥಳಿಸುವುದು, ಬಂಧಿಸುವುದು, ಸುಳ್ಳು ಮೊಕದ್ದಮೆ ಹೂಡುವುದು ನಡೆಯುತ್ತಲೇ. ಅಲ್ಲಿನ ಡಿವೈಎಸ್‌ಪಿ ತಮ್ಮನ್ನುಸ ಕುಮ್ಮಕ್ಕಿನಿಂದ ಈ ಘಟನೆ ನಡೆದಿದೆ. ವಿಷಯ ತಿಳಿದ ನಂಜನಗೂಡಿನ ಕಾರ್ಮಿಕರು ಪೊಲೀಸರ ದೌರ್ಜನ್ಯವನ್ನು ಪ್ರತಿಭಟಿಸಿ ಮರುದಿನವೇ ಬೆಳಿಗ್ಗೆ ಸಾವಿರಾರು ಸಂಖ್ಯೆಯಲ್ಲಿ ಸೇರಿ ಕೈಗಾರಿಕಾ ಬಂದ್‌ಗೆ ಕರೆಕೊಟ್ಟು ಮೆರವಣಿಗೆ ನಡೆಸಿ ಪೊಲೀಸ್ ಠಾಣೆಗೆ ತೆರಳಿದ್ದಾರೆ.

ಪಕ್ಷದ ರಾಜ್ಯ ಕಾರ್ಯದರ್ಶಿಯ ಮೇಲೆ ಹಾಗೂ ಸಿಐಟಿಯುವಿನ ಜಿಲ್ಲಾ ಪದಾಧಿಕಾರಿಗಳ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಪೊಲೀಸ್ ಅಧಿಕಾರಿಗಳ ಕ್ರಮವನ್ನು ಎಲ್ಲರೂ ಖಂಡಿಸಲೇಬೇಕು.

ಮೈಸೂರು ನಗರದಲ್ಲಿ ವಿಕ್ರಾಂತ್ ಹಾಗೂ ಇನ್ನಿತರ ಕಾರ್ಖಾನೆಗಳ ಕಾರ್ಮಿಕರು, ನೌಕರರು ನೂರಾರು ಸಂಖ್ಯೆಯಲ್ಲಿ ಜಿಲ್ಲಾ ಪೊಲೀಸ್ ಅಧಿಕಾರಿಯ ಕಛೇರಿಯ ಬಳಿ ಸೇರಿ ಪ್ರತಿಭಟನೆ ನಡೆಸಿದ್ದಾರೆ. ನಾಯಕರ ಮೇಲೆ ಹೂಡಲಾಗಿರುವ ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು ಹಾಗೂ ತಪ್ಪಿತಸ್ತ ಅಧಿಕಾರಿಗಳನ್ನು ಅಮಾನತ್ತುಗೊಳಿಸಬೇಕೆಂದು ಆಗ್ರಹಪಡಿಸಲಾಗಿದೆ.

ರಾಜ್ಯದಾದ್ಯಂತವೂ ಪ್ರತಿಭಟನೆ - ವರದಿಗಳು

ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಜಿ.ಎಸ್.ನಾಗರಾಜ್ ಅವರ ಮೇಲೆ ಮೈಸೂರು ಜಿಲ್ಲೆ ನಂಜನಗೂಡು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿ ಇಂದು ಸಂಜೆ 7-30 ಕ್ಕೆ ದೈಹಿಕ ಹಲ್ಲೆ ನಡೆಸಿರುವುದನ್ನು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿದೆ. ಕೂಡಲೇ ಹಲ್ಲೆಗೆ ಒಳಗಾಗಿರುವ ಜಿ.ಎನ್.ನಾಗರಾಜ್ ಮತ್ತು ಮೈಸೂರು ಜಿಲ್ಲಾ ಸಿಐಟಿಯು ಅಧ್ಯಕ್ಷ ಜಯರಾಂ, ಪ್ರಧಾನ ಕಾರ್ಯದರ್ಶಿ ಜಗದೀಶ್ ಮತ್ತು ಇತರರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿ ಶ್ರೀ ಧರ್ಮಸಿಂಗ್‌ರವರಿಗೆ ಫ್ಯಾಕ್ಸ್ ಮೂಲಕ ಒತ್ತಾಯಿಸಲಾಗಿದೆ.

ಅನಾಗರಿಕವಾಗಿ ವರ್ತಿಸಿದ ನಂಜನಗೂಡು ಗ್ರಾಮೀಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಪ್ರವೋದ್ ಕುಮಾರ್‌ರವರನ್ನು ಕೂಡಲೇ ಅಮಾನತ್ತು ಮಾಡಲು ಹಾಗೂ ಇತರೆ ಸಂಬಂಧಪಟ್ಟ ಪೊಲೀಸ್ ಸಿಬ್ಬಂದಿ ಮೇಲೆ ಕ್ರಮವಹಿಸಲು ಸಿಐಟಿಯು ಕರ್ನಾಟಕ ರಾಜ್ಯಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ. ನಾಳೆ ರಾಜ್ಯಾದ್ಯಂತ ನಂಜನಗೂಡು ಪೊಲೀಸರ ದೌರ್ಜನ್ಯದ ವಿರುದ್ಧ ಪ್ರತಿಭಟನೆ ನಡೆಸಲು ಕರೆ ನೀಡಲಾಗಿದೆ ಎಂದು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಪ್ರಸನ್ನಕುಮಾರ್ ತಿಳಿಸಿದ್ದಾರೆ.



ಬೆಂಗಳೂರು

ಮುಖ್ಯಮಂತ್ರಿ ಮನೆಮುಂದೆ ಪ್ರತಿಭಟನೆ

ಬೆಂಗಳೂರು: ರಾಜ್ಯದಾದ್ಯಂತ ನೀಡಿದ ಪ್ರತಿಭಟನೆಯ ಕರೆಗೆ ಉತ್ತಮ ಪ್ರತಿಕ್ರಿಯೇ ದೊರೆತಿದೆ. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್ ಮೊದಲಾದವರ ನೇತೃತ್ವದಲ್ಲಿ ನೂರಾರು ಜನರು ಘೋಷಣೆ ಕೂಗುತ್ತಾ ಮುಖ್ಯಮಂತ್ರಿಯವರ ಮನೆಯ ಮುಂದೆ ಪ್ರತಿಭಟನೆ ನಡೆಸಿದರು. ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡಲು ಆಗ್ರಹಿಸಲಾಯಿತು. ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಗಮನ ನೀಡದೆ, ದಮನಕಾರಿ ಕ್ರಮಗಳನ್ನು ಕೈಗೊಂಡಲ್ಲಿ ಹಿಂದಿನ ಕಾಂಗ್ರೆಸ್ ಸರಕಾರ ಅನುಭವಿಸಿದ್ದನ್ನೆ, ಮೈತ್ರಿಕೂಟದ ಸರಕಾರವೂ ಅನುಭವಿಸಬೇಕಾಗುತ್ತದೆ ಎಂದು ಮುಖಂಡರು ಎಚ್ಚರಿಸಿದರು.

ಗುಲ್ಬರ್ಗ; ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಾರುತಿ ಮಾನ್ಪಡೆ, ಚನ್ನಪ್ಪನವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿ ನೂರಾರು ಜನ ಧರಣೆ ನಡೆಸಿ ಮನವಿ ಸಲ್ಲಿಸಲಾಯಿತು.

ತುಮಕೂರು: ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಬಿ.ಉಮೇಶ, ಸುಬ್ರಮಣ್ಯ ಮೊದಲಾದವರ ನೇತೃತ್ವದಲ್ಲಿ ಪ್ರತಿಭಟನೆಯ ನಡೆಯಿತು. ಸಿಐಟಿಯು ಮತ್ತು ಪಕ್ಷದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿಜಾಪುರ: ತಹಶೀಲ್ದಾರ್ ಕಛೇರಿಗೆ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಮಹಿಳಾ ಸಂಘಟನೆಯ ಜಿಲ್ಲಾ ಸಮ್ಮೇಳನದ ಅದಿವೇಶನ ಪೊಲೀಸ್ ದೌರ್ಜನ್ಯವನ್ನು ಖಂಡಿಸಿ, ತಪ್ಪತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಲಾಯಿತು.

ಬಳ್ಳಾರಿ, ರಾಯಚೂರು, ಹಾಸನ, ಧಾರವಾಡ ಮೊದಲಾದ ಕೇಂದ್ರಗಳಲ್ಲೂ ಪ್ರತಿಭಟನೆ ನಡೆದ ವರದಿಗಳು ಬಂದಿವೆ.

'ನಿರ್ಣಯ' ಜಾರಿ ಮಾಡುವ ರಾಜಕೀಯ ಇಚ್ಛಾಶಕ್ತಿ ಮತ್ತು ಎಚ್ಚರಿಕೆ ಅಗತ್ಯ- ಎಸ್‌ಎಫ್‌ಐ

ವೃತ್ತಿ ಶಿಕ್ಷಣ ಬಿಕ್ಕಟ್ಟನ್ನು ಪರಿಹರಿಸುವ ನಿಟ್ಟಿನಲ್ಲಿ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅಂಕುಶ ಹಾಕಲು ರಾಜ್ಯ ವಿಧಾನಸಭೆಯಲ್ಲಿ ಕೈಗೊಂಡಿರುವ ಶಾಸನವನ್ನು ಭಾರತ ವಿದ್ಯಾರ್ಥಿ ಫೆಡರೇಷನ್(SFI) ಕರ್ನಾಟಕ ರಾಜ್ಯಸಮಿತಿಯು ಸ್ವಾಗತಿಸುತ್ತದೆ. ಆದರೆ ಈ ಶಾಸನದ ಜಾರಿಗೆ ಸರ್ಕಾರ ರಾಜಕೀಯ ಇಚ್ಛಾಶಕ್ತಿ ತೋರಿಸದಿದ್ದಲ್ಲಿ ಶಾಸನವು ಮತ್ತಷ್ಟು ಗೊಂದಲ, ಸಮಸ್ಯೆಯನ್ನು ಸೃಷ್ಟಿಸುವ ಸಾಧ್ಯತೆ ಇದ್ದು, ಹಾಗಾಗದಂತೆ ಎಚ್ಚರಿಕೆ ವಹಿಸಬೇಕೆಂದು ಎಸ್‌ಎಫ್‌ಐ ಸರಕಾರವನ್ನು ತೀವ್ರವಾಗಿ ಒತ್ತಾಯಿಸಿದೆ.

ವಿಧಾನ ಸಭೆಯು ರಚಿಸಿರುವ ಈ ಶಾಸನವನ್ನು 'ಸುಪ್ರಿಂಕೋರ್ಟ್'ನಲ್ಲಿ ಆಡಳಿತ ಮಂಡಳಿಗಳು ಪ್ರಶ್ನಿಸಿದಲ್ಲಿ ಅದು ನಿಲ್ಲಬಲ್ಲದೇ ಎಂಬುದು ಅನುಮಾನಾಸ್ಪದವಾಗಿದ್ದು, ರಾಜಕೀಯ ಕ್ರಮಗಳ ಮೂಲಕ ಖಾಸಗಿ ಆಡಳಿತ ಮಂಡಳಿಗಳು ಸುಪ್ರಿಂ ಕೋರ್ಟಿಗೆ ಹೋಗದಂತೆ ತಡೆಯಬೇಕೆಂದು ಎಸ್ಸೆಫೈ ಒತ್ತಾಯಿಸಿದೆ.

ಈ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಬಳಸುತ್ತಿರುವ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಆ ಸೌಲಭ್ಯ ವಾಪಸ್ ಪಡೆಯಬೇಕು. ಅದೇ ರೀತಿ ಉಚಿತ ಭೂಮಿ ಮತ್ತಿತರ ಸೌಲಭ್ಯ ಪಡೆಯುತ್ತಿರುವ ಕಾಲೇಜುಗಳಿಂದ ಸೌಲಭ್ಯವನ್ನು ವಾಪಸ್ ಪಡೆಯಬೇಕು. ಮುರಗೋಡ್ ಸಮಿತಿಗೆ ಖಾಸಗಿ ಆಡಳಿತ ಮಂಡಳಿಗಳು ಕೊಟ್ಟಿರುವ ಉತ್ಪ್ರೇಕ್ಷಿತ

ವೃತ್ತಿಶಿಕ್ಷಣ ಬಿಕ್ಕಟ್ಟು

ಲೆಕ್ಕಪತ್ರಗಳ ಬಗೆಗೆ ಸರ್ಕಾರ ಸಮಗ್ರ ತನಿಖೆ ಆರಂಭಿಸಬೇಕು. ಇಂತಹ ಕ್ರಮಗಳಿಂದ ಮಾತ್ರ ಉದ್ಧಟತನದಿಂದ ವರ್ತಿಸುತ್ತಿರುವ ಖಾಸಗಿ ಕಾಲೇಜುಗಳನ್ನು ನಿಯಂತ್ರಿಸಲು ಸಾಧ್ಯ ಎಂದು ಎಸ್ಸೆಫೈ ಅಭಿಪ್ರಾಯಪಟ್ಟಿದೆ.

ಮುರಗೋಡ್ ಸಮಿತಿಯ ಶಿಫಾರಸ್ಸಿನಂತೆ ಶುಲ್ಕವನ್ನು ನಿಗದಿಗೊಳಿಸಲು ಸರ್ಕಾರ ನಿರ್ಧರಿಸಿದ್ದು ಶುಲ್ಕ ಏರಿಕೆ ಸಮಸ್ಯೆಗೆ ಈ ಸ್ಥಿತಿಯಲ್ಲಿ ಯಾವುವು ಪರಿಹಾರವಿಲ್ಲದಂತಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ವಿಭಾಗಗಳ ಬಡ- ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಭರಿಸಲು ಸರ್ಕಾರ ಸಹಾಯ ನೀಡಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ ಸರ್ಕಾರವನ್ನು ತೀವ್ರವಾಗಿ ಒತ್ತಾಯಿಸುತ್ತದೆ.

ಸರ್ಕಾರ ಮತ್ತು ಕಾಮೆಡ್-ಕೆಗಳ ನಡುವಿನ ತಿಕ್ಕಾಟದಲ್ಲಿ ಒಂದೊಮ್ಮೆ ಸರ್ಕಾರ ದುರ್ಬಲವಾಗಿ ವರ್ತಿಸಿದಲ್ಲಿ ಈಗಾಗಲೇ ಗೊಂದಲ ಮತ್ತು ಸಮಸ್ಯೆಯಲ್ಲಿರುವ ವಿದ್ಯಾರ್ಥಿಗಳು ಮತ್ತೂ ತೊಂದರೆಗೆ ಸಿಲುಕಲಿದ್ದು ಹಾಗಾಗದಂತೆ ಸರ್ಕಾರ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು, ಈ ವಿಚಾರದಲ್ಲಿ ಸೂಕ್ತ ಕೇಂದ್ರೀಯ ಶಾಸನಕ್ಕಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್(SFI) ಕರ್ನಾಟಕ ರಾಜ್ಯಸಮಿತಿ ರಾಜ್ಯ ಸರ್ಕಾರಕ್ಕೆ ಹೇಳಿದೆ.

ಇದಲ್ಲದೆ ಸರ್ಕಾರಿ ವೈದ್ಯಕೀಯ - ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ಹೆಚ್ಚಳಕ್ಕೆ ಹಾಗೂ ಹೊಸ ಸರ್ಕಾರಿ ಕಾಲೇಜುಗಳ ಸ್ಥಾಪನೆ ಸರ್ಕಾರ ತುರ್ತು ಗಮನ ನೀಡಬೇಕೆಂದು ಎಸ್‌ಎಫ್‌ಐ ಈ ಮೂಲಕ ಆಗ್ರಹಿಸಿದೆ.

ಶಿಕ್ಷಣಕ್ಕೆ ಬಜೆಟ್ ಕಡಿತ ವಿರೋಧಿಸಿ-ವೃತ್ತಿ ಶಿಕ್ಷಣ ಸಮಸ್ಯೆ ಬಿಕ್ಕಟ್ಟಿಗೆ ಕೇಂದ್ರೀಯ ಶಾಸನಕ್ಕಾಗಿ ಆಗ್ರಹಿಸಿ

ರಾಜ್ಯವ್ಯಾಪಿ ಯಶಸ್ವಿ ಕಾಲೇಜ್ ಬಂದ್

ರಾಜ್ಯದ ಬಜೆಟ್‌ನಲ್ಲಿ ಶಿಕ್ಷಣದ ಹಣಕಾಸು ಕಡಿತ - ನಗರ ಪ್ರದೇಶಗಳ ಅನುದಾನಿತ ಕಾಲೇಜುಗಳಿಗೆ ಶೇ.15 ರಷ್ಟು ಅನುದಾನ ಕಡಿತ ವಿರೋಧಿಸಿ ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಪರಿಹಾರವಾಗಿ ಕೇಂದ್ರೀಯ ಶಾಸನ ತರಬೇಕೆಂದು ಒತ್ತಾಯಿಸಿ, ರಾಜ್ಯ ಬಜೆಟ್ ಶೇ.30 ಹಾಗೂ ಕೇಂದ್ರ ಬಜೆಟ್‌ನ ಶೇ.10 ರಷ್ಟನ್ನು ಶಿಕ್ಷಣಕ್ಕೆ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯವ್ಯಾಪಿ ಕಾಲೇಜ್ ಬಂದ್ ಹೋರಾಟ ನಡೆಸಲು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಕರ್ನಾಟಕ ರಾಜ್ಯ ಸಮಿತಿ ನೀಡಿದ್ದ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು ರಾಜ್ಯವ್ಯಾಪಿ ಕಾಲೇಜ್ ಬಂದ್ ಯಶಸ್ವಿಯಾಗಿದೆ.

ಬೆಂಗಳೂರು ನಗರದ ವಾಸವಿ-ವಿ.ವಿ.ಪುರಂ ಕಾಲೇಜು, ನ್ಯಾಷನಲ್, ವಾಣಿವಿಲಾಸ್, ಎಪಿಎಸ್, ಮುಂತಾದ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ನಗರದ ಪ್ರೊಫೆಸರ್ ಶಿವಶಂಕರ್ ವೃತ್ತದಲ್ಲಿ ಶಿಕ್ಷಣ ವಿರೋಧಿ ಬಜೆಟ್‌ನ ಭೂತದಹನ ನಡೆಸಿದ್ದಾರೆ. ಸರ್ಕಾರಿ ಕಲಾ ಕಾಲೇಜು, ಸರ್ಕಾರಿ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ-ವಾಣಿಜ್ಯ-ವಿಜ್ಞಾನ ಕಾಲೇಜು ಹಾಗೂ ಗೃಹವಿಜ್ಞಾನ ಕಾಲೇಜು - ವಿಶ್ವ ವಿದ್ಯಾಲಯ ಕಾನೂನು ಕಾಲೇಜು ಮುಂತಾದ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ಭೂತದಹನ ನಡೆಸಿದರು. ಎಸ್.ಜೆ.ಆರ್.ಸಿ. ಕಾಲೇಜು, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜು, ಎಂ.ಎಲ್.ಎ.ಕಾಲೇಜು ರಸ್ತೆ ತಡೆ ನಡೆಸಿದ್ದಾರೆ. ಕೆ.ಆರ್.ಪುರಂ ಪ್ರದೇಶದಲ್ಲಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟಿಸಿದ್ದಾರೆ. ಆನೇಕಲ್‌ನಲ್ಲಿ ಕಾಲೇಜ್ ಬಂದ್ ಹೋರಾಟ ಯಶಸ್ವಿಯಾಗಿದೆ.

ಅದೇ ರೀತಿ ಹಾಸನ ನಗರದಲ್ಲಿ ಕಾಲೇಜು



ಹಾವೇರಿಯಲ್ಲಿ ವಿದ್ಯಾರ್ಥಿಗಳ ಮೆರವಣಿಗೆ

ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಕಾಲೇಜು ಬಹಿಷ್ಕರಿಸಿ ಸುಮಾರು 700 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೆದ್ದಾರಿ ಬಂದ್ ಸಂಪೂರ್ಣ ಯಶಸ್ವಿಯಾಗಿದ್ದು ಸುಮಾರು ಒಂದೂವರೆ ಸಾವಿರ ವಿದ್ಯಾರ್ಥಿಗಳು ಪಾಲ್ಗೊಂಡ ಪ್ರತಿಭಟನೆ ನಡೆದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ನಗರದಲ್ಲಿ ಹೂವಿನ ಹಡಗಲಿ- ಹೊಸಪೇಟೆ ಮುಂತಾದ ಕಡೆ ಕಾಲೇಜ್ ಬಂದ್ ಹೋರಾಟ ನಡೆದಿದ್ದು ಸಾವಿರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಮಂಡ್ಯ ನಗರ- ಮಳವಳ್ಳಿ, ಭಾರತಿನಗರ - ಮದ್ದೂರುಗಳಲ್ಲಿ ಕಾಲೇಜ್ ಬಂದ್ ಯಶಸ್ವಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಕುಮಟಾ- ಹೊನ್ನಾವರ ದಾಂಡೇಲಿಗಳಲ್ಲಿ ಪ್ರತಿಭಟನೆ ಯಶಸ್ವಿಯಾಗಿದೆ. ಉಡುಪಿ ನಗರದಲ್ಲಿ ಕಾಲೇಜ್ ಬಂದ್ ಯಶಸ್ವಿಯಾಗಿದ್ದು ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಗುಲ್ಬರ್ಗಾ ನಗರದಲ್ಲಿ ಕಾಲೇಜ್ ಬಂದ್ ಯಶಸ್ವಿಯಾಗಿದ್ದು ನೂರಾರು ವಿದ್ಯಾರ್ಥಿಗಳು ಪ್ರತಿಭಟನಾ ಮೆರವಣಿಗೆ ನಡೆಸಿ ಭೂತದಹನ ನಡೆಸಿದ್ದಾರೆ. ಶಹಪುರದಲ್ಲಿಯೂ ಕಾಲೇಜು ಬಂದ್ ನಡೆದಿದೆ. ತುಮಕೂರು ನಗರದಲ್ಲಿ ಸಹ ಬಂದ್ ಯಶಸ್ವಿಯಾಗಿದ್ದು ಪ್ರತಿಭಟನೆ ನಡೆದಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಗದಗ್ ಜಿಲ್ಲೆಯ ಗದಗ್ ನಗರ ಹಾಗೂ ಗಜೇಂದ್ರಗಡಗಳಲ್ಲಿ ಕಾಲೇಜ್ ಬಂದ್ ಯಶಸ್ವಿಯಾಗಿದ್ದು, ಸಾವಿರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ಕೋಲಾರ ಜಿಲ್ಲೆಯ ಬಾಗೇಪಲ್ಲಿ ಶಿಡ್ಲಘಟ್ಟ,ಗುಡಿಬಂಡೆ ಮುಂತಾದ ಕಡೆ ಕಾಲೇಜ್ ಬಂದ್ ಹೋರಾಟ ಯಶಸ್ವಿಯಾಗಿದ್ದು, ಪ್ರತಿಭಟನೆಗಳು ನಡೆದಿವೆ.

ಸಿಕ್ಕಿಬಿದ್ದ ಅಕ್ಕಿ ಕಳ್ಳರು - ರೈತ ಕೂಲಿಕಾರರ ಸಂಘಟನೆಗಳ ಸಾಹಸ


ತೆಲಗಿ ಹಗರಣಕ್ಕೆ ಮತ್ತೆ ಚಾಲನೆ ಸಿಕ್ಕಿ ಅಕ್ಕಿ ಹಗರಣ ಇನ್ನೇನು ತೆರೆಗೆ ಸರಿಯಿತು ಎಂದು

ನಂಬಿಸುತ್ತಿರುವಾಗಲೇ ಶಹಪುರದಲ್ಲಿ ಸಿಕ್ಕೇ ಬಿದ್ದರಲ್ಲ ಅಕ್ಕಿ ಕಳ್ಳರು! ರೈತ ಸಂಘದ ಕಾರ್ಯಕರ್ತರು ಹೇಗೆ ಹಿಡಿದಿಬಿಟ್ಟರು ನೋಡಿ....

ಶಹಾಪೂರ ತಾಲೂಕಿನಲ್ಲಿ 2 ವರ್ಷಗಳಿಂದಲೂ ಬರಗಾಲ ಕಾಮಗಾರಿಗೆ ಬಂದ ಆಹಾರ ಧಾನ್ಯ ಹಾಗೂ ಎಲ್ಲಾ ಹಳ್ಳಿಗಳಿಗೆ ಬಂದ ನ್ಯಾಯ ಬೆಲೆ ಅಂಗಡಿ ಅಂತ್ಯೋದಯ ಕಾರ್ಡ್, ಗರ್ಭಿಣಿ ಸ್ತ್ರೀಯರಿಗೆ ಹಾಗೂ ರೇಶನ್‌ಗಾಗಿ ಬಂದ ಅಕ್ಕಿ ಕಳ್ಳ ಸಂತೆ ವ್ಯಾಪಾರದ ಮೂಲಕ ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರಕ್ಕೆ ಹೋಗುತ್ತಿರುವುದನ್ನು ತಡೆಯಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಸರ್ಕಾರಕ್ಕೆ ಒತ್ತಾಯಿಸುತ್ತಾ ಬಂದಿತು. ಆದರೆ ಭ್ರಷ್ಟ ಜನಪ್ರತಿನಿಧಿಗಳ ಭ್ರಷ್ಟ ಅಧಿಕಾರಿಗಳ ಕುತಂತ್ರದಿಂದ ಕಳ್ಳ ಸಂತೆ ವ್ಯಾಪಾರ ನಡೆದಿಲ್ಲವೆಂಬ ಸಬೂಬ ಹೇಳುತ್ತಾ ಬಂದಿದ್ದರು.

ಆದರೆ ದಿ : 27.07.04 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯವರಾದ ಚನ್ನಪ್ಪಾ ಆನೆಗುಂದಿಯವರು ಬೆಳಿಗ್ಗೆ 6.00 ಗಂಟೆಗೆ ರೈತ ಸಂಘದ ಸದಸ್ಯತ್ವಕ್ಕಾಗಿ ಹೊರಟಿದ್ದರು ಹಾಗೇ ಕಳೆದ 6 ತಿಂಗಳಿಂದ ಕಳ್ಳ ಸಾಗಾಣಿಕೆ ಗುಂಪು ಹಿಡಿಯಲು ಪ್ರಯತ್ನವನ್ನು ಸಂಘಟನೆಗಳು ಮಾಡುತ್ತಿದ್ದವು. ಅಂದು ಲಾರಿ ನಂ. ಕೆಎ 28, ಎ. 7981 ಲಾರಿಯಲ್ಲಿ ಸೈದಾಪುರ ಗ್ರಾಮದಲ್ಲಿ ಅಕ್ಕಿ ತುಂಬುತ್ತಿರುವುದನ್ನು ಕಂಡು ತಕ್ಷಣ ಆ ಗ್ರಾಮದಿಂದ ಭೀಮರಾಯನ ಗುಡಿ ಪೊಲೀಸ್ ಸ್ಟೇಷನ್ ಪೊಲೀಸರಿಗೆ ತಿಳಿಸಲಾಯಿತು. ಆದಾಗ್ಯೂ ಅವರು ಗಮನಹರಿಸದೇ ಇದ್ದುದರಿಂದ ಎಸ್.ಪಿ. ಯವರಿಗೆ ಸಂಪರ್ಕಿಸಲು ಯತ್ನಿಸಿದರೂ ತಕ್ಷಣ ಸಿಗಲಿಲ್ಲ. ಬಳಿಕ ಕಾಂ। ನೀಲಾರವರ ಪ್ರಯತ್ನದಿಂದ ಎಸ್.ಪಿ. ಯವರು ಇನ್ಸ್‌ಪೆಕ್ಟರ್ ಸುಧೀರ್‌ರವರಿಗೆ ನಿರ್ದೇಶಿಸಿದಂತೆ ಅವರು ಸಿಪಿಐ ಸುಧೀರ ಹೆಗ್ಗೆಯವರು ತಕ್ಷಣ ಸ್ಪಂದನ ಮಾಡಿ ಪೊಲೀಸರು 2 ನಿಮಿಷದಲ್ಲಿ ತಯ್ಯಾರಾಗಬೇಕೆಂದು ಹೇಳಿ, ಲಾರಿ ಹಿಡಿಯಲು ಸೈದಾಪುರ ಗ್ರಾಮಕ್ಕೆ ನಮ್ಮ ಜೊತೆಗೆ ಬಂದರು. ಮಧ್ಯದಲ್ಲಿ ಲಾರಿ ಹಿಡಿದು ನಂತರ ಸೈದಾಪುರ ಗ್ರಾಮದಲ್ಲಿ ವಿಚಾರಿಸಿದಾಗ ಯಾರು ಏನು ಸುದ್ದಿ ಬಾಯಿ ಬಿಡಲಿಲ್ಲ. ಆಗ ಮುಖಂಡರು ಪೊಲೀಸ್‌ರಿಗೆ ಅಕ್ಕಿ ಇಡಲಾಗಿರುವ ಮನೆಗಳನ್ನು ಜಪ್ತಿ ಮಾಡಲು ಒತ್ತಾಯಿಸಿದರು. ಆಗ ಪಿ.ಎಸ್.ಐ. ತಮ್ಮಣ್ಣಾ ಸಿ.ಪಿ.ಐ. ಸುಧೀರ ಹೆಗ್ಗೆಯವರು ಮನೆ ಮನೆಗೆ ಬಂದರು. ಆಗ ಚನ್ನಪ್ಪನವರು ಕೀಲಿ ಮುರಿದು ನೋಡಿ ಎಂದು ಒತ್ತಾಯಿಸಿದ್ದರಿಂದ ನೋಡಲಾಗಿ 1) ಅಂಬಲಪ್ಪಾ ವಡ್ಡರ ಮನೆಯಲ್ಲಿ 86 ಚೀಲ 2) ಮಾರ್ಥಂಡಪ್ಪ ತಂ. ಈರಣ್ಣ ಗೌಡರ ಮನೆಯಲ್ಲಿ ಸೊಸೈಟಿ ಡೀಲರ್ ನ್ಯಾಯ ಬೆಲೆ ಅಂಗಡಿ ಮಾಲಿಕನ ಮನೆಯಲ್ಲಿ 46 3) ಹಣ್ಮಂತ. ಬಾಲಪ್ಪ ಪೂಜಾರಿ ಮನೆಯಲ್ಲಿ ಸುಮಾರು 100 ಚೀಲ ಅಕ್ಕಿ ಸಿಕ್ಕಿತು.





ಆಗ ಪೊಲೀಸರಿಗೆ ಖಾತರಿಯಾಗಿ ದಾರಿ ಮಧ್ಯದಲ್ಲಿ ಟಾಟಾ ಸುಮೊ ನಂ. ಕೆಎ 28, ಎಂ. 3314 ಕಳ್ಳ ಸಾಗಾಣಿಕೆ ಸಂಬಂಧಪಟ್ಟಂತೆ ಇದೆ ಎಂದು ಸಂಘಟನೆಯ ನಾಯಕರಾದ ಚೆನ್ನಪ್ಪ, ದವಲಸಾಬ್ ಮುಂತಾದವರು ಹೇಳಿದರೂ ಮೊದಲು ಸಿಪಿಐ ನಂಬಲಿಲ್ಲ, ಕೊನೆಗೆ ಲಾರಿ ಮತ್ತು ಟಾಟಾ ಸುಮೊ ಪಾಸಿಂಗ್ ಒಂದೇ ಇದ್ದುದ್ದರಿಂದ ತಡೆದು ವಿಚಾರಿಸಿದಾಗ ಬಾಯಿ ಬಿಟ್ಟಿದ್ದರು. ಅಕ್ಕಿ ಕಳ್ಳ ಸಾಗಾಣಿಕೆ ತಾನೇ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಲಾರಿಯಲ್ಲಿ 3 ಜನ ಹಾಗೂ ಸುಮೊದಲ್ಲಿ 2 ಜನರನ್ನು ಬಂಧಿಸಲಾಗಿದೆ. ಲಾರಿ ಮತ್ತು ಟಾಟಾ ಸುಮೊ ಪೊಲೀಸ್ ಬಂಧನದಲ್ಲಿವೆ. 2 ಮೊಬೈಲ್ ಸಿಕ್ಕಿವೆ. ಅದರಲ್ಲಿಯ ನಂಬರುಗಳನ್ನು ಗಮನಿಸಿ ಉನ್ನತ ವ್ಯಕ್ತಿಗಳ ಸಂಪರ್ಕವಿದೆ ಎಂದು ಸಾಬೀತಾಗುತ್ತದೆ. 30 ಸಾವಿರ ರೂಪಾಯಿ ಜಪ್ತಿ ಕಾಲಕ್ಕೆ ಸಿಕ್ಕಿದೆ.

ಟಾಟಾ ಸುಮೊ ಬಿಜೆಪಿ ಮುಖಂಡರಿಗೆ ಸೇರಿದ್ದಾಗಿದೆ. ಇನ್ನು ಶಹಾಪೂರ ಪುರಸಭೆಯ ಮಾಜಿ ಅಧ್ಯಕ್ಷ ಹಾಗೂ ಶಹಾಪುರ 1 ನೇ ನಂ. ಶ್ರೀಮಂತ, ದೊಡ್ಡ ಸೀಮೆಎಣ್ಣೆ ಕಳ್ಳಸಾಗಣಿಕೆದಾರ ಆದರ್ಶ ಲಾಡ್ಜ್ ಮಾಲಿಕನಾದ ಫೇವರ್ ಚಂದ್ ಜೈನ್ ಇವರು ಶಹಾಪುರ ತಾಲೂಕಿನ ಬರಗಾಲ ಕಾಮಗಾರಿ ಹಾಗೂ ನ್ಯಾಯ ಬೆಲೆ ಅಂಗಡಿಗಳ ಆಹಾರಧಾನ್ಯ ಖರೀದಿ ಮಾಡಿ ಸೈದಾಪೂರ ಗ್ರಾಮದ ನ್ಯಾಯಬೆಲೆ ಅಂಗಡಿ ಡೀಲರ್‌ನಾದ ಮಾರ್ಥಂಡಪ್ಪ ಈರಣ್ಣಗೌಡನ ಸೈದಾಪುರ ಗ್ರಾಮದ ಮೂಲಕ ಮಹಾರಾಷ್ಟ್ರಕ್ಕೆ ಅಕ್ಕಿ ಕಳಿಸುತ್ತಿದ್ದು ತಿಳಿದುಬಂದಿದೆ.

ಆಹಾರ ಇಲಾಖೆ ಗುಲಬರ್ಗಾ ಅಧಿಕಾರಿಗಳು ಹಾಗೂ ಶಹಾಪುರದಲ್ಲಿ ಪ್ರಾಂತ ರೈತ ಸಂಘ, ಕೂಲಿಕಾರರ ಸಂಘ ಚಳುವಳಿ ಮಾಡಿ ಸಸ್ಪೆಂಡ್ ಮಾಡಿದ್ದರಿಂದ ಹಾಸನಕ್ಕೆ ವರ್ಗವಾಗಿದ್ದರು. ಅವನು ಪುನಃ ಗುಲಬರ್ಗಾಕ್ಕೆ ಬಂದು ಶಹಾಪುರದ ಆದರ್ಶ ಲಾಡ್ಜ್‌ನಲ್ಲಿ 2 ವರ್ಷದಿಂದ ರೂಂ ಮಾಡಿಕೊಂಡು ಕಳ್ಳ ಸಾಗಾಣಿಕೆಗೆ ಫೇವರ್‌ಚಂದ್ ಜೈನ್‌ನೊಡನೆ ಶಾಮಿಲಾಗಿದ್ದಾನೆ. ಇನ್ನು ಜನತಾದಳ(ಎಸ್)ನ ಶಾಸಕನಾದ ಶರಣಬಸಪ್ಪಾ ದರ್ಶನಾಪೂರವರ ಕೃಪಾ ಕಟಾಕ್ಷ ಇವರಿಗಿದೆ ಎಂದು ಜನತೆಯು ಮಾತನಾಡುತ್ತಿದೆ.

ಈ ಹಿನ್ನೆಲೆಯಲ್ಲಿ ತಕ್ಷಣ ಇಲ್ಲಿನ ಅಕ್ಕಿ ಹಗರಣವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಿ ಉನ್ನತ ವ್ಯಕ್ತಿಗಳನ್ನು ಬಂಧಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘ ಒತ್ತಾಯಿಸಿವೆ.

■ **ಚನ್ನಪ್ಪ ಎ**
■ **ದಾವಲಸಾಬ್**

ಧರೆ ಹೊತ್ತಿ ಉರಿವಾಗ

ಧರೆ ಹೊತ್ತಿ ಉರಿದರೂ ಬರಗಾಲ ಬಂದು
ಸಂಸದರ ಸವಲತ್ತು ಹೆಚ್ಚುತಿದೆ ಇಂದು
ಕಾರಣವು ಮನುಷ್ಯತ್ವ ಸತ್ತವರ ಕೈಲಿ
ಸಿಕ್ಕಿದ್ದು ಈ ಮಹಾನ್ ಭಾರತದ ಕೀಲಿ.

- ವಿಡಂಬಾರಿ

ಜೂಜು

ಬಾಳನ್ನು ಬೆಳಗಿಸಲು ಬಹುಕಾಲ ಬೇಕು
ಹಾಳುಗೆಡವಲು ಮಗನೆ ಕ್ಷಣವೊಂದೆ ಸಾಕು
ನೂರಾರು ಕವಲೊಡೆದ ದಾರಿಗಳು ಮುಂದು
ರಾಜ ಮಾರ್ಗವು ಮಾತ್ರ ಒಂದೇ ಒಂದು.

- ವಿಡಂಬಾರಿ


ಚುನಾವಣೆಯಲ್ಲಿ ಭಾರತದ ಜನತೆ ನೀಡಿದ ತೀರ್ಪನ್ನು ಗೌರವಿಸುವ, ಅದನ್ನು ಒಪ್ಪಲು ಬಿಜೆಪಿ ತಯಾರಿಲ್ಲವೆಂದು ಹೆಜ್ಜೆಹೆಜ್ಜೆಗೂ ಸಾಬೀತುಪಡಿಸುತ್ತಿದೆ. ಅದರ ಹತಾಶ ಕ್ರಮಗಳು ಸಂಸದೀಯ ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುವಂತಹವು! ಈಚೆಗಿನ ಬೆಳವಣಿಗೆಗಳತ್ತ ಹಿರಿಯ ನಾಯಕ ಸುರ್ಜಿತ್‌ರ ಅವಲೋಕನ

ಮತ್ತೊಮ್ಮೆ ಬಿಜೆಪಿ ಮನೋಭಾವವನ್ನು ಪ್ರದರ್ಶಿಸಿದ ಅಡ್ವಾಣಿ

ಸಂಸದೀಯ ಪ್ರಜಾಪ್ರಭುತ್ವ ಬುಡಮೇಲಮಾಡುವತ್ತ...

ಆರುವರ್ಷಗಳ ಕಾಲ ಅಧಿಕಾರದಲ್ಲಿದ್ದ ನಂತರ ಬಿಜೆಪಿಗೆ ಲೋಕಸಭಾ ಚುನಾವಣೆಗಳಲ್ಲಿ ತನ್ನ ಸೋಲನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಇತ್ತೀಚಿನ ಘಟನೆಗಳ ಸರಣಿಯಿಂದ ಸ್ಪಷ್ಟವಾಗುತ್ತದೆ. ಮುಖ್ಯ ಪ್ರತಿಪಕ್ಷವಾಗಿರುವ ಬಿಜೆಪಿಗೆ ಸಂಸತ್ತಿನಲ್ಲಿ ಪ್ರಶ್ನೆಗಳನ್ನು ಎತ್ತುವ ಹಕ್ಕಿಲ್ಲ ಎಂದು ಯಾರೂ ಹೇಳುತ್ತಿಲ್ಲ. ಆದರೆ ಅವರು ಇದನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಮಾಡುತ್ತಿಲ್ಲ. ಬದಲಾಗಿ ಸಂಸದೀಯ ಪ್ರಜಾಪ್ರಭುತ್ವವನ್ನೇ ಅವರು ಬುಡಮೇಲು ಮಾಡುತ್ತಿದ್ದಾರೆ. ಉದಾಹರಣೆಗೆ, ಯುಪಿಎ ಸರ್ಕಾರ 'ಕಳಂಕಿತ' ಮಂತ್ರಿಗಳ ಬಗ್ಗೆ ಚರ್ಚೆಗೆ ವ್ಯವಸ್ಥೆ ಮಾಡಬಹುದು ಎಂದು ಭರವಸೆ ನೀಡಿದರೂ ಬಿಜೆಪಿ ಅದನ್ನು ತಿರಸ್ಕರಿಸಿ ಎರಡೂ ಸದನಗಳ ಕಲಾಪಗಳಿಗೆ ಅಡ್ಡಿ ಪಡಿಸುವುದನ್ನು ಮುಂದುವರೆಸುತ್ತಲೇ ಹೋಯಿತು.

ಈಗ ಆ ಪಕ್ಷ ಸಂಸದೀಯ ಸ್ಥಾಯೀ ಸಮಿತಿಗಳನ್ನು, ಇತರ ಸಮಿತಿಗಳನ್ನು ಬಹಿಷ್ಕರಿಸುವ ತೀವ್ರತರ ಕ್ರಮಕ್ಕೆ ಇಳಿದಿದೆ. ಇದು ಸರ್ಕಾರ ಗಂಭೀರ ತಪ್ಪು ಕ್ರಮ ಕೈಗೊಂಡಾಗ ಮಾತ್ರವೇ ಅಪರೂಪವಾಗಿ ಬಳಸಬೇಕಾದ ಅಸ್ತ್ರ. ಈ ಕ್ರಮ ಅದರ ಮಿತ್ರರನ್ನು ಚಕಿತಗೊಳಿಸಿದೆ. ಆದರೂ ಹಿರಿಯಣ್ಣನ ಏಕಪಕ್ಷೀಯ ನಿರ್ಣಯದ ಬಗ್ಗೆ ಅವರು



ಪ್ರತಿಭಟಿಸಿಲ್ಲ. ತೆಲುಗುದೇಶಂ ಪಕ್ಷ ಮಾತ್ರವೇ ಬಿಜೆಪಿ ನಿರ್ಣಯದಂತೆ ತಾನು ನಡೆಯುವುದಿಲ್ಲ ಎಂದು ಸೂಚಿಸಿದೆ.

'ತಿಕ್ಕಾಟ'ದ ನಿಲುವು ಯಾರದ್ದು?

ಯುಪಿಎ ಸರ್ಕಾರ 'ತಿಕ್ಕಾಟ'ದ ದಾರಿ ಹಿಡಿದಿದೆಯೆಂಬುದು ಬಿಜೆಪಿಯ ಆಪಾದನೆ. ಇದು ಅತ್ಯಂತ ಹಾಸ್ಯಾಸ್ಪದ ಆಪಾದನೆಯೆಂದೇ ಹೇಳಬೇಕಾಗುತ್ತದೆ. ಅರುಣ್ ಜೈಟ್ಲಿಯವರು ಇದಕ್ಕೆ ಕೊಟ್ಟಿರುವ ಒಂದು 'ಪುರಾವೆ' ನೋಡಿ! ಸರ್ಕಾರ ಸಾರ್ವಜನಿಕ ಸ್ಥಳಗಳಿಂದ ಅಟಲ ಬಿಹಾರಿ ವಾಜಪೇಯಿಯವರ ಫೋಟೋಗಳನ್ನು ತೆಗೆಸಲು ಕಟಿಬದ್ಧವಾಗಿದೆಯಂತೆ! ಅವರ ಪ್ರಕಾರ ಇದು ವಾಜಪೇಯಿಯವರಿಗೆ ಮಾಡಿರುವ ಅಪಮಾನ! ಅಂದರೆ ಜೈಟ್ಲಿಯವರ ಈ ತರ್ಕದ ಪ್ರಕಾರ ಈಗಿರುವ ಪ್ರಧಾನಮಂತ್ರಿಗಳು ತನ್ನನ್ನೇ ಅವಮಾನ ಮಾಡಿಕೊಂಡಿದ್ದಾರೆ. ಏಕೆಂದರೆ ಅವರು ತನ್ನ ಫೋಟೋಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಬಾರದು ಎಂದು ಹೇಳಿದ್ದಾರೆ.

ಇನ್ನು ಹೆದ್ದಾರಿಗಳು, ಇತರೆಡೆ ವಾಜಪೇಯಿಯವರ ಫೋಟೋಗಳನ್ನು ಪ್ರದರ್ಶಿಸಲು (ದುಂದು) ವೆಚ್ಚ ಮಾಡಿದ 48 ಕೋಟಿ ರೂ.ಗಳ ಕಥೆಯೇನು? ಆದರೆ ಈ ಹಣ ಕೂಡಾ ಚುನಾವಣೆಯ ಮೊದಲು 'ಭಾರತ ಪ್ರಕಾಶಿಸುತ್ತಿದೆ' ಪ್ರಚಾರಕ್ಕೆ ಖರ್ಚು ಮಾಡಿದ ಅಪಾರ ಹಣದ ಎದುರು ಏನೇನೂ ಅಲ್ಲ. ಈಗಂತೂ ಜನಗಳಿಗೆ ಎರಡು ವಿಚಾರಗಳು ಸ್ಪಷ್ಟವಾಗಿ ಗೊತ್ತಾಗಿವೆ.

1. ಬಿಜೆಪಿವಾಲಾಗಳು ಅಧಿಕಾರದಾಹಿಗಳು ಮಾತ್ರವೇ ಅಲ್ಲ, ಪ್ರಚಾರದಾಹಿಗಳು ಕೂಡಾ ಮತ್ತು 2. ತಮ್ಮ ಅಧಿಕಾರ ದಾಹ ಮತ್ತು ಪ್ರಚಾರ ದಾಹವನ್ನು (ಮತ್ತು ಹಣದಾಹವನ್ನು ಕೂಡಾ) ತಣಿಸಲು ಅವರು ಯಾವ ಮಟ್ಟಕ್ಕೂ (ಬಂಗಾರು ಲಕ್ಷ್ಮಣ್, ಜುದೇವ್ ಮತ್ತು ಅಖಿಲ ಭಾರತ ಪೆಟ್ರೋಲ್ ಪಂಪ್ ಹಗರಣಗಳು ತೋರಿಸಿದಂತೆ) ಇಳಿಯಬಲ್ಲರು.

ಇತ್ತೀಚಿನವರೆಗೂ ಭೋಪರಾಕು ಹಾಡುತ್ತಿದ್ದ ಮಾಧ್ಯಮಗಳು (ಮುದ್ರಣ ಮತ್ತು ಇಲೆಕ್ಟ್ರಾನಿಕ್ ಎರಡೂ) ಈಗ ಅವರನ್ನು ಮರತೇಬಿಟ್ಟಂತಿರುವುದು, ಅವರಿಗೆ ಕೊಡುವ ಪ್ರಚಾರ ಕ್ಷಿಮ್ಮಯಾಗುತ್ತಾ ಹೋಗುತ್ತಿರುವುದು ಕೂಡಾ ಬಿಜೆಪಿ ಮುಖಂಡರ ಹತಾಶೆಯನ್ನು ಇಮ್ಮಡಿ ಕೆರಳಿಸಿದೆ. ಈ ಮಾಧ್ಯಮಗಳು ಹಾಗೆ ಮಾಡುತ್ತಿರುವುದು ಜಾತ್ಯತೀತತೆ ಅಥವಾ ಪ್ರಜಾಪ್ರಭುತ್ವದ ಮೇಲಿನ ಪ್ರೀತಿಯಿಂದಲ್ಲಾ, ತಮ್ಮ ಸ್ವಂತ ಹಿತಾಸಕ್ತಿಯಿಂದ ಎಂಬುದು ಬೇರೆ ಮಾತು.

ಒಟ್ಟಿನಲ್ಲಿ, ಅರ್ಥವಿಲ್ಲದ, ಕೆಲವೊಮ್ಮೆ ಬಾಲಿಶವಾದ ನೆಪಗನ್ನೆತ್ತಿ ಬಿಜೆಪಿ ಮುಖಂಡರು ತಿಕ್ಕಾಟಕ್ಕಿಳಿದಿರುವವರು ಸರ್ಕಾರದವರಲ್ಲ ಎಂಬುದನ್ನು ಜನರಿಗೆ ಕಾರ್ಯತಃ ತೋರಿಸುತ್ತಿದ್ದಾರೆ. ವಾಸ್ತವ ತದ್ವಿರುದ್ಧವಾಗಿದೆ. ತಿಕ್ಕಾಟಕ್ಕಿಳಿದಿರವವರು ಬಿಜೆಪಿಯವರು ಅವರು ತಿಕ್ಕಾಟದ ನಿಲುವು ತಳೆದು ಸರ್ಕಾರ ಕೆಲಸ ಮಾಡದಂತೆ ಮಾಡಲು ಕಟಿಬದ್ಧರಾದಂತಿದೆ.

ಈ ಹತಾಶೆಯೇಕೆ?

ಬಿಜೆಪಿ ಮುಖಂಡರ ಈ ಹತಾಶೆಯನ್ನು ಅರ್ಥಮಾಡಿಕೊಳ್ಳಬಹುದು. ಬಿಜೆಪಿ ಭಾರತವನ್ನು 2020 ರ ವೇಳೆಗೆ ವಿಶ್ವ ಶಕ್ತಿಯನ್ನಾಗಿ ಮಾಡುತ್ತದೆ ಎಂದು ವಾಜಪೇಯಿಯವರು ಹೇಳುತ್ತಿದ್ದರು. ಅಂದರೆ ಆ ಮೂಲಕ ಅವರು ಬಿಜೆಪಿ ದೀರ್ಘಕಾಲದ ವರೆಗೆ ಅಧಿಕಾರದಲ್ಲಿ ಇರುತ್ತದೆ ಎಂದು ಸೂಚಿಸಿದ್ದರು. ಕಳೆದ ಆರು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಆಳ್ವಿಕೆ ದೇಶದಲ್ಲಿ ಒಂದು ಮತೀಯ ಪ್ರಭುತ್ವದ ಅಡಿಗಲ್ಲು ಹಾಕಿದ್ದರೆ, ಈಗ ಪಕ್ಷದ ಗೆಲುವು ಮುಂದಿನ ಐದು ಅಥವಾ ಹೆಚ್ಚು ವರ್ಷಗಳಲ್ಲಿ ಆ ಅಡಿಗಲ್ಲ ಮೇಲೆ ಒಂದು ಮತೀಯ ಪ್ರಭುತ್ವ ಭವನ ಕಟ್ಟಲು ಅವಕಾಶ ನೀಡುತ್ತದೆ ಎಂಬುದು ಅವರ ನಿರೀಕ್ಷೆಯಾಗಿತ್ತು.

ಆದರೆ ಜನಗಳಿಗೆ ಈ ಆಟದ ಅರಿವು ಬಂತು, ಕೂಡಲೇ ದೇಶದಲ್ಲಿ ಒಂದು ಹಿಂದೂರಾಷ್ಟ್ರವನ್ನು ನಿರ್ಮಿಸುವ ಸಂಘ ಪರಿವಾರದ ಕನಸನ್ನು ಹುಸಿಗೊಳಿಸಿದರು. ಸುಮಾರು ಎರಡು ವರ್ಷಗಳ


ಸುರ್ಜಿತ್ - ಮನಮೋಹನ್

ಹಿಂದೆ ಅಶೋಕ್ ಸಿಂಘಾಲ್ ಪರಿವಾರದ ಸಂಘಟನೆಗಳು ಅಯೋಧ್ಯೆಯಲ್ಲಿನ ಒಂದು ಸಂರಚನೆಯನ್ನು ಧ್ವಂಸ ಮಾಡಿದ್ದರೆ, ಬೇಗನೆ ಇನ್ನೊಂದು ಸಂರಚನೆಯನ್ನು, ಜಾತ್ಯತೀತತೆಯ ಸಂರಚನೆಯನ್ನು ಧ್ವಂಸ ಮಾಡುತ್ತೇವೆ ಎಂದು ಜಂಭ ಕೊಚ್ಚಿಕೊಂಡಿದ್ದರು. ಆದರೆ ನಡೆದದ್ದು ತದ್ವಿರುದ್ಧ. ಮೊದಲೇ ನಿರ್ಮಿಸಿದ ದೇವಸ್ಥಾನದ ಸ್ತಂಭಗಳು ಅಯೋಧ್ಯೆಯನ್ನು ತಲುಪಲು ವಿಫಲವಾದತಂತೆ ದೇಶದಲ್ಲಿ ಒಂದು ಮತೀಯ ಪ್ರಭುತ್ವದ ಸ್ತಂಭಗಳನ್ನು ಮೊದಲೇ ನಿರ್ಮಿಸಿ ಸಾಗಿಸುವ ಅವರ ಯೋಜನೆಗಳು ಈ ದೇಶದ ಅತ್ಯಂತ ಜಾತ್ಯತೀತ ಜನಗಳ ಕೃಪೆಯಿಂದ ತಳಕೆಳಗಾಯಿತು.

ಈ ಅಂಶವನ್ನು ಇನ್ನಷ್ಟು ನೇರವಾಗಿ ಹೇಳುವುದಾದರೆ, ಈ ಬಾರಿಯ ಲೋಕಸಭಾ ಚುನಾವಣೆಗಳ ಫಲಿತಾಂಶ ಸಾಮಾನ್ಯವಾಗಿ ಒಂದು ಪ್ರಜಾಪ್ರಭುತ್ವದಲ್ಲಾಗುವಂತೆ ಒಂದು ಸರ್ಕಾರದ ಬದಲು ಇನ್ನೊಂದು ಸರ್ಕಾರ ಅಂದರೆ ಎನ್‌ಡಿಎ ಸರ್ಕಾರದ ಸ್ಥಾನದಲ್ಲಿ ಯುಪಿಎ ಸರ್ಕಾರ ಬಂದುದಷ್ಟೇ ಅಲ್ಲ. ಇದು ನಿಜವಾಗಿ 1925 ರಲ್ಲಿ ಹುಟ್ಟಿದಂದಿನಿಂದಲೇ ಆರ್‌ಎಸ್‌ಎಸ್ ಹೊಂದಿದ್ದ ಫ್ಯಾಸಿಸ್ಟ್ ಮಾದರಿಯ ವೈಭವೋಪೇತ ಯೋಜನೆಯ ಧ್ವಂಸ. ಸಿಪಿಐ(ಎಂ)ನ 16ನೇ ಮಹಾಧಿವೇಶನ (ಕೋಲ್ಕತ್ತಾ, ಅಕ್ಟೋಬರ್ 1988) ಹೇಳಿರುವಂತೆ ಬಿಜೆಪಿ ಒಂದು ಸಾಮಾನ್ಯ ಬಂಡವಾಳಶಾಹಿ-ಭೂಮಾಲಕ ಪಕ್ಷವಲ್ಲ, ಅಧಿಕಾರಕ್ಕಾಗಿ ಪರಸ್ಪರ ಸ್ಪರ್ಧಿಸುವ ಹಲವು ಇಂತಹ ಪಕ್ಷಗಳಲ್ಲಿ ಒಂದಷ್ಟೇ ಎಂದು ಅದನ್ನು ಪರಿಗಣಿಸುವಂತಿಲ್ಲ. ಈ **ಬಿಜೆಪಿಯ ಹಿಂದೆ ಭಾರತದಲ್ಲಿ ಒಂದು ಮತೀಯ, ಫ್ಯಾಸಿಸ್ಟ್ ಮಾದರಿಯ ಪ್ರಭುತ್ವವನ್ನು ನಿರ್ಮಿಸುವ ಗುರಿಯಿರುವ ಕೋಮುವಾದ ಆರ್‌ಎಸ್‌ಎಸ್ ನಿಂತಿದೆ.**

ಹೀಗೆ ಭಾರತ ತನ್ನ ರಾಷ್ಟ್ರೀಯ ಐಕ್ಯತೆಗೆ ಕೋಮು ಸೌಹಾರ್ದತೆಗೆ ತನ್ನ ಸಮ್ಮಿಶ್ರ ಸಂಸ್ಕೃತಿಗೆ ಮತ್ತು ನಾಗರಿಕ ಅಸ್ತಿತ್ವಕ್ಕೆ ಗಂಭೀರ ಬೆದರಿಕೆಗಳನ್ನು ಎದುರಿಸುತ್ತಿರುವಾಗ ಅನಕ್ಷರ, ಸರಿಯಾಗಿ ಹೊಟ್ಟೆ ಬಟ್ಟೆಗೂ ಇಲ್ಲದ ಕೋಟ್ಯಾಂತರ ಜನಗಳು ಕೂಡಾ ಸೇರಿದಂತೆ ಈ ದೇಶದ ಜನತೆ ಈ ಅಸಹ್ಯ ರಾಷ್ಟ್ರ-ವಿರೋಧಿ ಶಕ್ತಿಯ ವಿರುದ್ಧ ಒಂದು ಅಷ್ಟೇ ಗಂಭೀರವಾದ ಪ್ರತಿಧಾಳಿ ನಡೆಸಿರುವುದು ಸಹಜವೇ ಆಗಿದೆ.


ಈ ಸಂದರ್ಭದಲ್ಲಿ ಬಿಜೆಪಿಯ ಮತ್ತು ಇಡೀ ಸಂಘ ಪರಿವಾರದ ಹತಾಶೆಯನ್ನು ನಿಜಕ್ಕೂ ಅರ್ಥ ಮಾಡಿಕೊಳ್ಳಬಹುದು.

ಏನೇ ಹೇಳಿ, ಹಿಂದುತ್ವ ಕಾರಣ ಎನ್ನಬೇಡಿ!

ಅದೆಷ್ಟೋ ದೇವತೆಗಳನ್ನು ಪೂಜಿಸಿದ ನಂತರ ಅಧಿಕಾರದ ಆವರಣವನ್ನು ತಲುಪಿದ ಬಿಜೆಪಿಗೆ ಆ ಅವರಣದಿಂದ ತಾನು ಅವಮಾನಕರ ರೀತಿಯಲ್ಲಿ ನಿರ್ಗಮಿಸಬೇಕಾಗಿ ಏಕೆ ಬಂತು ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಲೇ ಇಲ್ಲ. 'ಹಿತಕರ ಭಾವನೆ' ಯ ಘೋಷಣೆ ನಡೆಯಲಿಲ್ಲವೇ? ಆಧುನಿಕ ಸಲಕರಣೆಗಳ ಮೇಲೆ ವಿಪರೀತ ಒತ್ತಿನಿಂದಾಗಿ (ಪ್ರಮೋದ್ ಮಹಾಜನ್‌ರ ಮೇಲೆ ಇರುವ ಆಪಾದನೆಯಂತೆ) ಜನ ಪಕ್ಷದಿಂದ ದೂರವಾದರೇ? ತಮಿಳುನಾಡಿನಲ್ಲಿ ಕೊನೆಗಳಿಗೆಯಲ್ಲಿ ತನ್ನ ಮಿತ್ರರನ್ನು ಕೈಬಿಟ್ಟು ಅವರ ಬದಲು ಒಬ್ಬ ಮೋಸದ ಮಿತ್ರರನ್ನು ಅಪ್ಪಿಕೊಂಡಿದ್ದರಿಂದ ಸೋತಿತೆ? ಅಥವಾ ಐಎನ್‌ಎಲ್‌ಡಿ, ಟಿಡಿಪಿಯಂತಹ ತನ್ನ ಕೆಲವು ಮಿತ್ರರ ವರ್ತನೆಗಳಿಂದಾಗಿ ಬಿಜೆಪಿ ನಿರ್ಣಾಯಕ ಪ್ರದೇಶಗಳಲ್ಲಿ ಸೋತಿತೆ? ಇಡೀ ದೇಶದಲ್ಲಿ ಅಥವಾ ನಿರ್ದಿಷ್ಟ ರಾಜ್ಯಗಳಲ್ಲಿ ಪಕ್ಷದ ಸೋಲಿನ ಬಗ್ಗೆ ಆ ಪಕ್ಷದ ಘಟಾನುಘಟಿಗಳು ಹಲವಾರು ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ಆದರೆ ನಿಜವಾದ ಕಾರಣ ಏನು ಎಂದು ಗುರುತಿಸುವುದು ಅದಕ್ಕಿನ್ನೂ ಸಾಧ್ಯವಾಗಿಲ್ಲ.

ಅದೇನೇ ಇರಲಿ, ಆರ್‌ಎಸ್‌ಎಸ್ ಒಂದು ಸಂಗತಿಯನ್ನಂತೂ ಸ್ಪಷ್ಟಪಡಿಸಿದೆ-ಸೋಲಿಗೆ ಬಿಜೆಪಿ ಏನೇ ಕಾರಣ ಕೊಡಲು ಸ್ವತಂತ್ರವಾಗಿದೆ, ಆದರೆ ಆ ಸೋಲಿಗೆ ಹಿಂದುತ್ವದ ತತ್ವ ಕಾರಣ ಎಂದು ಮಾತ್ರ ದೂಷಿಸಬಾರದು! ಇದು ವಾಜಪೇಯಿಯವರು ಮನಾಲಿಗೆ ರಜೆ ಕಳೆಯಲು ಹೋದಾಗ ಇನ್ನಷ್ಟು ಸ್ಪಷ್ಟವಾಯಿತು. ಅಲ್ಲಿ ವಾಜಪೇಯಿಯವರು ಪ್ರಧಾನಮಂತ್ರಿಗಳಾಗಿದ್ದಾಗ ಮಾಡುತ್ತಿದ್ದಂತೆ ಕವಿತೆಗಳನ್ನು ಬರೆಯದೆ ಪಕ್ಷದ ಪರಾಭವಕ್ಕೆ ಗುಜರಾತಿನಲ್ಲಿ ಮುಸ್ಲಿಮರ ಹತ್ಯಾಕಾಂಡ ಕಾರಣ ಎಂದು ದೂಷಿಸುವ ಹೇಳಿಕೆ ನೀಡಿದರು. ಮೋದಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದುಹಾಕಬೇಕು ಎಂದು ಒತ್ತಾಯಿಸಿದರು.

ಆ ಹೊತ್ತಿಗೆ ಸ್ವತಃ ಆರ್‌ಎಸ್‌ಎಸ್ ಪಕ್ಷದ ಆಂತರಿಕ ಕಲಹವನ್ನು ನಿವಾರಿಸಲು ಮೋದಿಯವರನ್ನು ಅವರ ಸ್ಥಾನದಿಂದ ತೆಗೆದುಹಾಕುವ ಬಗ್ಗೆ ಯೋಚಿಸುತ್ತಿತ್ತು ಎಂಬ ಸಂಕೇತಗಳಿವೆ. ಆದರೆ ಅದು ಪಕ್ಷದ ಪರಾಭವವನ್ನು ಒಂದು ಕೋಮುವಾದಿ ಹತ್ಯಾಕಾಂಡದೊಡನೆ



ಜೋಡಿಸುವ ವಾಜಪೇಯಿ ಆಗ್ರಹಕ್ಕೆ ಒಪ್ಪಲು ಸಿದ್ಧವಿರಲಿಲ್ಲ. ನಂತರ ಮುಂಬೈಯಲ್ಲಿ ನಡೆದ ಸೆವೆನ್‌ಸ್ಟಾರ್ ನಾಟಕ, ತೇಪೆ ಕೆಲಸ ಹಾಗೂ ವಾಜಪೇಯಿಯವರ ತಿಪ್ಪರಲಾಗ ಇವೆಲ್ಲಾ ಜನಗಳಿಗೆ ತಿಳಿದೇ ಇದೆ.

ನಿಜ, ಈ ಘಟನೆ ವಾಜಪೇಯಿಯವರ ನಿಜ ಸ್ವರೂಪವನ್ನು ಬಯಲಿಗೆ ತಂದಿತು. ಹತಾಶೆಯಿಂದಲೇ ಆಗಿರಬಹುದು. ಆ ವ್ಯಕ್ತಿ ಪಕ್ಷದ ಪರಾಭವಕ್ಕೆ ಒಂದು ಸರಿಯಾದ ಕಾರಣವನ್ನು ಆತ

ಪುಟ 10 ಕ್ಕೆ

ಗ್ಲೋಬಲ್ ಟ್ರಸ್ಟ್ ಬ್ಯಾಂಕ್

ಭಾರೀ ಆಶೆಗಳನ್ನು ಹುಟ್ಟಿಸಿ, ಬಾಯಲ್ಲಿ ನೀರೂರಿಸಿದ್ದ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ದಿವಾಳಿ ಅಂಚಿಗೆ ತಲುಪಿದೆ. ಉದಾರೀಕರಣದ ಮಂತ್ರದಲ್ಲಿ ಮೇಲೆದ್ದ ಈ ಖಾಸಗಿ ಬ್ಯಾಂಕ್ ಎಬ್ಬಿಸಿದ ಆವಾಂತರ, ಹಗರಣಗಳತ್ತ ಬೆಳಕು ಚೆಲ್ಲುವ ವಿಶಿಷ್ಟ ವಿಶ್ಲೇಷಣೆಯ ಲೇಖನವಿಲ್ಲಿದೆ.

ಶೇರು ಮಾರುಕಟ್ಟೆಯಲ್ಲಿನ ತಲ್ಲಣದ ಬಗ್ಗೆ ನಾವು ಚರ್ಚಿಸಿರುವ ಸಂದರ್ಭದಲ್ಲೇ, ಖಾಸಗೀ ಕ್ಷೇತ್ರದ ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಕುಸಿದ ವರದಿ ಬಂದಿರುವುದು ಕೇವಲ ಕಾಕತಾಳೀಯ ಅನ್ನೋಣವೇ? ಅಥವಾ ಜಾಗತೀಕರಣದ ದುಷ್ಪರಿಣಾಮಗಳ ಹಲವಾರು ಆಯಾಮಗಳ ಇನ್ನೊಂದು ಜ್ವಲಂತ ಉದಾಹರಣೆ ಎಂದು ಭಾವಿಸೋಣವೆ? ಬಹುಶಃ ಎರಡನೆಯ ಅಭಿಪ್ರಾಯ ವಾಸ್ತವಕ್ಕೆ ಅತೀ ಹತ್ತಿರ ಎನ್ನುವುದು ಸರಿಯಾದೀತು.

ಇಷ್ಟಕ್ಕೂ, ಗ್ಲೋಬಲ್ ಟ್ರಸ್ಟ್ ಬ್ಯಾಂಕು ಕುಸಿದಿದ್ದಾದರೂ ಹೇಗೆ ಮತ್ತು ಏಕೆ ಎಂಬ ಪ್ರಶ್ನೆ ಏಳುವುದು ಸಹಜ. ಮಾಧ್ಯಮಗಳಲ್ಲಿ ಈವರೆಗೆ ಬಂದಿರುವ ಹಾಗೂ ಮುಂದೆ ಬರಬಹುದಾದ ವರದಿಗಳು/ ಲೇಖನಗಳು ಗಂಭೀರವಾದ ವಿಶ್ಲೇಷಣೆಯನ್ನು ಮಾಡಬಹುದು ಎನ್ನುವ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗದು. ಏಕೆಂದರೆ, ಮಾಧ್ಯಮಗಳು ಹೆಚ್ಚು ಕಡಿಮೆ, ಆಳುವ ಜನರ ತುತ್ತೂರಿಗಳು. ಅವರ ನೀತಿಗಳ ವೈಫಲ್ಯವನ್ನು ಮರೆಮಾಚುವುದರಲ್ಲಿಯೇ ಅವುಗಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ತೊಡಗಿಸಿಕೊಳ್ಳುತ್ತವೆ.

ಗ್ಲೋಬಲ್ ಟ್ರಸ್ಟ್ ಬ್ಯಾಂಕಿನ ಈ ಪ್ರಕರಣ ಹೊಸದೇನೂ ಅಲ್ಲ. ಈ ಹಿಂದೆಯೂ ಖಾಸಗೀ ಬ್ಯಾಂಕುಗಳು ಮುಳುಗಿದ್ದಿದೆ. ಅದೂ ಇತ್ತೀಚಿನ ದಿನಗಳಲ್ಲೇ. ನೂತನ ಆರ್ಥಿಕ ನೀತಿಗಳು 1992 ರಲ್ಲಿ ಖಾಸಗಿ ಬ್ಯಾಂಕುಗಳ ಸ್ಥಾಪನೆಗೆ ಚಾಲನೆ ನೀಡಿದ್ದೇ ತಡ, ಖಾಸಗೀ ಬಂಡವಾಳಗಾರರ ದಂಡೇ ಹೊಸ ಹೊಸ ಬ್ಯಾಂಕುಗಳನ್ನು ಹುಟ್ಟು ಹಾಕಲು ತರಾತುರಿಯಲ್ಲಿ ಧಾವಿಸಿ ಬಂತು. ಇವರ ಬೆನ್ನೇರಿ ವಿದೇಶಿ ಬಂಡವಾಳವೂ ಆವರಿಸಿಕೊಂಡಿತು. ಅಲ್ಪ ಸಮಯದಲ್ಲೇ ಸುಮಾರು 9 ಬ್ಯಾಂಕುಗಳು ತಲೆಯೆತ್ತಿದವು. ಹೊಸ ತಂತ್ರಜ್ಞಾನ, ಭವ್ಯೋಪೇತ ಕಛೇರಿಗಳು, ಅತ್ಯಾಧುನಿಕ ಸೌಕರ್ಯಗಳ ಅಬ್ಬರದೊಂದಿಗೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ದೊಡ್ಡದಾಗಿಯೇ ಲಗ್ಗೆಯಿಟ್ಟವು. ತಮ್ಮ ಸಹಜ ವರ್ಗಗುಣದಿಂದಾಗಿ, ಅವುಗಳ ಲಕ್ಷ್ಯವೆಲ್ಲಾ ಕೇವಲ ಶ್ರೀಮಂತ ವರ್ಗದ ಕಡೆಗೆ ಮಾತ್ರವೇ ಇದ್ದುದರಲ್ಲಿ ಅಚ್ಚರಿಯೇನಿಲ್ಲ. ವಾಹನಸಾಲ, ಮನೆಸಾಲ, ಗೃಹಬಳಕೆ ಸಾಲ ಇತ್ಯಾದಿಗಳ ಮೂಲಕ ಮಧ್ಯಮ ವರ್ಗವನ್ನು ಸೆಳೆಯುವ ಪ್ರಯತ್ನವೂ ನಡೆಯಿತು. ಜತೆಗೆ, ಕ್ರೆಡಿಟ್ ಕಾರ್ಡ್ ಸಂಸ್ಕೃತಿಯೊಂದನ್ನು ಈ ನೆಲದಲ್ಲಿ ಅತ್ಯಂತ ವ್ಯಾಪಕವಾಗಿ ಹರಡಿ, ಅಸೀಮ ಕೊಳ್ಳುಬಾಕ ಪರಂಪರೆಯನ್ನು ಬೆಳೆಸಲಾಯಿತು. ಅದರೊಂದಿಗೇನೇ, ದೇಶದ ಕಾನೂನುಗಳನ್ನೆಲ್ಲಾ ಗಾಳಿಗೆ ತೂರಿ ಸಾಲ ವಸೂಲಾತಿಗಾಗಿ 'ಪುಂಡರ ಪಡೆ' ಕಳಿಸುವ; ಖಾಯಂ ಉದ್ಯೋಗಗಳ ಬದಲಾಗಿ ಗುತ್ತಿಗೆ ಆಧಾರಿತ ಉದ್ಯೋಗಗಳಿಗೇ ಇಂಬು ನೀಡುವ; ಎಲ್ಲೆಂದರಲ್ಲಿ ಸ್ವಯಂಚಾಲಿತ ನಗದು ಪಾವತಿ ಯಂತ್ರಗಳನ್ನು (ಎಟಿಎಂ) ಸ್ಥಾಪಿಸಿ ಬ್ಯಾಂಕಿನ ಸಿಬ್ಬಂದಿ ಮತ್ತು ಗ್ರಾಹಕರ ನಡುವಿನ ನೇರ ಕೊಂಡಿಯನ್ನೇ ಕಳಚಿ ಹಾಕುವ ದುಷ್ಟ ಪರಂಪರೆಯನ್ನು ಹುಟ್ಟು ಹಾಕಿದವು. ಇಷ್ಟು ಮಾತ್ರವಲ್ಲ, ಶೇರುಪೇಟೆಯ ವ್ಯವಹಾರದಲ್ಲೂ ದೊಡ್ಡ ರೀತಿಯಲ್ಲಿ ಪ್ರವೇಶಿಸಿ, ಹಣ ದೋಚುವ ಕಾಯಕದಲ್ಲೂ ಉದ್ಯುಕ್ತವಾದುವು.

ಸಾಲದ ನೀತಿ ಹಾಗೂ ಕೊಳ್ಳುಬಾಕ ಸಂಸ್ಕೃತಿ

ಈ ಖಾಸಗೀ ಬ್ಯಾಂಕುಗಳ ಜತೆಗೇ, ನೂರಾರು ಸಹಕಾರಿ ಬ್ಯಾಂಕುಗಳು ಹಾಗೂ ಸಾವಿರಾರು ಹಣಕಾಸು ಸಂಸ್ಥೆಗಳು ತಲೆಯೆತ್ತಿದವು. ಯಾವುದೇ ನಿಯಂತ್ರಣವಿಲ್ಲದ, ಯಾರದೇ ಅಂಕುಶವಿಲ್ಲದ ಅಬ್ಬರದ ಶೈಲಿಯ ವ್ಯವಹಾರವನ್ನು ವ್ಯಾಪಕಗೊಳಿಸಿದವು. ಲಕ್ಷಾಂತರ ಜನರ ಉಳಿತಾಯದ ಹಣವನ್ನು 'ಆಕರ್ಷಕ' ಬಡ್ಡಿಯ ಆಮಿಷದ ಮೂಲಕ ಜಮಾಯಿಸಿ, ಉಳ್ಳವರ ಖಜಾನೆಗಳಿಗೆ 'ಸಾಲ'ದ ರೂಪದಲ್ಲಿ ತುಂಬಲಾರಂಭಿಸಿದವು. ಬಂಡವಾಳಿಗರದ್ದೇ ಬ್ಯಾಂಕು ಎಂದ ಮೇಲೆ ಬಂಡವಾಳಿಗರಿಗೆ ಸಾಲಕ್ಕೇನು ಕೊರತೆ? ವಿಧವಿಧ ಸಾಲದ 'ಯೋಜನೆ'ಗಳ ಭರಾಟೆ ಎಲ್ಲೆಡೆ ವಿಜೃಂಭಿಸಲಾರಂಭಿಸಿತು. ಷೇರುಗಳನ್ನು ಕೊಳ್ಳಲೂ ಸಾಲ; ಶೇರುಗಳು ಲಭಿಸಿದ ನಂತರ ಅವುಗಳ ಮೇಲೂ ಸಾಲ. ಆ 'ಸಾಲ'ಗಳನ್ನು ತೀರಿಸಲು ಮತ್ತೊಂದು 'ಸಾಲ'. ಒಂದು ಬ್ಯಾಂಕಿನ 'ಸಾಲ' ತೀರಿಸಲೇ ಇನ್ನೊಂದು ಬ್ಯಾಂಕಿನ ಸಾಲ. ಒಟ್ಟಾರೆಯಾಗಿ ಇಡೀ ದೇಶದ ತುಂಬೆಲ್ಲಾ 'ಸಾಲ'ದ ಸಂಸ್ಕೃತಿಯೇ ಬೆಳೆದುಬಂತು. ಒಂದೆಡೆ ದೇಶವೇ 'ಸಾಲ'ದ ಮಾಯಾಜಾಲಕ್ಕೆ ಒಳಗಾಗಿ ಕಂಡಕಂಡ 'ಯೋಜನೆ'ಗಳಿಗೆಲ್ಲಾ ವಿದೇಶಿ ಸಾಲ (ಮುಖ್ಯವಾಗಿ ವಿಶ್ವಬ್ಯಾಂಕು ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ)ದ ಹೊರೆಯನ್ನು ಹೆಚ್ಚಿಸಿಕೊಳ್ಳುವ ಪ್ರಕ್ರಿಯೆಯ ಜತೆಜತೆಗೆ ದೇಶದ ಜನರಲ್ಲೂ 'ಸಾಲ'ದ ಮೋಹವನ್ನು ವಿಪರೀತವಾಗಿ ಬಿತ್ತಲಾಯಿತು. ಮನೆಯೆಲ್ಲೂ ಸಾಲಗಾರರು. ಪೇಟೆಯಲ್ಲೂ ಸಾಲಗಾರರು. ರಾಜ್ಯಗಳೇ ಸಾಲಗಾರರು. ಇಡೀ ದೇಶವೇ ಮೊತ್ತವಾಗಿ ಸಾಲಗಾರ ಎಂಬಂತಹ ಪರಿಸ್ಥಿತಿ ನಿರ್ಮಾಣವಾಯಿತು. 'ಸಾಲ' ಸುಲಭವಾಗಿ ಸಿಗುತ್ತದೆ ಎಂದ ಮೇಲೆ ಅನಗತ್ಯವಾದದನ್ನು ಕೊಳ್ಳುವ ಪ್ರವೃತ್ತಿಯೂ ಬೆಳೆಯಿತು. ನಿವೇಶನ ಬೇಕೆ? ಸಾಲ ಕೊಡುತ್ತೇವೆ. ಮನೆ ಕಟ್ಟಬೇಕೆ? ಬನ್ನಿ ಸಾಲ ಇದೆ. ಅಷ್ಟಾದರೆ ಸಾಕೆ? ಪೀಠೋಪಕರಣಗಳು, ಗೃಹಾಲಂಕಾರ ಸಲಕರಣೆಗಳು ಬೇಡವೆ? ಅದಕ್ಕೂ ಸಾಲ ಲಭ್ಯ. ಇಷ್ಟೆಲ್ಲಾ ಆದ ಮೇಲೆ 'ಕಾರು' ಬೇಡವೇನು? ಚಿಂತೆ ಯಾಕೆ. ಸಾಲದ ನೆರವು ಇದ್ದೇ ಇದೆ. ಪರಿಣಾಮವಾಗಿ 'ಉಳ್ಳವರ' ಅವಶ್ಯಕತೆಗಳನ್ನು ಮಾತ್ರ ಒದಗಿಸುವ ಹೊಸ ಆರ್ಥಿಕತೆಯೊಂದು ಗಟ್ಟಿಯಾಗಿ ಬೇರೂರಲಾರಂಭಿಸಿತು. ಅಂತಹ 'ಅವಶ್ಯಕತೆ'ಗಳಾದ ಸರಕುಗಳಿಗೆ ದೊಡ್ಡ ರೀತಿಯ ಮಾರುಕಟ್ಟೆಯೂ ಸೃಷ್ಟಿಯಾಯಿತು, ಕುಡಿಯುವ ನೀರಿಗೆ ಬರವಿದ್ದರೇನಂತೆ? ಬಾಟಲುಗಳಲ್ಲಿ ತುಂಬಿರುವ 'ದುಬಾರಿ' ಬೆಲೆಯ ನೀರು ಯಥೇಚ್ಛವಾಗಿ ಲಭಿಸಲಾರಂಭಿಸಿತು. ಅಗತ್ಯವಾದ ವಿದ್ಯುತ್ತಿನ ಅತೀವ ಅಭಾವದ ನಡುವೆಯೇ, ಸುಖಭೋಗದ ಉಪಕರಣಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಭೀಕರವಾಗಿ ಬಕಾಸುರನಂತೆ ವಿದ್ಯುತ್ತನ್ನು ಕಬಳಿಸತೊಡಗಿದವು.

ಸಾರ್ವಜನಿಕ ಕ್ಷೇತ್ರಕ್ಕೂ ಕಾಲಿಟ್ಟ ಖಾಸಗಿ ನೀತಿ

ಈ ಎಲ್ಲಾ ಬೆಳವಣಿಗೆಗಳು ಸಾರ್ವಜನಿಕ ಬ್ಯಾಂಕುಗಳ ಮೇಲೆ ಗಾಢವಾದ ಪ್ರಭಾವವನ್ನೇ ಬೀರಿದವು. ಖಾಸಗೀ/ ವಿದೇಶಿ ಬ್ಯಾಂಕುಗಳ ಅಬ್ಬರದ ವೈಖರಿಯಿಂದ ಕಂಗಾಲಾಗಿ ತತ್ತರಿಸುತ್ತಿದ್ದ ಈ ಬ್ಯಾಂಕುಗಳೂ ಸ್ಪರ್ಧೆಗಿಳಿದವು. ಜನಸಾಮಾನ್ಯರ ಹಿತವನ್ನು ಬದಿಗಿರಿಸಿದವು. 'ಲಾಭ'ದ ಗುರಿಯನ್ನು ಮೈಗೂಡಿಸಿಕೊಂಡವು. 'ಲಾಭ'ಕ್ಕಾಗಿ ಇತರರು ನಡೆಸಿದ, ನಡೆಸುವ ತಂತ್ರಗಳನ್ನು ಕರಗತ ಮಾಡಿಕೊಂಡವು. 'ಸ್ವಯಂ ನಿವೃತ್ತಿ ಯೋಜನೆ'ಯಂತಹ ಉದ್ಯೋಗ ಕಡಿತದ ಕ್ರಮಗಳನ್ನು ದೊಡ್ಡ ರೀತಿಯಲ್ಲೇ ಜಾರಿಗೊಳಿಸಿದವು. ಬರಬರುತ್ತಾ, ಬ್ಯಾಂಕಿಂಗ್ ಎನ್ನುವುದು ಕೇವಲ ಉಳ್ಳವರಿಗಾಗಿ ಮಾತ್ರ ಎನ್ನುವ ಅನಿಷ್ಟ ಪರಂಪರೆ ನಿರ್ಮಾಣವಾಯಿತು.

ಖಾಸಗೀಕರಣದ ತುತ್ತೂರಿ ಊದುತ್ತಿದ್ದವರ ಆರ್ಭಟ ಜೋರಾಯಿತು. "ನೋಡಿ, ಖಾಸಗೀಕರಣದ ಅನುಕೂಲತೆಗಳನ್ನು! ಅದು ತೆರೆದಿಟ್ಟ ಹೊಸ ಸುಂದರ ಲೋಕವೊಂದನ್ನು! ಅದು ಕೊಡಮಾಡಿರುವ ಸೌಕರ್ಯಗಳ ವಿಸ್ತೃತ ಜಾಲವನ್ನು! ಈ ಮೊದಲು ನಿಮಗೆಲ್ಲಿತ್ತು ಇಂತಹ ಸೌಲಭ್ಯಗಳು? ಇಷ್ಟೊಂದು ವೈವಿಧ್ಯಗಳು? ಬಣ್ಣಗಳು? ರೂಪಗಳು?" ಇಂತಹ ಪ್ರಚಾರಸರಣಿ ಅವ್ಯಾಹತವಾಗಿ ನಡೆಯಲಾರಂಭಿಸಿತು.



ಅಬ್ಬರದ ಬೆನ್ನಲ್ಲೇ ಕುಸಿತ

ಆದರೆ ಈ ಎಲ್ಲಾ ಅಬ್ಬರ ಮತ್ತು ಆಡಂಬರ ಹೆಚ್ಚು ದಿನ ನಡೆಯಲಿಲ್ಲ. ಜಾಗತೀಕರಣದ ನೀತಿಗಳ ಸ್ವಚ್ಛಂದ ಪ್ರಚೋದಕ ಮತ್ತು ಪ್ರವಾದಿಯಂತೆ ವರ್ತಿಸುತ್ತಿರುವ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕಾ ಬಳಗದ 'ಟೈಮ್ಸ್ ಬ್ಯಾಂಕ್' ಮೊದಲು ಮುಗ್ಗರಿಸಿತು. ಇನ್ನೊಂದು ಬ್ಯಾಂಕಿನೊಂದಿಗೆ ವಿಲೀನವಾಯ್ತು (ತಾನು ಎಡವಿದ್ದನ್ನು ಆ ಬಳಗ ಗಮನಿಸಲೇ ಇಲ್ಲ. ನಿರ್ಲಜ್ಜವಾಗಿ ತನ್ನ ತುತ್ತೂರಿ ಊದುವಿಕೆಯನ್ನು ಮುಂದುವರಿಸುತ್ತಲೇ ಇದೆ.) ಆ ನಂತರದ ಸರದಿ ನೆಡುಂಗಾಡಿ ಬ್ಯಾಂಕಿನದ್ದು. ಸಾರ್ವಜನಿಕ ಕ್ಷೇತ್ರದ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಅದನ್ನು ವಿಲೀನಗೊಳಿಸಬೇಕಾಯ್ತು. ಬನಾರಸ್ ಸ್ಟೇಟ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ತೆಕ್ಕೆಗೆ ಸೇರಿತು. ಸೆಂಚೂರಿಯನ್ ಬ್ಯಾಂಕ್ ಹರಸಾಹಸ ಮಾಡಿ ಬದುಕುಳಿಯಲು ಹೆಣಗಾಡುತ್ತಿದೆ. ಈ ನಡುವೆ ನೂರಾರು ಸಹಕಾರಿ ಬ್ಯಾಂಕುಗಳು, ಸಾವಿರಾರು ಹಣಕಾಸು ಸಂಸ್ಥೆಗಳು ದಿವಾಳಿಯಾದವು.

ಇದೀಗ ಗ್ಲೋಬಲ್ ಟ್ರಸ್ಟ್ ಬ್ಯಾಂಕಿನ ಸರದಿ. ಇದರ ಸಂಸ್ಥಾಪಕ ಪೋಷಕರಲ್ಲಿ ರಮೇಶ್ ಗೆಲ್ಲಿಯೂ ಒಬ್ಬ. ಈ ಹಿಂದೆ ವೈಶ್ಯ ಬ್ಯಾಂಕಿನ ಅಧ್ಯಕ್ಷನಾಗಿದ್ದಾತ. ಹಾಗೆಂದ ಮಾತ್ರಕ್ಕೆ ಈತ ಬ್ಯಾಂಕಿಂಗ್ ವೃತ್ತಿಯಲ್ಲಿ ಪರಿಣಿತ ಎಂದು ಭಾವಿಸಬೇಡಿ. ಮೂಲತಃ ಈತ ಉಸ್ಮಾನಿಯ ವಿಶ್ವವಿದ್ಯಾಲಯದ ತಾಂತ್ರಿಕ ಪದವಿಧರ. ವಜೀರ್ ಸುಲ್ತಾನ್ ಟೊಬ್ಯಾಕೊ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾತ. ಆ ನಂತರ ಬಿ.ಎಚ್.ಇ.ಎಲ್ (BHEL) ಗೆ ಹಾರಿ ನಂತರ ಅಲ್ಲಿಂದಲೂ ಜಿಗಿದು ಆಂಧ್ರಪ್ರದೇಶ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದಾತ. 1980 ರಲ್ಲಿ ವೈಶ್ಯ ಬ್ಯಾಂಕಿನ ಜನರಲ್ ಮೆನೇಜರ್ ಆಗಿ ನೇಮಕಗೊಂಡು, ಮೂರೇ ವರ್ಷಗಳಲ್ಲಿ ಬ್ಯಾಂಕಿನ ಅಧ್ಯಕ್ಷ ಪಟ್ಟವನ್ನು ಅಲಂಕರಿಸಿದಾತ. ಆ ನಂತರದ ವರ್ಷಗಳಲ್ಲಿ



ಈತನಿಗೆ ಸಿಕ್ಕ ಪ್ರಚಾರ, ಪ್ರಸಿದ್ಧಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬಹುಶಃ ಇನ್ನಾರಿಗೂ ಸಿಕ್ಕಿದ್ದಿಲ್ಲ. ಅತ್ಯಂತ ಪ್ರತಿಭಾನ್ವಿತ ಮತ್ತು ಯಶಸ್ವೀ ಬ್ಯಾಂಕರ್ ಎಂಬ ಹಣೆಪಟ್ಟಿಯೊಂದಿಗೆ ಗೆಲ್ಲಿ ಮೆರೆದ. ಆಳುವ ಜನರಂತೂ ಈ ಮಹಾಶಯನಿಗೆ 'ಪದ್ಮಶ್ರೀ' ಪ್ರಶಸ್ತಿಯನ್ನು ಕೊಟ್ಟು ಪಟ್ಟಕ್ಕೇರಿಸಿದರು.

ರತ್ನಾಕರ ಶೆಣೈ

'ಪ್ರತಿಭೆ ಮತ್ತು ವೃತ್ತಿಪರತೆ'ಯ ಹೆಸರಿನಲ್ಲಿ ಹಣ ದೋಚುವ ಹೊಸ ಸಂಸ್ಕೃತಿಯೇ ಪ್ರಧಾನವಾಗಿರುವ ಈ ವ್ಯವಸ್ಥೆಯಲ್ಲಿ ಗೆಲ್ಲಿಯಂತಹವರು ಮೆರೆಯುವುದು ಸಹಜ ತಾನೆ. ಕೆನರಾ ಬ್ಯಾಂಕಿನ ಹಿಂದಿನ ಅಧ್ಯಕ್ಷ ಬಿ.ರತ್ನಾಕರ ಸಹಾ ಮೆರೆದಿರಲಿಲ್ಲವೇನು?. ಅಷ್ಟೇಕೆ? ಮಣಿಪಾಲದ ಪೈ ಕುಟುಂಬಕ್ಕೆ ಸಿಕ್ಕ ಪ್ರಚಾರ, ಮನ್ನಣೆ ಕಡಿಮೆಯೇನು? ಪಾಪ, ಈ ಕುಟುಂಬ ನಡೆಸುತ್ತಿದ್ದ ಐಸಿಡಿಎಸ್ ಮತ್ತು ಮಹಾರಾಷ್ಟ್ರ ಅಪೆಕ್ಸ್ ಕಾರ್ಪೋರೇಷನ್‌ಗಳು ಮುಳುಗಿ ಲಕ್ಷಾಂತರ ಜನ ಠೇವಣಿದಾರರ ಬದುಕನ್ನು ಹಾಳುಗೆಡವಿದ ಪ್ರಕರಣವೂ ಇದೇ ಸಮಯದಲ್ಲಿ ನಡೆದಿದ್ದು ಜನರಿನ್ನೂ ಮರೆತಿಲ್ಲ.

ಈ ನಡುವೆ ರಮೇಶ್ ಗೆಲ್ಲಿ ವೈಶ್ಯ ಬ್ಯಾಂಕ್ ತೊರೆದು ತನ್ನದೇ ಆದ ಬ್ಯಾಂಕೊಂದರ ಸ್ಥಾಪನೆಗೆ ಪ್ರಯತ್ನ ನಡೆಸಲಾರಂಭಿಸಿದ. 1993 ರಲ್ಲಿ ರಿಸರ್ವ್ ಬ್ಯಾಂಕಿನ ಅನುಮತಿ ಪಡೆದು ಗ್ಲೋಬಲ್ ಟ್ರಸ್ಟ್ ಬ್ಯಾಂಕನ್ನು ಹುಟ್ಟುಹಾಕಿದ. ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಉನ್ನತಾಧಿಕಾರಿಯಾಗಿದ್ದ ಜಯಂತ ಮಾಧವ ಮತ್ತಿತರರು ಈತನ ಜೊತೆಗೂಡಿದ್ದರು.

ಜತೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರೂ ಇದ್ದರು. ಇಂಟರ್ ನ್ಯಾಷನಲ್ ಫೈನಾನ್ಸ್ ಕಾರ್ಪೋರೇಷನ್ ಎಂಬ ವಿದೇಶಿ ಸಂಸ್ಥೆ ಬಂಡವಾಳದಲ್ಲಿ ಶೇ.10 ರಷ್ಟು ಪಾಲನ್ನು ಹೂಡಿತ್ತು. 1994 ರ ಆಗಸ್ಟ್ ತಿಂಗಳಲ್ಲಿ ಗ್ಲೋಬಲ್ ಟ್ರಸ್ಟ್ ಬ್ಯಾಂಕಿನ ಷೇರುಗಳನ್ನು ಮಾರುಕಟ್ಟೆಗೆ ಬಿಡಲಾಯಿತು. 10 ರೂ. ಮುಖ ಬೆಲೆಯ ಷೇರುಗಳನ್ನು ರೂ.30 ಕ್ಕೂ ಹೆಚ್ಚಿನ ಬೆಲೆಗೆ ಮಾಡಲಾಯಿತು. [illegible]

ೇ. ಹೆಚ್ಚುವರಿ ಹಣ ಬ್ಯಾಂಕಿಗೆ.) ಒಟ್ಟು ಬಿಡುಗಡೆ ಾಡಿದ 12 ಕೋಟಿಗೂ ಮೀರಿದ ಷೇರುಗಳಲ್ಲಿ ುಮಾರು 1 ಲಕ್ಷದ 60 ಸಾವಿರ ಜನ ಹಣ ಾಡಿದರು. ರಮೇಶ್ ಗೆಲ್ಲಿ ಮತ್ತು ಆತನ ಹವರ್ತಿಗಳ ಪಾಲೇ ಶೇ.20 ಕ್ಕೂ ಹೆಚ್ಚು.


ಚಿಕ್ಕ ಬ್ಯಾಂಕೊಂದರ ಅಧ್ಯಕ್ಷನಾಗಿದ್ದ ಈತನ ಿ ಇಷ್ಟೊಂದು ಹಣ (ಏನಿಲ್ಲವೆಂದರೂ ುಮಾರು 25 ಕೋಟಿ ರೂಪಾಯಿಗಳಿಗೂ ಹೆಚ್ಚು.) ್ಲಿಂದ ಬಂತು ಎಂಬ ಪ್ರಶ್ನೆಗೆ ಈವರೆಗೂ ಉತ್ತರ ಲ್ಲ.



ಬಹಳ ಶೀಘ್ರವಾಗಿ ಬೆಳೆಯಲಾರಂಭಿಸಿದ ಬ್ಯಾಂಕು ಎಲ್ಲಾ ಕಡೆಗೂ ತನ್ನ ಶಾಖೆಗಳನ್ನು ವಿಸ್ತರಿಸಲಾರಂಭಿಸಿತು. 31-03-2003 ರ ವೇಳೆಗೆ ದೇಶದಾದ್ಯಂತ ಈ ಬ್ಯಾಂಕಿನ 104 ಶಾಖೆಗಳಿದ್ದವು. ಎಲ್ಲವೂ ನಗರಗಳಲ್ಲಿ ಮಾತ್ರ. ಸುಮಾರು

ಾಯ !

1400 ಉದ್ಯೋಗಿಗಳು. ಗ್ರಾಹಕರ ಸಂಖ್ಯೆ ಹತ್ತು ಲಕ್ಷಕ್ಕೂ ಹೆಚ್ಚು. ರೂ.ಹತ್ತು ಸಾವಿರ ಕೋಟಿಗೂ ಮೀರಿದ ಹಿವಾಟು (ಠೇವಣಿಗಳು ರೂ.6920 ಕೋಟಿ ುತ್ತು ಸಾಲಗಳು ರೂ.3,276 ಕೋಟಿ). ನಮ್ಮ ಾಜ್ಯದಲ್ಲೇ 10 ಶಾಖೆಗಳಿದ್ದವು. ಬೆಂಗಳೂರಿನಲ್ಲಿ , ಹುಬ್ಬಳ್ಳಿಯಲ್ಲಿ 2 ಹಾಗೂ ಮೈಸೂರು ಮತ್ತು ಂಗಳೂರಿನಲ್ಲಿ ಒಂದೊಂದು. ಜತೆಗೆ ಂಗಳೂರು ನಗರವೊಂದರಲ್ಲೇ 23 ಸ್ವಯಂಚಾಲಿತ ಗದು ಯಂತ್ರಗಳನ್ನು (ಎಟಿಎಂ) ಸ್ಥಾಪಿಸಲಾಗಿತ್ತು. ನ್ನೆಲ್ಲಾ ಪ್ರಭಾವ ಹಾಗೂ ಬ್ಯಾಂಕಿನಲ್ಲಿ ಂಗ್ರಹವಾಗಿದ್ದ ವಿಪುಲ ಸಂಪನ್ಮೂಲಗಳನ್ನು ಬಳಸಿ ಮೇಶ್ ಗೆಲ್ಲಿ ಬೆಳೆಯಲಾರಂಭಿಸಿದ. ೇರುಪೇಟೆಯ ವ್ಯವಹಾರದಲ್ಲಿ ಆತನ ಬ್ಯಾಂಕು ಗತ್ಯಕ್ಕಿಂತಲೂ ಹೆಚ್ಚಾಗಿಯೇ ತನ್ನನ್ನು ೊಡಗಿಸಿಕೊಂಡಿತು. ಸುಲಭದಲ್ಲೇ ಅಪಾರ ಲಾಭ



ೋಚುವ ಷೇರು ಮಾರುಕಟ್ಟೆಯ ತಿಮಿಂಗಿಲಗಳಿಗೆ ಬ್ಯಾಂಕಿನಿಂದ ಸಾಲ ದೊರೆಯಿತು. ರಮೇಶ್ ಗೆಲ್ಲಿ ುನ್ನೇನು ರಿಸರ್ವ್ ಬ್ಯಾಂಕಿನ ಉನ್ನತ ಸ್ಥಾನವನ್ನೂ ಲಂಕರಿಸಬಹುದು ಎಂಬ ಮಾತುಗಳೂ ೇಳಿಬರತೊಡಗಿದವು.

ೇರು ಮಾರುಕಟ್ಟೆ ಮತ್ತು ಆರ್ಥಿಕ ಅವ್ಯವಸ್ಥೆ

ಷೇರು ಮಾರುಕಟ್ಟೆ ಉತ್ತುಂಗ ಸ್ಥಿತಿಯಲ್ಲಿದ್ದ ಾಲಘಟ್ಟ ಅದು. ದೋಚುವಿಕೆಯ ಪ್ರಕ್ರಿಯೆ ಭಸದಿಂದಲೇ ನಡೆಯುತ್ತಿತ್ತು. ವಿದೇಶೀ ೋಳಗಳ ಜತೆಗೆ ದೇಶೀಯ ತಿಮಿಂಗಿಲಗಳೂ ೇರಿ ಕಬಳಿಕೆಯ ಕಾಯಕವನ್ನೂ ಜೋರಾಗಿಯೇ ಡೆಸಿದ್ದವು. ಆದರೆ ಹಠಾತ್ತಾಗಿ ಕೇತನ್ ಪಾರೀಖ್ ಗರಣ ಸ್ಫೋಟಗೊಂಡಿತು. ಷೇರು ಾರುಕಟ್ಟೆಯಲ್ಲಿ ಬಿರುಗಾಳಿ ಬೀಸಿತು.

ಬಂಡವಾಳಿಗರು, ಷೇರು ದಲ್ಲಾಳಿಗಳು, ಅಧಿಕಾರಿಗಳು, ರಾಜಕಾರಣಿಗಳು ಒಟ್ಟಾಗಿ ಸೇರಿ ನಡೆಸುತ್ತಿದ್ದ ಅಪಾರ ಲೂಟಿಯ ಹೂರಣ ಬಟ್ಟಬಯಲಾಯ್ತು. ಪ್ರಸಿದ್ಧಿಯ ಬೆಟ್ಟದ ಮೇಲಿದ್ದ ಬಹಳಷ್ಟು ಜನ, 'ಅಪಖ್ಯಾತಿ'ಯ ಪ್ರಪಾತಕ್ಕೆ ಉರುಳಿದರು. ಜತೆಗೆ ಲಕ್ಷಾಂತರ ಬಡಪಾಯಿ ಹೂಡಿಕೆದಾರರ ಕೋಟ್ಯಾಂತರ ರೂಪಾಯಿಗಳ ಹಣವೂ ಕರಗಿತು. ಅಸ್ತಿತ್ವವೇ ಇಲ್ಲದ 'ಹೊಸ' ಉದ್ಯಮಗಳ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಸಂಗ್ರಹಿಸಲಾಗಿತ್ತು. ಷೇರುಗಳಲ್ಲಿ ಹಣ ಹೂಡಿದರೆ ಲಾಭ ಬರುತ್ತದೆ ಎಂಬ ಆಸೆಯಿಂದ (ಅಥವಾ ದುರಾಸೆಯೇ?) ಲಕ್ಷಾಂತರ ಜನ ಅವುಗಳಲ್ಲಿ ಹಣ ತೊಡಗಿಸಿದ್ದರು. ಹಗರಣದ ಅಗಾಧತೆ ಹಂತಹಂತವಾಗಿ ಬೆಳಕಿಗೆ ಬಂದಂತೆಲ್ಲಾ, ಇಡೀ ಷೇರು ಮಾರುಕಟ್ಟೆಯನ್ನೇ ಆವರಿಸಿಕೊಂಡಿದ್ದ ಪಿತೂರಿ ಮತ್ತು ವಂಚನೆಯ ಮಹಾಜಾಲದ ತುಣುಕುಗಳು ಅಲ್ಲಿ ಇಲ್ಲಿ ಗೋಚರಿಸಲಾರಂಭಿಸಿದವು. ಈ ನಡುವೆ ಸಣ್ಣಪುಟ್ಟ ಬ್ಯಾಂಕುಗಳು ಕುಸಿದವು. ಕೆಲವಂತೂ ದಿವಾಳಿಯೇ ಆಗಿ ಹೋದವು. ಮಹಾರಾಷ್ಟ್ರದ 'ಬ್ಯಾಂಕ್ ಆಫ್ ಕರಾಡ್' ಅವುಗಳಲ್ಲಿ ಒಂದು. ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ಕುಸಿದಾಗ ಕೇವಲ ಷೇರುದಾರರು ಮಾತ್ರವಲ್ಲ, ಅವುಗಳಲ್ಲಿ ಹಣವನ್ನು ಇಟ್ಟಿದ್ದ ಅಮಾಯಕ ಠೇವಣಿದಾರರೂ ತಮ್ಮದೆಲ್ಲವನ್ನೂ ಕಳಕೊಳ್ಳುತ್ತಾರೆ.

ಈ ಸಂದರ್ಭದಲ್ಲೇ, ಗ್ಲೋಬಲ್ ಟ್ರಸ್ಟ್ ಬ್ಯಾಂಕು ಮತ್ತು ಅದರ ಸೂತ್ರದಾರರು ನಡೆಸಿದ ವ್ಯವಹಾರಗಳು (ಅವನ್ನು ಅವ್ಯವಹಾರಗಳು ಎನ್ನುವುದೇ ಸೂಕ್ತ) ಬೆಳಕಿಗೆ ಬರಲಾರಂಭಿಸಿದವು. ಕೇತನ್ ಪಾರೀಖ್ ಸೃಷ್ಟಿಸಿದ್ದ ಲೂಟಿ ಮತ್ತು ವಂಚನೆಯ ದೊಡ್ಡ ಜಾಲದಲ್ಲಿ ರಮೇಶ್‌ಗೆಲ್ಲಿ ಮತ್ತು ಗ್ಲೋಬಲ್ ಟ್ರಸ್ಟ್ ಬ್ಯಾಂಕಿನ ಪಾತ್ರವೂ ಇತ್ತು. ಆದರೆ ತನಿಖೆ ನಡೆಸಿದ 'ಜಂಟೀ ಸಂಸದೀಯ ಸಮಿತಿ'ಗೆ (JOINT PARLIAMENTARY COMMITTE) ಇದರಲ್ಲಿ ಯಾವ ತಪ್ಪೂ ಕಂಡುಬರಲಿಲ್ಲ! ಅದರಿಂದಾಗಿಯೇ ರಮೇಶ್‌ಗೆಲ್ಲಿ ನುಣುಚಿಕೊಳ್ಳಲು ಸಾಧ್ಯವಾಯಿತು. ಆದರೆ ಅಷ್ಟರಲ್ಲಾಗಲೇ, ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಮಾರಕ ಆಘಾತಕ್ಕೆ ಒಳಗಾಗಿತ್ತು. ಷೇರು ಮಾರುಕಟ್ಟೆಯಲ್ಲಿ ಅದು ಹೂಡಿದ್ದ ಹಣ ಮುಳುಗಿತ್ತು ಮಾತ್ರವಲ್ಲ. ಅದಕ್ಕೆಂದೇ ಇತರರಿಗೆ ವಿಪುಲವಾಗಿ ಕೊಟ್ಟಿದ್ದ ಸಾಲಗಳೂ ಕೆಟ್ಟುಹೋಗಿದ್ದವು. ಬ್ಯಾಂಕು ಮುಳುಗುವ ಹಂತಕ್ಕೆ ಆಗಲೇ ಬಂದುಬಿಟ್ಟಿತ್ತು. 2002 ರಲ್ಲಿ ಅದನ್ನು ಬೇರೊಂದು ಬ್ಯಾಂಕಿನೊಂದಿಗೆ ವಿಲೀನಗೊಳಿಸುವ ತೀವ್ರ ಪ್ರಯತ್ನ ನಡೆಯಿತು. ಆದರೆ ಗೆಲ್ಲಿ ಮತ್ತು ಆತನ ಸಹವರ್ತಿಗಳ ಬಗ್ಗೆ ಅನುಮಾನದಿಂದಲೇ ಇದ್ದ ರಿಸರ್ವ್ ಬ್ಯಾಂಕು ಅದಕ್ಕೆ ಅಡ್ಡಗಾಲು ಹಾಕಿತು. ಆ ನಂತರ ಸುಮಾರು ಎರಡು ವರ್ಷಗಳ ಕಾಲ ಬ್ಯಾಂಕು ಡೋಲಾಯಮಾನ ಸ್ಥಿತಿಯಲ್ಲೇ ಕುಂಟುತ್ತಾ ಸಾಗಿತ್ತು. ಈ ನಡುವೆ, ಬ್ಯಾಂಕು ಕಷ್ಟದಲ್ಲಿದೆ ಎಂದು ಗೊತ್ತಾದಕೂಡಲೇ ವಿದೇಶೀ ಹೂಡಿಕೆದಾರರು ತಮ್ಮಲ್ಲಿದ್ದ ಶೇರುಗಳನ್ನು ಮಾರಿ ಕೈತೊಳೆದುಕೊಂಡಿದ್ದರು.


ಅಂತಿಮವಾಗಿ ಇದೀಗ, ಬ್ಯಾಂಕನ್ನು ಸಾರ್ವಜನಿಕ ಕ್ಷೇತ್ರದ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನೊಂದಿಗೆ ವಿಲೀನಗೊಳಿಸುವ ನಿರ್ಧಾರ ಹೊರಬಿದ್ದಿದೆ. ಠೇವಣಿದಾರರ ಹಣಕ್ಕೇನೂ ಬಾಧಕವಿಲ್ಲ. ಆದರೆ ಶೇರುದಾರರು ಮಾತ್ರ ತಮ್ಮೆಲ್ಲ ಹೂಡಿಕೆಯನ್ನು ಕಳಕೊಳ್ಳಲಿದ್ದಾರೆ. ಅಂದರೆ ಸುಮಾರು ರೂ. 360 ಕೋಟಿಗೂ ಹೆಚ್ಚು.


ಪುಟ 8 ಕ್ಕೆ

ಪ್ರಜಾಪ್ರಭುತ್ವವಿರೋಧಿ ಹೊಣೆಗೇಡಿತನ

ಸಂಸತ್ತಿನ ಕಲಾಪಗಳನ್ನು ನಿರಂತರವಾಗಿ ಬಹಿಷ್ಕರಿಸುವ ಬಿಜೆಪಿ ನೇತೃತ್ವದ ಎನ್.ಡಿ.ಎ. ತೀರ್ಮಾನ ಊಹೆಗೂ ನಿಲುಕದ ಎಲ್ಲಾ ಹಂತಗಳನ್ನು ದಾಟಿದೆ. ಈ ಅತ್ಯಂತ ಬೇಜವಾಬ್ದಾರಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನಡವಳಿಗೆ ವಿಭಿನ್ನ ಮಜಲುಗಳನ್ನು ಹೊಂದಿದೆ.

ಮೊದಲಿಗೆ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ, ಸಂಸತ್ತಿನ ಒಳಗೂ ಹಾಗೂ ದೇಶದ ಉದ್ದಗಲಕ್ಕೂ ಜವಾಬ್ದಾರಿಯುತ ವಿರೋಧ ಪಕ್ಷ ಸಂಸತ್ತಿನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ತುತ್ತೂರಿ ಊದುತ್ತಿದ್ದರು. ಅವರ ಕಾಲಾವಧಿಯಲ್ಲಿ ವಿರೋಧ ಪಕ್ಷವು ಜನತೆ ಹಾಗು ದೇಶದ ಒಳಿತಿಗಾಗಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಲಿಲ್ಲ ಎಂದು ಆಪಾದಿಸುತ್ತಿದ್ದರು. ವಿರೋಧ ಪಕ್ಷಗಳ ಕುರಿತ ಹಿಂದಿನ ಇವರ ಆಪಾದನೆಗಳನ್ನೆ ನಾಚಿಸುವಂತೆ, ಅವರ ನಾಯಕತ್ವದಲ್ಲೆ ಇಂದು ವಿರೋಧ ಪಕ್ಷಗಳು ನಡೆದುಕೊಳ್ಳುತ್ತಿವೆ. ಇತ್ತೀಚಿನ ಚುನಾವಣೆಯಲ್ಲಿ ಜನತೆ ಅವರನ್ನು ತಿರಸ್ಕರಿಸಿದ್ದಾರೆ ಎಂಬುದನ್ನು ಅರಗಿಸಿಕೊಳ್ಳಲು ಸಾಧ್ಯವಾಗದೆ, ಸಂಸದೀಯ ಪ್ರಜಾಪ್ರಭುತ್ವದ ಎಲ್ಲಾ ನಿಯಮಗಳನ್ನು ಉಲ್ಲಂಘಿಸುವ ಅತ್ಯಂತ ಕಳಪೆಯಾದ ನಡವಳಿಕೆಗಳನ್ನು ಪ್ರದರ್ಶಿಸುತ್ತಿದ್ದಾರೆ. ಲೋಕಸಭಾ ಅಧ್ಯಕ್ಷರು ತಮ್ಮ ಹೇಳಿಕೆಯನ್ನು ವ್ಯಕ್ತಪಡಿಸಲು ಬಿಡದಂತೆ ಸಂಸತ್ತಿನಲ್ಲಿ ನಡೆದುಕೊಳ್ಳುತ್ತಿದ್ದಾರೆ. ಜನತೆಯ ದೊಡ್ಡ ವಿಭಾಗದಲ್ಲಿ, ಇರುವ ಅಭಿಪ್ರಾಯವಾದ ಬಿಜೆಪಿ ಒಂದು ಹೊಣಗೇಡಿ ಸಮಯ ಸಾಧಕ ರಾಜಕೀಯ ಪಕ್ಷ ಎಂಬುದನ್ನು ದೃಢಪಡಿಸುತ್ತಿದ್ದಾರೆ.







ಎರಡನೆಯದಾಗಿ 'ಕಳಂಕಿತ ಸಚಿವರ' ಕುರಿತ ವಿಷಯ ಎತ್ತಲು ಯಾವುದೇ ರೀತಿಯ ಕನಿಷ್ಠ ನೈತಿಕತೆಯನ್ನು ಬಿಜೆಪಿ ನೇತೃತ್ವ ಎನ್‌ಡಿಎ ಹೊಂದಿಲ್ಲ. ಯುಪಿಎ ಸರ್ಕಾರ ಕೂಡ ಅಂತಹ ಕಳಂಕಿತ ಸಚಿವರನ್ನು ಒಳಗೊಳ್ಳಬಾರದಿತ್ತು ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯವಾಗಿದೆ. ಆದಾಗ್ಯೂ ಈ ಕುರಿತು ಬಿಜೆಪಿ ಎಬ್ಬಿಸಿರುವ ಬೊಬ್ಬೆ ತೋಳದ ಬಾಯಿಗೆ ನೀತಿ ಪಾಠದಂತಿದೆ. ವಾಜಪೇಯಿ ಮಂತ್ರಿ ಮಂಡಲದಲ್ಲಿ ಚಾರ್ಜ್‌ಶೀಟ್ ಹಾಕಿಸಿಕೊಂಡಿದ್ದ ಅನೇಕ ಸಚಿವರು ಪ್ರಮುಖ ಸಚಿವರು, ಒಂದಲ್ಲ ಒಂದು ಭ್ರಷ್ಟಾಚಾರ ಅಥವಾ ಇತರೆ ಆರೋಪ ಹೊಂದಿದ್ದರು.

ಮೂರನೆಯದಾಗಿ ಝಾರ್ಖಂಡ್‌ನಲ್ಲಿನ ಬಿಜೆಪಿಯ ರಾಜ್ಯ ಸರ್ಕಾರವು ಶಿಬು ಸೊರೇನ್ ವಿರುದ್ಧದ ಮೂರು ದಶಕಗಳ ಹಿಂದಿನ ಕೇಸ್ ಒಂದನ್ನು ಹೊರತೆಗೆದಿದೆ. ಕಳೆದ 3 ದಶಕಗಳಲ್ಲೂ ಶಿಬು ಸೊರೇನ್ ರಾಜಕೀಯವಾಗಿ ಕ್ರಿಯಾಶೀಲರಾಗಿದ್ದರು, ಚುನಾವಣೆಗಳಲ್ಲಿ ಪ್ರದರ್ಶಿಸಿದ್ದರು ಹಾಗು ಕಾನೂನಿನಿಂದೇನು ತಲೆ ಮರೆಸಿಕೊಂಡಿರಲಿಲ್ಲ. ಹಾಗಾಗಿ ಆಗೆಲ್ಲಾ ಏಕೆ ಈ ಕೇಸ್‌ಗೆ ಜೀವವಿರಲಿಲ್ಲ? ಏಕೆ ಈಗಲೆ ಇದಕ್ಕೆ ರೆಕ್ಕೆ ಪುಕ್ಕ ಬಂದಿರುವುದು? ಎಂಬುದು ಎಲ್ಲಾ ಪ್ರಜ್ಞಾವಂತರನ್ನು ಕಾಡದೆ ಇರದು. **ಆದಾಗ್ಯೂ ಈಗಲೂ ನಾವು ಕಾನೂನು ತನ್ನ ಕ್ರಮಕೈಗೊಳ್ಳಬೇಕು ಎನ್ನುತ್ತೇವೆ. ಆದರೆ ಇದುವರೆಗೆ ಅವರ ಮೇಲೆ ಕ್ರಮ ಜರುಗಿಸದಿರುವುದಕ್ಕೆ ಬಿಜೆಪಿಯೆ ಉತ್ತರ ನೀಡಬೇಕು.**

ಅಂತಿಮವಾಗಿ ಬಿಜೆಪಿ ತನ್ನ ನಡವಳಿಕೆ ಮೂಲಕ ಸಂಸದೀಯ ಪ್ರಜಾಪ್ರಭುತ್ವವನ್ನು ಅಪಹಾಸ್ಯಕ್ಕೊಳಪಡಿಸಿದೆ ಮಾತ್ರವಲ್ಲದೆ. ಲಕ್ಷಾಂತರ ಜನತೆ ಅತಿವೃಷ್ಠಿ ಹಾಗೂ ಅನಾವೃಷ್ಠಿ (ನೆರೆ ಹಾಗು ಬರ) ಯಿಂದ ಅನುಭವಿಸಿರುವ ಕಷ್ಟ ಹಾಗು ಅದರ ಪರಿಹಾರ ಕುರಿತು ಚರ್ಚಿಸದಂತೆ ಸಂಸತ್ತನ್ನು ಅವರು ತಡೆ ಹಿಡಿದಿದ್ದಾರೆ. ತಮ್ಮ ಪ್ರತಿನಿಧಿಗಳನ್ನು ಸಂಸತ್ತಿಗೆ ಆಯ್ಕೆ ಮಾಡಿರುವ ಜನತೆ ತಮ್ಮ ಕ್ಷೇತ್ರದೊಂದಿಗೆ ದೇಶದ ಅಭಿವೃದ್ಧಿಗೆ ಸಂಸತ್ತು ಕಾರ್ಯ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತಿದ್ದಾರೆ. ಅಂತೆಯೆ ಆತ್ಮಹತ್ಯೆಗೊಳಗಾಗಿರುವ ಜನತೆ ಸಂಸತ್ತಿನಿಂದ ಪರಿಹಾರ ನಿರೀಕ್ಷಿಸಿದ್ದಾರೆ. ಆದರೆ ಇದಾವುದಕ್ಕೂ ಅವಕಾಶ ನೀಡದಂತೆ ಬಿಜೆಪಿ-ಎನ್‌ಡಿಎ ವರ್ತಿಸುತ್ತಿದೆ. ಇದರಿಂದಾಗಿ ಬಿಜೆಪಿಯು ಜನಾದೇಶದ ಅಪಹಾಸ್ಯ ಮಾಡುತ್ತಿದೆ. ಜನಾದೇಶವನ್ನು ಪೂರೈಸಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲದಿದ್ದರೆ ಇತರ ಯಾರು ಅದನ್ನು ನಿರ್ವಹಿಸುವರೋ ಅವರಿಗಾದರು ಅವಕಾಶ ಮಾಡಿಕೊಡಬೇಕು.

ಸಂಸದೀಯ ಪ್ರಜಾಪ್ರಭುತ್ವದ ಇಂತಹ ಅಣಕವನ್ನು ಜನತೆ ಸಹಿಸರು. ಬಿಜೆಪಿ ಮತ್ತು ಆರ್.ಎಸ್.ಎಸ್. ಸಂಸದೀಯ ಪ್ರಜಾಪ್ರಭುತ್ವ ಕುರಿತ ಅವರ ಬದ್ಧತೆ ಕೇವಲ ತೋರಿಕೆಗೆ ಮಾತ್ರ ಎಂಬುದನ್ನು ಅವರು ಪದೇ ಪದೇ ಪ್ರದರ್ಶಿಸುವಂತೆ ಮಾಡಬೇಕು ಇಲ್ಲವಾದಲ್ಲಿ ಜನತೆಯೆ ತಮ್ಮ ಹಿತಾಸಕ್ತಿಗಾಗಿ ಕೆಲಸ ಮಾಡುವವರನ್ನು ಇವರ ಬದಲಿಗೆ ಆಯ್ಕೆ ಮಾಡಿಕೊಳ್ಳಲಿದ್ದಾರೆ.

ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಜಾತಿ ಸಂಘಟನೆ ಹೆಸರಿನಲ್ಲಿ ಗೂಂಡಾಗಳಿಂದ ಅಮಾಯಕ ಕಾರ್ಮಿಕರ ಮೇಲೆ ಹಲ್ಲೆ

ಕಾರ್ಮಿಕರ ಚಳುವಳಿ ಮುರಿಯಲು ಜಾತಿ ಸಂಘಟನೆಗಳ ಗೂಂಡಾ ಬಳಕೆ



ಧರಣಿ ನಿರತ ಕಾರ್ಮಿಕರ ಮೇಲೆ ಹಲ್ಲೆ ನಡೆಸುತ್ತಿರುವ ಗೂಂಡಾಗಳು

ಕಾರ್ಮಿಕರ ಹೋರಾಟ ದಮನಿಸಲು ಮಾಲೀಕವರ್ಗದ್ದು ಹಲವಾರು ಕುತಂತ್ರಗಳು! ಬೊಮ್ಮಸಂದ್ರ ಪ್ರದೇಶದ ಮಾಲೀಕರ ನೀಚಾತಿನೀಚ ಕೃತ್ಯಗಳ ಬಗ್ಗೆ ಒಂದು ವರದಿ...

ಬೆಂಗಳೂರಿನ ಹೊರವಲಯದ ಹೊಸೂರು ರಸ್ತೆಯ ಬೊಮ್ಮಸಂದ್ರ, ಸಿಂಗಸಂದ್ರ, ವೀರಸಂದ್ರ, ಅತ್ತಿಬೆಲೆ, ಹೆಬ್ಬಗೋಡಿ ಪ್ರದೇಶಗಳು ಇಂದು ರಾಜ್ಯದ ಪ್ರಮುಖ ಕೈಗಾರಿಕಾ ಪ್ರದೇಶಗಳು. ಬೃಹತ್ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳಿಂದ ಆರಂಭಿಸಿ ಸಣ್ಣ ಕೈಗಾರಿಕೆಗಳವರೆಗೆ ವಿವಿಧ ರೀತಿಯ ಕೈಗಾರಿಕೆಗಳು ಈ ಪ್ರದೇಶದಲ್ಲಿ ಹಬ್ಬಿವೆ.

ಕಳೆದ ಒಂದೂವರೆ ದಶಕದಿಂದ ಈ ಪ್ರದೇಶದಲ್ಲಿ ಸಿಐಟಿಯು ಹಂತ-ಹಂತವಾಗಿ ಬೆಳೆಯುತ್ತಿದೆ. ಸಿಐಟಿಯು ಸಂಯೋಜಿತ ಕರ್ನಾಟಕ ವರ್ಕರ್ಸ್ ಯೂನಿಯನ್ ಕಳೆದ 15




ಗೂಂಡಾಗಳ ಹಲ್ಲೆ ವಿರೋಧಿಸಿ ಕಾರ್ಮಿಕರಿಂದ ಪ್ರತಿಭಟನೆ

ವರ್ಷಗಳಿಂದ ಕೋರಮಂಗಲ, ಮಡಿವಾಳದಿಂದ ಆರಂಭವಾಗಿ ಸಿಂಗಸಂದ್ರ, ವೀರಸಂದ್ರ, ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದವರೆಗೆ ವಿಸ್ತರಿಸಿದೆ.

ಕಾರ್ಮಿಕ ಸಂಘಟನೆ ಬಲಿಷ್ಠವಾದ ಹಾಗೆ ಕಾರ್ಮಿಕರು ಸಂಘಟಿತವಾಗದಂತೆ ಮಾಲೀಕರು ವಿವಿಧ ರೀತಿಯ ಪ್ರಯತ್ನ ನಡೆಸುತ್ತಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಈ ಪ್ರದೇಶದ ಪುಂಡರನ್ನು ಮಾಲೀಕರು ಪ್ರದೇಶದಲ್ಲಿ ಖಾಸಗೀ ಪೋಲೀಸರಂತೆ ಬಳಸುತ್ತಿದ್ದಾರೆ. ಈ ಗೂಂಡಾಗಳು ಇಂದು ಕಾರ್ಮಿಕ ಇಲಾಖೆಯಿಂದ ಅನುಮತಿ ಪಡೆದ ಕಾರ್ಮಿಕ ಗುತ್ತೆದಾರರಾಗಿದ್ದಾರೆ. ಕಾರ್ಮಿಕರು ಸಂಘ ರಚಿಸಿಕೊಂಡಿರುವ ಕಾರ್ಖಾನೆಗಳಲ್ಲಿ ಖಾಯಂ ಕಾರ್ಮಿಕರನ್ನು ವಿವಿಧ ಕಾರಣ ನೀಡಿ ಹೊರಗೆ ದಬ್ಬಿ, ಇವರ ಸ್ಥಾನದಲ್ಲಿ ಈ ಗೂಂಡಾಗಳ ಕಡೆಯ ಜನರನ್ನು ಗುತ್ತಿಗೆ ಕಾರ್ಮಿಕರೆಂಬ ನೆಪದಲ್ಲಿ ನೇಮಿಸಿಕೊಂಡು ಸಂಘ ಒಡೆಯುವ ಪ್ರಯತ್ನ ನಡೆಸುವುದು ಹೆಚ್ಚಾಗುತ್ತಿದೆ. ಈ ಗೂಂಡಾ ಪಡೆಯ ಪ್ರಾರಂಭದ ನಾಯಕ ಇಂದು ಕಾಂಗ್ರೆಸ್ ಪಕ್ಷದ ಸ್ಥಳೀಯ ಸಮಿತಿ ಪ್ರತಿನಿಧಿ. ಬೆಂಗಳೂರಿನ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಬೆಂಗಳೂರು ಎಲೆಕ್ಟ್ರಿಕಲ್ ವರ್ಕ್ಸ್, ಬೆಂಗಳೂರು ಕಾಯಿಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಒಂದು ರಫ್ತು ಆಧಾರಿತ ಪ್ರಮುಖ ಕೈಗಾರಿಕೆ. ಈ ಕಾರ್ಖಾನೆ ಕಾರ್ಮಿಕರು ಕಳೆದ 6 ವರ್ಷಗಳಿಂದ ಕರ್ನಾಟಕ ವರ್ಕರ್ಸ್ ಯೂನಿಯನ್ ಸದಸ್ಯರಾಗಿದ್ದು ಕಾರ್ಮಿಕರ ವೇತನ ಹೆಚ್ಚಳ ಬಗ್ಗೆ ಎರಡು ಒಪ್ಪಂದವಾಗಿದ್ದು, ಎರಡನೇ ಒಪ್ಪಂದ ನಂತರ ಮಾಲೀಕರು ಖಾಯಂ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡುವ ಉದ್ದೇಶದಿಂದ ಪ್ರದೇಶದ ಗೂಂಡಾ ಮುಖಂಡರ ಮೂಲಕ 80 ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿ ಕೊಂಡಿರುತ್ತಾರೆ. ಖಾಯಂ ಕೆಲಸಗಾರರು ಮಾಡುತ್ತಿದ್ದ ಕೆಲಸವನ್ನು ಗುತ್ತಿಗೆ ಕಾರ್ಮಿಕರು ಮಾಡಬಾರದೆಂದು ಖಾಯಂ ಕಾರ್ಮಿಕರು ಪ್ರತಿರೋಧ ಒಡ್ಡಿದ್ದಾರೆ. ದಿನಾಂಕ 22-7-2004 ರಂದು ಕಾರ್ಖಾನೆ ಮಾಲೀಕರಾದ ಮಹೇಶ್, ವಿನಯ್ ಹಾಗೂ ಸಾಧುವೇದಾನಂದಂ ಇವರ ನೇರ ಉತ್ತೇಜನದಿಂದ ಕಾರ್ಮಿಕ ಗುತ್ತಿಗೆದಾರ ರಾಮಕೃಷ್ಣ, ಮುನಿಯಲ್ಲಪ್ಪ, ಸುಬ್ರಮಣಿ, ಗೋವಿಂದಪ್ಪ ಇವರು 40-50 ಮಂದಿ ರೌಡಿಗಳೊಂದಿಗೆ ಬೆಂಗಳೂರು ಎಲೆಕ್ಟ್ರಿಕಲ್ ವರ್ಕ್ಸ್ ಕಾರ್ಖಾನೆ ಒಳಗೆ ನುಗ್ಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ದೊಣ್ಣೆ, ಸೈಕಲ್ ಚೈನ್‌ಗಳಿಂದ ತೀವ್ರ ಹಲ್ಲೆ ನಡೆಸಿರುತ್ತಾರೆ ಹಾಗೂ ಕಾರ್ಖಾನೆ ಒಳಗೆ ಇದ್ದ ಇವರ ಕಡೆಯ ಗುತ್ತಿಗೆ ಕಾರ್ಮಿಕರ ನೆಪದಲ್ಲಿ ಇರುವ ಗೂಂಡಾಗಳು ಸೇರಿ ಕಾರ್ಖಾನೆ ಹೊರಗೆ ಧರಣಿ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಸಹಾ ತೀವ್ರ ಹಲ್ಲೆ ನಡೆಸಿರುತ್ತಾರೆ. ಅಂದು ಬೆಳಿಗ್ಗೆ ಕಾರ್ಖಾನೆ ಮಾಲೀಕರು, ರೌಡಿಗಳು, ಪೊಲೀಸರು ಸೇರಿ ಸಭೆ ನಡೆಸಿ ಕಾರ್ಮಿಕರ ಮೇಲೆ ಹಲ್ಲೆಗೆ ಪೂರ್ವಯೋಜನೆ ತಯಾರಿಸಿದ್ದು ನಂತರ ಬೆಳಗಿಗೆ ಬಂದಿದೆ. ಕಾರ್ಮಿಕರು ಹಲ್ಲೆಗೆ ಪ್ರತಿರೋಧ ತೋರಿದ ನಂತರ ಈ ಗೂಂಡಾ ಗಳು ಪರಾರಿ ಯಾಗಿರುತ್ತಾರೆ.

ನಂತರ ಹಲ್ಲೆಗೆ ಒಳಗಾದಕಾರ್ಮಿಕರು ದೂರು ನೀಡಲು ಹೆಬ್ಬಗೋಡಿ ಪೊಲೀಸ್ ಠಾಣೆಗೆ ಹೋದಾಗ ಠಾಣೆಯ ಆವರಣದಲ್ಲಿಯೇ ಪೊಲೀಸರ ಸಮ್ಮುಖದಲ್ಲಿ ಪುನಃ ಕಾರ್ಮಿಕರ ಮೇಲೆ ಹಲ್ಲೆ ನಡೆಸಿರುತ್ತಾರೆ. ನಂತರ ಪೊಲೀಸರು ಕಾರ್ಮಿಕರಿಗೆ ರಕ್ಷಣೆ ನೀಡುವ ನೆಪದಲ್ಲಿ ಠಾಣೆ ಒಳಗೆ ಕರೆದುಕೊಂಡು ಹೋಗಿ ಸಂಜೆವರೆಗೆ ಕೂರಿಸಿ ನಂತರ ಹಲ್ಲೆಗೆ ಒಳಗಾದ ಕಾರ್ಮಿಕರ ಮೇಲೆಯೇ ದೂರು ದಾಖಲಿಸಿರುತ್ತಾರೆ. ಈ ಬಗ್ಗೆ ವಿಚಾರಿಸಲು ಸಂಘದ ಪದಾಧಿಕಾರಿಗಳು ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕಾಂ। ಇ.ಕೆ.ಎನ್. ರಾಜನ್ ಹಾಗೂ ಮೆಲ್ಕಿಯೋರ್ ಸಂಜೆ ಹೆಬ್ಬಗೋಡಿ ಠಾಣೆಗೆ ಹೋದಾಗ ಇದೇ ಗೂಂಡಾಗಳು ಮುನಿಯಲ್ಲಪ್ಪನ ನೇತೃತ್ವದಲ್ಲಿ ಪುನಃ ಗೂಂಡಾ ಪಡೆಯನ್ನು ಠಾಣೆಯ ಮುಂದೆ ಸೇರಿಸಿಕೊಂಡು ಗಲಭೆ ನಡೆಸಲು ಪ್ರಯತ್ನ ನಡೆಸಿದರು. ಆದರೆ ಸುದ್ದಿ ತಿಳಿದು ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಹೆಬ್ಬಗೋಡಿ ಠಾಣೆ ಮುಂದೆ ಸೇರಿದಾಗ ಈ ಗೂಂಡಾಗಳು ಹಾಗೂ ಅವರ ನಾಯಕರು ಜಾಗ ಖಾಲಿ ಮಾಡಿದರು.

ಹೆಬ್ಬಗೋಡಿ ಪ್ರದೇಶದ ಈ ಗೂಂಡಾಗಳ ಪಡೆಯ ನಾಯಕನೇ ಮುನಿಯಲ್ಲಪ್ಪ. ಇವನ ಶಿಷ್ಯರೇ ಗೋವಿಂದಪ್ಪ, ರಾಮಕೃಷ್ಣ, ಮದ್ದೂರಪ್ಪ ಹಾಗೂ ಗುತ್ತಿಗೆ ಕಾರ್ಮಿಕರ ನೆಪದಲ್ಲಿ ಇವರು ಸಾಕಿಕೊಂಡಿರುವ ಗೂಂಡಾಪಡೆ.



ಹಲ್ಲೆಗೊಳಗಾದ ಕಾರ್ಮಿಕ ನೀರ್‌ಕುಮಾರ್

ಪ್ರದೇಶದ ಕಾರ್ಖಾನೆ ಮಾಲೀಕರು ಇವರ ಪ್ರಾಯೋಜಕರು. ಜಾತಿ ಆಧಾರದ ಸಂಘ ಮುಂದಿಟ್ಟುಕೊಂಡು ಅಮಾಯಕ ಕಾರ್ಮಿಕರ ಮೇಲೆ ಮಾಲೀಖರ ಉತ್ತೇಜನದಿಂದ ಹಲ್ಲೆ ನಡೆಸುವುದು ಇವರ ವೃತ್ತಿ ಪರತೆ. ಪ್ರಶ್ನಿಸಿದರೆ ಜಾತಿ ಹೆಸರಿನಲ್ಲಿ ಬೈದಿದ್ದಾರೆ ಎಂದು ಪೊಲೀಸರಿಗೆ ಸುಳ್ಳು ದೂರು ನೀಡುವುದು ಇಲ್ಲವೇ ನ್ಯಾಯಾಲಯದಲ್ಲಿ ಖಾಸಗೀ ಪಿಸಿಆರ್ ದೂರು ದಾಖಲಿಸಿರುವುದು ಇವರ ದಂಧೆ. ಪ್ರತಿರೋಧ ಒಡ್ಡಬೇಡಿ. ಇವರ ವಿರುದ್ಧ ದೂರು ನೀಡಬೇಡಿ ಎಂದು ಪೊಲೀಸರ ಕಿವಿಮಾತು ಬೇರೆ.

ಕಾರ್ಮಿಕರ ಮೇಲೆ ಹಲ್ಲೆ ನಡೆಸಿದವರನ್ನು ಬಂಧಿಸಲು ಒತ್ತಾಯಿಸಿ ಹಾಗೂ ಹಲ್ಲೆಗೆ ಒಳಗಾದ ಕಾರ್ಮಿಕರ ಮೇಲೆಯೇ ಸುಳ್ಳು ದೂರು ದಾಖಲಿಸಿದ ಪೊಲೀಸರ ಕ್ರಮದ ವಿರುದ್ಧ ಇದೇ ಜುಲೈ 27 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕಾಂ। ಇ.ಕೆ.ಎನ್. ರಾಜನ್, ಮೆಲ್ಕಿಯೋರ್, ಮೀನಾಕ್ಷಿ ಸುಂದರಂ, ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳಾದ ಕಾಂ। ಕೆ.ಪ್ರಕಾಶ್ ಮಾತನಾಡಿದರು. ನಂತರ ಇ.ಕೆ.ಎನ್. ರಾಜನ್, ಕೆ.ಪ್ರಕಾಶ್, ಮೆಲ್ಕಿಯೋರ್ ಹಾಗೂ ಕಾಮಿರಕರನ್ನೊಳಗೊಂಡ ನಿಯೋಗ ಡಿವೈಎಸ್‌ಪಿ ಯವರನ್ನು ಭೇಟಿ ಮಾಡಿ ಮನವಿ ಅರ್ಪಿಸಿ ಹೆಬ್ಬಗೋಡಿ ಪ್ರದೇಶದ ಈ ಗೂಂಡಾಗಳ ದಾಂಧಲೆ, ಇವರ ಜೊತೆ ಸ್ಥಳೀಯ ಪೊಲೀಸರ ಸಖ್ಯತೆ ವಿವರಿಸಲಾಯಿತು. ಈ ಪ್ರತಿಭಟನೆ ನಂತರ ಹಲ್ಲೆ ನಡೆಸಿದವರ ಮೇಲೆ ಹೆಬ್ಬಗೋಡಿ ಪೊಲೀಸರು ದೂರು ದಾಖಲಿಸಿಕೊಂಡಿರುತ್ತಾರೆ. ಈ ನಡುವೆ ವೀರಸಮುದ್ರ ಕೈಗಾರಿಕಾ ಪ್ರದೇಶದಲ್ಲಿ ಇದೇ ಗೂಂಡಾ ಪಡೆಯ ನಾಯಕರಲ್ಲಿ ಒಬ್ಬನಾದ ಸುಬ್ರಮಣಿ ನ್ಯಾಚುರಲ್ ರೆಮಿಡೀಸ್ ಕಾರ್ಖಾನೆಯಲ್ಲಿ ಗುತ್ತಿಗೆ ಕಾರ್ಮಿಕರೆಂಬ ಹೆಸರಿನಲ್ಲಿ ಗೂಂಡಾಗಳನ್ನು ಕರೆತಂದು ಗಲಭೆ ನಡೆಸಲು ಯತ್ನಿಸಿದಾಗ ನ್ಯಾಚುರಲ್ ರೆಮಿಡಿಸ್ ಕಾರ್ಖಾನೆ ಕಾರ್ಮಿಕರು ತೀವ್ರ ಪ್ರತಿರೋಧ ತೋರಿದ್ದಾಗ ಹೆದರಿದ ಸುಬ್ರಮಣಿ ಹಾಗೂ ಪುಂಡರು ಕಾಲುಕಿತ್ತಿರುತ್ತಾರೆ.

ಜಾತಿ ಸಂಘಟನೆ ಮುಂದಿಟ್ಟು ಕೊಂಡು ವೃತ್ತಿಪರ ಗೂಂಡಾ ನಾಗಿರುವ ಮುನಿಯಲ್ಲಪ್ಪ ಹಾಗೂ ಇವನ ಕಡೆಯ ಪುಂಡರ ಉಪಟಳವನ್ನು ಎಲ್ಲಾ ರೀತಿಯಲ್ಲೂ ಎದುರಿಸಲು ಇದೀಗ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕಾರ್ಮಿಕರು ದೃಢ ಸಂಕಲ್ಪ ಮಾಡಿರುತ್ತಾರೆ.

- ಮೆಲ್ಕಿಯೋರ್.ಆರ್.ಡಿ.

ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಮಾಯ!

ಪುಟ 7 ರಿಂದ

ಅಲ್ಲದೆ ಬ್ಯಾಂಕು ಕೊಟ್ಟ ಸಾಲದಲ್ಲಿ ಸುಮಾರು ರೂ. 1800 ಕೋಟಿಯಷ್ಟು ಹಣ ವಸೂಲಾಗುವ ಸಾಧ್ಯತೆಯೇ ಇಲ್ಲ ಎನ್ನಲಾಗಿದೆ. ಈ ವ್ಯವಸ್ಥೆಯಲ್ಲಿ ಬಡವರ ಮತ್ತು ಉಳ್ಳವರ ನಡುವಿನ ತಾರತಮ್ಯ ಹೇಗಿದೆ ನೋಡಿ. ರೈತ ಸಾಲ ಪಡಕೊಂಡರ ತೀರಿಸಲಾಗದೆ ಅವನೇ ಸಾಯುತ್ತಾನೆ. ಆದರೆ ಶ್ರೀಮಂತ ಸಾಲ ಪಡೆದು ತೀರಿಸದಿದ್ದಲ್ಲಿ, ಅವನಿಗೆ ಸಾಲ ಕೊಟ್ಟ ಸಂಸ್ಥೆ ಅಥವಾ ಬ್ಯಾಂಕು ಸಾಯುತ್ತದೆ!

ಖಾಸಗೀಕರಣದ ಮಂತ್ರ ಯಾತಕ್ಕಾಗಿ?

ಗ್ಲೋಬಲ್ ಟ್ರಸ್ಟ್ ಬ್ಯಾಂಕಿನಂತಹ ಬಹಳಷ್ಟು ನಿದರ್ಶನಗಳು ನಮ್ಮ ಕಣ್ಣಮುಂದಿವೆ. **ಖಾಸಗೀಕರಣದ ಬಗೆಗಿನ ಅತೀ ಪ್ರಚಾರದ ನಡುವೆಯೇ ಎದ್ದುಬರುವ ಇಂತಹ ಹಗರಣಗಳಿಂದಾಗಿ ಖಾಸಗೀಕರಣದ ಕಹಳೆಯ ಸೊಲ್ಲೇನೂ ಅಡಗಿಲ್ಲ. ಬದಲಾಗಿ ಇನ್ನಷ್ಟು ಕ್ಷೇತ್ರದ, ಮತ್ತಷ್ಟು ಹಂತದ ಖಾಸಗೀಕರಣಕ್ಕೆ ಆಳುವ ಜನ ಮುಂದಾಗುತ್ತಲೇ ಇರುತ್ತಾರೆ. ಕಣ್ಣುಮುಚ್ಚಿ ಕೊಂಡವರಿಗೆ ಪ್ರಪಂಚ ಕಾಣುವುದಿಲ್ಲ.** ಸುತ್ತಲಿನ ಕಪ್ಪಕೋಟಿಲೆಗಳು ಕಾಣುವುದಿಲ್ಲ ನಿಜ. ಆದರ ಕಣ್ಣುಮುಚ್ಚಿಕೊಂಡವರು ಹೊಂಡಕ್ಕೆ ಬೀಳುವುದೂ ಅಷ್ಟೇ ನಿಜ.

ದಕ್ಷಿಣ ಕೊರಿಯಾ, ಜಪಾನ್‌ಗಳಲ್ಲೂ ಅಲ್ಲಿನ ದೊಡ್ಡ ದೊಡ್ಡ ಖಾಸಗಿ ಬ್ಯಾಂಕುಗಳು ಇದೇ ರೀತಿ ಮುಳುಗಿದ್ದವು. ದಕ್ಷಿಣ ಕೊರಿಯಾ ವಿಶ್ವಬ್ಯಾಂಕಿನ ಸಾಲ ಪಡೆದು ಅಂತಹ ಬ್ಯಾಂಕುಗಳನ್ನು ರಕ್ಷಿಸಿದರೆ, ಜಪಾನಿನ ಸರ್ಕಾರ ಕಾರ್ಮಿಕರ ಪಿಂಚಣಿ ಯೋಜನೆಯ ನಿಧಿಯನ್ನೇ ಅದಕ್ಕಾಗಿ ಬಳಸಿತು. ಅಂದರೆ ಖಾಸಗೀ ನಷ್ಟ ತುಂಬಲು ಸರ್ಕಾರದ ಖಜಾನೆಯ ಬಳಕೆ. ಖಾಸಗೀಕರಣ ಬೇಕೆಂದು ಬೊಬ್ಬೆ ಹಾಕುವವರ ಅಪೇಕ್ಷೆಯೂ ಇಷ್ಟೆ. ಲೂಟಿ. ಎಲ್ಲಾ ಕಡೆಗಳಿಂದಲೂ, ಎಲ್ಲಾ ವಿಧದಿಂದಲೂ.

ಅವರ ಈ ಗುರಿ ಈಡೇರಲು ಬಹುದೊಡ್ಡ ತೊಡರೊಂದಿದೆ. ಅದೆಂದರೆ ನಮ್ಮ ದೇಶದ ಸಾರ್ವಜನಿಕ ಬ್ಯಾಂಕಿಂಗ್ ವ್ಯವಸ್ಥೆ. 1969 ರಲ್ಲಿ ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವ ಮುನ್ನ ಬ್ಯಾಂಕುಗಳು ಖಾಸಗಿ ತೆಕ್ಕೆಯಲ್ಲಿಯೇ ಇದ್ದವು. 1951 ರಲ್ಲಿ ಈ ದೇಶದಲ್ಲಿ ಒಟ್ಟು 566 ಬ್ಯಾಂಕುಗಳಿದ್ದವು. 1969 ರ ವೇಳೆಗೆ ಅವುಗಳ ಸಂಖ್ಯೆ 89ಕ್ಕೆ ಇಳಿದಿತ್ತು. ಅಂದರೆ ಕೇವಲ 18 ವರ್ಷಗಳಲ್ಲಿ 477 ಬ್ಯಾಂಕುಗಳು ಮುಚ್ಚಿ ಹೋಗಿದ್ದವು. ರಾಷ್ಟ್ರೀಕರಣದ ನಂತರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸ್ಥಿರತೆ ಮೂಡಿಬಂತು. ನಮ್ಮಲ್ಲೇನಾದರೂ ಸಾರ್ವಜನಿಕ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದೇ ಹೋಗಿದ್ದಲ್ಲಿ, ಇಡೀ ದೇಶದ ಆರ್ಥಿಕತೆಯೇ ಕುಸಿದುಹೋಗುವಂತಹ ಅಪಾಯವನ್ನು ಖಾಸಗಿ ಬ್ಯಾಂಕುಗಳು ತಂದೊಡ್ಡುತ್ತಿದ್ದವು. ಯುದ್ಧ ನಡೆದು ಹೆಣಗಳು ಉರುಳಿದಾಗ ಹದ್ದು, ನರಿಗಳಿಗೆ ಅಪಾರ ಸಂತಸವಂತೆ. ಅದೇ ರೀತಿ ಉದ್ಯಮಗಳು/ಸಂಸ್ಥೆಗಳು ಕುಸಿದಾಗ ಲಾಭ ಪಿಪಾಸುಗಳಿಗೆ, ವಂಚಕರಿಗೆ ಹರುಷವೋ ಹರುಷ. ಲೂಟಿಯ ಅವಕಾಶ ಇನ್ನಷ್ಟು ಹೆಚ್ಚಬೇಕಾದರೆ ಸಾರ್ವಜನಿಕ ಬ್ಯಾಂಕಿಂಗ್ ವ್ಯವಸ್ಥೆ ಇರಕೂಡದು. ಅದಕ್ಕೆಂದೇ ಖಾಸಗೀಕರಣದ ಜಪ. ಪ್ರಯತ್ನ.

ದಲಿತರ ಮೇಲೆ ದೌರ್ಜನ್ಯಗಳು ಮತ್ತು ಪ್ರತಿಭಟನೆಗಳು

ಗಂಗಾವತಿ

ದಲಿತರ ದೌರ್ಜನ್ಯದ ಘಟನೆಗಳು ಗಂಗಾವತಿ ತಾಲೂಕಿನಾದ್ಯಂತ ಅವಿರತವಾಗಿ ನಡೆಯುತ್ತಿದ್ದರೂ ದಲಿತ ಸಂಘಟನೆಗಳು ಮೌನವಹಿಸಿರುವುದು ವಿಪರ್ಯಾಸ, ಈ ಘಟನೆಗಳ ಬಗ್ಗೆ ಮತ್ತು ಭೂಮಾಲಕ, ದಲಿತವಿರೋಧಿ ಶಕ್ತಿಗಳ ಪರವಾಗಿರುವ ಪೊಲೀಸ್ ಆಡಳಿತದ ವಿರುದ್ಧ ನಿರಂತರವಾಗಿ ಹೋರಾಡಿ ದಲಿತರಿಗೆ ಹಾಗೂ ನೊಂದ ಮಹಿಳೆಯರಿಗೆ ನ್ಯಾಯ ದೊರಕಿಸಿದ ಕೃಷಿ ಕೂಲಿಕಾರರು ಹಾಗೂ ವಿವಿಧ ಎಡಸಾಮೂಹಿಕ ಸಂಘಟನೆಗಳ ಹೋರಾಟದ ವರದಿಯನ್ನು ಐಕ್ಯರಂಗಕ್ಕಾಗಿ ಸಂಗಾತಿ ರವಿಸಾವಳಗಿ ಬರೆದಿದ್ದಾರೆ.

ಪ್ರೇಮ ವಿವಾಹ ಪ್ರಕರಣ

ಇದೊಂದು ವಿಶಿಷ್ಟ ಪ್ರಕರಣ. ಪ್ರೀತಿಸಿ ಮದುವೆಯಾದ ಗಂಡ ನಾಪತ್ತೆಯಾದ ಕಾರಣ ಗಂಡನಿಗಾಗಿ ಮಾವನ ಮನೆ ಮುಂದೆ ಧರಣಿ ನಡೆಸಿ ಗಂಡನನ್ನು ಪಡೆದ ಯುವತಿಯ ವೀರಗಾಥೆ.

ತಾಲೂಕ್ಕಿನ ವಡ್ಡರಹಟ್ಟಿಯ ಅಕ್ಕಿ ಗಿರಣಿಯಲ್ಲಿ ಕೂಲಿಕೆಲಸ ಮಾಡುತ್ತಿದ್ದ ಲಕ್ಷ್ಮಿ ಎಂಬ ಯುವತಿ, ಅಲ್ಲೆ ಗುಮಾಸ್ತನಾಗಿ ಕಾರ್ಯ ನಿರ್ವಹಿಸುತ್ತಿದ್ದ ಬಸವರಾಜ ಗೌಡ ಎಂಬ ಭೂಮಾಲಕನ ಮಗನೊಂದಿಗೆ ಅನುರಕ್ತಗೊಂಡು ದಿನಾಂಕ 27.5.2004 ರಂದು ಕೊಪ್ಪಳದ ಮಲೆಮಲ್ಲೇಶ್ವರ ದೇವಸ್ಥಾನದಲ್ಲಿ ವಿವಾಹವಾಗಿದ್ದರು.

ಅಂತರಜಾತಿ ಮತ್ತು ಕೂಲಿ ಯುವತಿಯನ್ನು ಮಗ ಮದುವೆ ಮಾಡಿಕೊಂಡ ವಿಷಯ ತಿಳಿದು ಭೂಮಾಲಕ ಚನ್ನಪ್ಪಗೌಡ ತನ್ನ ಮಗ 30 ಸಾವಿರ ಕದ್ದುಕೊಂಡು ಹೋಗಿದ್ದಾನೆಂದು ದಿನಾಂಕ 1.6.2004 ರಂದು ಗ್ರಾಮೀಣ ಠಾಣೆಗೆ ದೂರು ಸಲ್ಲಿಸಿದ್ದ.



ಬಸವರಾಜು ಮತ್ತು ಲಕ್ಷ್ಮಿ

ಪ್ರಕರಣ ದಾಖಲಿಸಿಕೊಂಡ ಪೊಲೀಸರು ನವ ದಂಪತಿಗಳಲ್ಲದೆ, ಯುವತಿಯ ತಂದೆ ತಾಯಿಯನ್ನು ಪೊಲೀಸ್ ಠಾಣೆಗೆ ಕರೆಸಿ ಚಿತ್ರಹಿಂಸೆ ನೀಡಿದ್ದರು. ಈ ಸಂದರ್ಭದಲ್ಲಿ ಮದುವೆ ಮಾಡಿಕೊಂಡಿದ್ದ ಬಸವರಾಜ ತಾನು 30 ಸಾವಿರ ತೆಗೆದುಕೊಂಡು ಹೋಗಿದ್ದು ನಿಜ, ಅದರಲ್ಲಿ ಮದುವೆ ಉಡುಗೊರೆ, ಮದುವೆ ಖರ್ಚಿಗಾಗಿ 5 ಸಾವಿರ ಖರ್ಚಾಗಿದ್ದು ಉಳಿದ 25 ಸಾವಿರ ರೂಪಾಯಿಯನ್ನು ಪೊಲೀಸರಿಗೆ ಒಪ್ಪಿಸಿದ್ದ. ಇಷ್ಟಾದರೂ ತೃಪ್ತರಾಗದ ಗ್ರಾಮೀಣ ಠಾಣಾಧಿಕಾರಿ ಗುರುಬಸವರಾಜ ಯುವತಿ ಕಿವಿಓಲೆ, ಯುವಕನ ಕೈಯಲ್ಲಿನ ವಾಚನ್ನು ಕೂಡ ಕಸಿದುಕೊಂಡಿದ್ದರು. ಇದೇ ಸಂದರ್ಭದಲ್ಲಿ ಪೊಲೀಸರ ಜೊತೆ ಸೇರಿಕೊಂಡ ಯುವಕನ ತಂದೆ ಹಾಗೂ ಬಾಂಧವರು ಯುವಕನಿಗೆ ಹೆಂಡತಿಯನ್ನು ಬಿಡಲು ಚಿತ್ರಹಿಂಸೆ ನೀಡಿದ್ದರು. ಆದರೂ ಯುವಕ ಯುವತಿಯ ಜೊತೆ ಸಂಸಾರ ಮಾಡುತ್ತೇನೆಂದು ಹಠ ಹಿಡಿದ ಕಾರಣ ಗತ್ಯಂತರವಿಲ್ಲದೆ ದಂಪತಿಗಳನ್ನು ಬಿಟ್ಟು ಕಳಿಸಿದ್ದರು.

ಇವರ ದಾಂಪತ್ಯ ಬದುಕನ್ನು ಛಿದ್ರಗೊಳಿಸುವ ಉದ್ದೇಶದಿಂದ ಚನ್ನಪ್ಪಗೌಡ ಹಾಗೂ ಅವರ ಬಂಧುಗಳು ದಿನಾಂಕ 26.6.2004 ರಂದು ಬಸವರಾಜಗೌಡ-ಲಕ್ಷ್ಮಿ ವಾಸಿಸುತ್ತಿದ್ದ ಮನೆಗೆ ಬಂದು ನಿನ್ನ ತಾಯಿಯ ಆರೋಗ್ಯ ಚೆನ್ನಾಗಿಲ್ಲ ಬಾ ಎಂದು ಯುವಕನ್ನು ಕರೆದುಕೊಂಡು ಹೋದರು. ಅಂದಿನಿಂದ ಯುವಕನನ್ನು ಒತ್ತಾಯಪೂರಕವಾಗಿ ಗೃಹಬಂಧನದಲ್ಲಿಟ್ಟಿದ್ದರು. ಲಕ್ಷ್ಮಿ ತನ್ನ ಗಂಡನನ್ನು ಕಳುಹಿಸಿ ಎಂದು ಮಾವನ ಮನೆಗೆ ದೂರವಾಣಿಯ ಮುಖಾಂತರ ಮಾತನಾಡಿದರು. ಬಸವರಾಜ ನಮ್ಮ ಮನೆಯಲ್ಲಿ ಇಲ್ಲ ಎಂದು ಉತ್ತರಿಸಿದ್ದಾರೆ.

ಈ ವಿಷಯದ ಬಗ್ಗೆ ಲಕ್ಷ್ಮಿ ಗ್ರಾಮೀಣ ಠಾಣೆ ಹಾಗೂ ನಗರ ಠಾಣೆಗೆ ಅಲೆದು ಪತಿಯ ಅಪಹರಣದ ಬಗ್ಗೆ ದೂರು ಸಲ್ಲಿಸಲು ತೆರಳಿದರೆ, ಭೂಮಾಲಿಕರೊಂದಿಗೆ ಹೊಂದಾಣಿಕೆ ಮಾಡಿಕೊಂಡ ಪೊಲೀಸರು ದೂರನ್ನು ದಾಖಲಿಸದೆ ನಿನ್ನ ಮದುವೆ ದಾಖಲಾತಿ, ಫೋಟೋ ತೆಗೆದುಕೊಂಡು ಬಾ ಎಂದು ಬೆದರಿಸಿ ಕಳುಹಿಸಿದ್ದಾರೆ.

ಇದರಿಂದ ಕಂಗಾಲಾದ ಲಕ್ಷ್ಮಿ ತಾನು ಫೋಟೋ ತೆಗೆಸಿಕೊಂಡ ಕೊಪ್ಪಳದ ಸ್ಟುಡಿಯೋಕ್ಕೆ ಹೋದರೆ ಆಘಾತ ಕಾದಿತ್ತು. ಚನ್ನಪ್ಪಗೌಡ ಹಾಗೂ ಆತನ ಹಿಂಬಾಲಕರು ಸ್ಟುಡಿಯೋ ಮಾಲಕನಿಗೆ ಹಣಕೊಟ್ಟು ಛಾಯಾಚಿತ್ರದ ಮೂಲ ಹಾಗೂ ನೆಗೆಟಿವ್ ಎರಡನ್ನು ತೆಗೆದುಕೊಂಡು ಮದುವೆಯ ದಾಖಲಾತಿಗಳನ್ನೇ ನಾಶ ಮಾಡಿದ್ದರು. ಕೂಲಿಕಾರಳಾಗಿದ್ದ ಕಾರಣ ಮದುವೆ ನೊಂದಣಿ ಕೂಡ ಮಾಡಿಸದ ಕಾರಣ ಲಕ್ಷ್ಮಿ ಅತಂತ್ರ ಪರಿಸ್ಥಿತಿಗೆ ತಲುಪಿದ್ದಳು.

ಆ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಪ್ರಾಂತ ರೈತ ಸಂಘ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ವಿದ್ಯಾರ್ಥಿ ಫೆಡರೇಷನ್, ಅಂಗನವಾಡಿ ನೌಕರರ ಸಂಘದ ಸಂಗಾತಿಗಳು ಲಕ್ಷ್ಮಿಯಿಂದ ಒಂದು ಪತ್ರಿಕಾಗೋಷ್ಠಿ ನಡೆಸಿ ದಿನಾಂಕ 12.7.2004 ರಿಂದ ಮಾವನ ಮನೆಯ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ತಿಳಿಸಿದರು.

ಪತ್ರಿಕಾಗೋಷ್ಠಿಯ ನಂತರ ಮತ್ತೊಮ್ಮೆ ಪೊಲೀಸ್ ಠಾಣೆಗೆ ಧರಣಿಯ ಮಾಹಿತಿ ನೀಡಲು ಹೋದ ಲಕ್ಷ್ಮಿಗೆ ನಗರ ಠಾಣೆಯ ಅಧಿಕಾರಿ ಶಾಂತಕುಮಾರ ಒದ್ದು ಜೈಲಿಗೆ ಕಳುಹಿಸುತ್ತೇನೆಂದು ಅತ್ಯಂತ ಅವಾಚ್ಯ ಶಬ್ದ ಬಳಕೆ ಮಾಡಿ ಅವಹೇಳನ ಮಾಡಿ ಕಳುಹಿಸಿದ್ದಾನೆ.

ತಾನು ಜೈಲಿಗೆ ಹೋದರು ಚಿಂತೆ ಇಲ್ಲ ಎಂದು ಲಕ್ಷ್ಮಿ ದಿನಾಂಕ 13 ರಿಂದ ಮಾವನ ಮನೆಯ ಮುಂದೆ ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು. ಲಕ್ಷ್ಮಿಯ ಹೋರಾಟಕ್ಕೆ ಮಾನವೀಯ ಅನುಕಂಪ ತೋರಿದ ರಾಜ್ಯ, ಸ್ಥಳೀಯ, ಜಿಲ್ಲಾ ಪತ್ರಿಕೆಗಳ ವರದಿಗಾರರು ಹಾಗೂ ಈ ಟಿವಿ ಮತ್ತು ಉದಯ ಟಿವಿಯ ಸ್ನೇಹಿತರು ವ್ಯಾಪಕ ಪ್ರಚಾರ ನೀಡಿದ್ದು ಪೊಲೀಸ್ ಅಧಿಕಾರಿಗಳಿಗೆ ಕಷ್ಟಕ್ಕೀಡು ಮಾಡಿತು.

ಲಕ್ಷ್ಮಿಯ ಧರಣಿಗೆ ಬೆಂಬಲಿಸಿ ದಲಿತ ಮಹಿಳಾ ಒಕ್ಕೂಟ ದಿನಾಂಕ 15, ಸಾಕ್ಷರತಾ ಪ್ರೇರಕರ ಸಂಘ 16 ರಂದು ಧರಣಿ ಕುಳಿತುಕೊಂಡಿದ್ದರು. ದಿನಾಂಕ 19 ರಂದು ಹೊಸಳ್ಳಿ ಚಲೋ ಕಾರ್ಯಕ್ರಮ ರೂಪಿಸಿ ಸಾಮೂಹಿಕ ಸಂಘಟನೆಗಳು ದೊಡ್ಡ ಪ್ರಮಾಣದ ಹೋರಾಟ ರೂಪಿಸಿದ ಕಾರಣ ಗತ್ಯಂತರವಿಲ್ಲದ ಪೊಲೀಸರು ಬಸವರಾಜಗೌಡನಿಗೆ ಬೆದರಿಕೆ ಹಾಕಿ ಪತ್ರಿಕಾಗೋಷ್ಠಿಗೆ ಕಳುಹಿಸಿದರು.

ಏಕಾಏಕಿ ಪತ್ರಿಕಾಗೋಷ್ಠಿಗೆ ಹಾಜರಾದ ಬಸವರಾಜ ಬಂಧುಗಳ ಹಾಗೂ ಪೊಲೀಸರ ದೌರ್ಜನ್ಯದಿಂದ ಹೆದರಿಸಿ ಒತ್ತಾಯಪೂರ್ವಕವಾಗಿ ಮದುವೆ ಮಾಡಿದ್ದಾರೆ, ಕೆಲವರು (ಸಂಘಟನೆಗಳು) ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆಂದು ಪೊಲೀಸರ ಹೇಳಿಕೆಯ ಗಿಳಿಪಾಠವನ್ನು ಒಪ್ಪಿಸಿದ. ಪತ್ರಿಕಾಗೋಷ್ಠಿಯ ನಂತರ ಪೊಲೀಸರು ಯುವಕನ ಬಂಧನದ ನಾಟಕವಾಡಿ ಠಾಣೆಗೆ ಕರೆದುಕೊಂಡು ಹೋದರು.

ದಿನಾಂಕ 16 ರಂದು ಧರಣಿ ನಿರತ ಸ್ಥಳಕ್ಕೆ ಬಂದ ಪೊಲೀಸರು ಲಕ್ಷ್ಮಿಗೆ ಸಂಧಾನಕ್ಕೆ ಕರೆದರು. ಲಕ್ಷ್ಮಿ ತಾನೊಬ್ಬಳೆ ಬರುವುದಿಲ್ಲವೆಂದು ಹೇಳಿದ ಕಾರಣ ಸಮೂಹಿಕ ಸಂಘಟನೆಗಳನ್ನು ಪೊಲೀಸರು ಮಾತುಕತೆಗೆ ಕರೆದರು. ಮಾತುಕತೆ ಸಂದರ್ಭದಲ್ಲಿ ಯುವಕ ಇನ್ನೂ ಬಾಲಕನಿದ್ದಾನೆ ಎಂದು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಮದುವೆಯನ್ನು ಮುರಿಯುವುದಾಗಿ ಹೇಳಿದರು.

ಆದರೆ ಸಂಘಟನೆಯ ಮುಖಂಡರು ಅಪ್ರಾಪ್ತ ಬಾಲಕನಾಗಿದ್ದರೆ ಕೇಸ್ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಆಗ್ರಹಿಸಿದರು. ಯುವಕನ ಪಾಲಕರಿಂದ ಹಣ ತಿಂದ ಪೊಲೀಸರು ಜೈಲಿಗೆ ಕಳುಹಿಸಲು ಸಿದ್ದವಿಲ್ಲದ ಕಾರಣ ಬಸವರಾಜನಿಂದ ಹೇಳಿಕೆ ಪಡೆದು ದಂಪತಿಗಳನ್ನು ವಾಪಸ್ ಕಳುಹಿಸಿದ್ದಾರೆ. ಈ ಹೋರಾಟ ನಡೆದಾಗ ಶಾಂತಕುಮಾರನೆಂಬ ಸುದ್ದಿಶೂರ ಪೊಲೀಸ್ ಅಧಿಕಾರಿ ಸ್ಥಳೀಯ ಟಿ.ವಿ. ಚಾನಲ್‌ನಲ್ಲಿ ಸಂಘಟನೆಯ ಮುಖಂಡರ ಮೇಲೆ ಕ್ರಮಕೈಗೊಳ್ಳುವುದಾಗಿ ಬಡಾಯಿ ಕೊಚ್ಚಿಕೊಂಡಿದ್ದು ಅತ್ಯಂತ ಹಾಸ್ಯಾಸ್ಪದ.



ಮಾವನ ಮನೆ ಮುಂದೆ ಧರಣಿ ಕುಳಿತಿರುವ ಲಕ್ಷ್ಮಿ ಮತ್ತು ಅವರ [illegible]

ಲಕ್ಷ್ಮಿಗೆ ಬೆಂಬಲಿಸಿ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಗಿರಿಜಮ್ಮ, ಕೃಷಿಕೂಲಿಕಾರರ ಸಂಘದ ಬಾಳಪ್ಪ, ಪ್ರಾಂತ ರೈತ ಸಂಘದ ನಾಗರಾಜ, ಎಸ್‌ಎಫ್‌ಐನ ನಿರುಪಾದಿ, ಹುಲ್ಲೇಶ, ವೆಂಕಟೇಶ, ಸಾಕ್ಷರತಾ ಪ್ರೇರಕರ ಸಂಘದ ಝಾಕೀರ್ ಹುಸೇನ್ ಪೊಲೀಸರೊಂದಿಗೆ ವಾಗ್ವಾದ ನಡೆಸಿ ಲಕ್ಷ್ಮಿಗೆ ನ್ಯಾಯ ದೊರಕಿಸಿಕೊಟ್ಟಿದ್ದು ತಾಲ್ಲೂಕಿನಾದ್ಯಂತ ಮೆಚ್ಚುಗೆ ವ್ಯಕ್ತವಾಗಿದೆ.

ತಾಲೂಕಿನ ದಲಿತರ-ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ವಿಷಯದಲ್ಲಿ ಪೊಲೀಸರ ನಿಷ್ಕ್ರಿಯತೆ ಹಾಗೂ ದಬ್ಬಾಳಿಕೆಯನ್ನು ವಿರೋಧಿಸಿ ಬೃಹತ್ ಚಳುವಳಿಯ ಸಿದ್ಧತೆ ನಡೆಯುತ್ತಿದೆ.

ದಲಿತ - ಮಹಿಳಾ ವಿರೋಧಿ ಪೊಲೀಸ್ ಅಧಿಕಾರಿ

ತುಂಗಭದ್ರೆಯ ನೀರಿನ ಸೌಲಭ್ಯ ಪಡೆದ ಗಂಗಾವತಿ ತಾಲೂಕು ಅನೇಕ ಭೂಮಾಲಕರನ್ನು ಸೃಷ್ಟಿಸಿದೆ. ಪುರಾತನ ಪಾಳೆಗಾರಿಕೆ ಮೌಲ್ಯಗಳನ್ನುಳಿಸಿ ಕೊಂಡಿರುವ ಇಲ್ಲಿನ ಪಾಳೆಗಾರರು ತಮ್ಮ ಗತ್ತುಗೈರತ್ತಿನಿಂದ ನಿರಂತರವಾಗಿ ದಲಿತ-ಮಹಿಳಾ ಕೂಲಿಕಾರರನ್ನು ಶೋಷಿಸುತ್ತಿದ್ದಾರೆ. ಇವರ ಹಣ, ರಾಜಕೀಯ ಪ್ರಭಾವಕ್ಕೊಳಗಾಗಿ ಇಲ್ಲಿನ ಪೊಲೀಸ್ ವೃತ್ತಾಧಿಕಾರಿ ಶಾಂತಕುಮಾರ ಇವರನ್ನು ರಕ್ಷಿಸುತ್ತಿದ್ದಾರೆ. ಈ ಘಟನೆಗಳ ಬಗ್ಗೆ ಮಧ್ಯಪ್ರವೇಶಿಸಿ ದಲಿತರ ಹಕ್ಕುಗಳ ಬಗ್ಗೆ ವಿಚಾರಿಸಿ ಪ್ರತಿಭಟಿಸಿದ ಎಡ ಸಂಘಟನೆಗಳ ಮುಖಂಡರನ್ನು ಖೊಟ್ಟಿ ಪ್ರಕರಣದಲ್ಲಿ ದಾಖಲಿಸಿ ನ್ಯಾಯಾಲಯಕ್ಕೆ ಕಳಿಸುತ್ತಿರುವುದನ್ನು ವಿರೋಧಿಸಿ ಈಗಾಗಲೇ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕುಸಮಿತಿ ನೇತೃತ್ವದಲ್ಲಿ ಹೋರಾಟ ಪ್ರಾರಂಭವಾಗಿದೆ.

ಮರಕುಂಬಿ ಗ್ರಾಮ ಘಟನೆ: ಈ ಹಿಂದೆ ತಾಲೂಕಿನ ಮರಕುಂಬಿ ಗ್ರಾಮದ ದಲಿತ ಕೂಲಿಕಾರರ ಮೇಲೆ ಭೂಮಾಲಕ ದೌರ್ಜನ್ಯದ ಬಗ್ಗೆ ಹಿರಿಯ ಸಂಗಾತಿ ನಿತ್ಯಾನಂದ ಸ್ವಾಮಿಯವರ ವರದಿಗಳನ್ನು ಓದಿದ್ದೀರಿ. ಈ ಪ್ರಕರಣದ ಬಗ್ಗೆ ಕೃಷಿಕೂಲಿಕಾರರ ಸಂಘದ ನಿರಂತರ ಹೋರಾಟದ ಫಲವಾಗಿ ಹಲ್ಲೆಗೊಳಗಾದ 5 ಜನ ಕೂಲಿಕಾರರಿಗೆ ಸರಕಾರದ ಪರವಾಗಿ ತಲಾ 25 ಸಾವಿರ ರೂಪಾಯಿ ಪರಿಹಾರ ದೊರಕಿದೆ. ಕೂಲಿಕಾರರ ಭವಿಷ್ಯದ ದುಡಿಮೆಗಾಗಿ ಈಗಾಗಲೇ ಜಿಲ್ಲಾಧಿಕಾರಿಗಳಿಂದ ಎತ್ತು-ಬಂಡಿ ಸಾಲದ ಸೌಲಭ್ಯ ದೊರಕಿದೆ. ಜೊತೆಗೆ ದಲಿತ ಕೇರಿಯ 40 ಕುಟುಂಬಗಳಿಗೆ ಆಶ್ರಯ ಮನೆಗಳ ಭರವಸೆಯನ್ನು ಜಿಲ್ಲಾಧಿಕಾರಿಗಳು ನೀಡಿದ್ದು ಜಮೀನು ಖರೀದಿಗಾಗಿ ತಹಶೀಲ್ದಾರರಿಗೆ ಸೂಚಿಸಿದ್ದಾರೆ.

ಈ ಪ್ರಕರಣದ ಹೊಣೆಗಾರನಾದ ತಿರುಮಲೇಶ್‌ಗೆ ಮಾಜಿ ಸಂಸದ ರಾಮುಲು, ತಾ.ಪಂ. ಸದಸ್ಯ ತುಕಾರಾಮ ಸ್ವಜಾತಿ ಅಭಿಮಾನದಿಂದ ಬೆಂಬಲ ನೀಡಿದ್ದರು. ಕೃಷಿಕೂಲಿಕಾರರ ಹೋರಾಟಕ್ಕೆ ಮಣಿದ ಪೊಲೀಸರು ಅಟ್ರಾಸಿಟಿ ಕೇಸ್ ದಾಖಲಿಸಿದ್ದು ಹೋರಾಟಕ್ಕೆ ಸಂದ ಜಯವಾಗಿದೆ.

ಹಾಸನ ಜಿಲ್ಲೆಯಲ್ಲಿ ಜೀತವಿಮುಕ್ತರ ಹೋರಾಟ

'ಗಂಗೂರು ಜೀತ ವಿಮುಕ್ತರಿಗೆ ಇನ್ನೂ ಭೂಮಿ ಸಿಕ್ಕಿಯೇ ಇಲ್ಲ'

32 ವರುಷಗಳ ಹಿಂದೆ 'ಜೀತವಿಮುಕ್ತ'ರಾದ ಅರಕಲಗೂಡಿನ ದಲಿತರಿಗೆ ಭೂಮಿ ದಕ್ಕಿಯೇ ಇಲ್ಲ. ಮೇಲ್ಜಾತಿ ಭೂಮಾಲೀಕರು ಇದಕ್ಕೆ ಅಡ್ಡಗೋಡೆಯಾಗಿಬಿಟ್ಟಿದ್ದಾರೆ. ಭಾರೀ ಭರವಸೆ ಕೊಟ್ಟು ಪ್ರಚಾರ ಗಿಟ್ಟಿಸಿದ ಸರ್ಕಾರದ ಚುನಾಯಿತ ಪ್ರತಿನಿಧಿಗಳು ಅವರನ್ನು ವಂಚಿಸುತ್ತಲೇ ಬಂದಿದ್ದಾರೆ. ಈ ಎಡಬಿಡಂಗಿ ದ್ರೋಹದ ವಿರುದ್ಧ ಶ್ರಮಜೀವಿಗಳು ಸಮರ ಹೂಡಿದ್ದಾರೆ. ಅರಣ್ಯಭೂಮಿಯಲ್ಲಿ ನೆಲ ಹಿಡಿದು ನೆಲೆಗಾಗಿ ಘರ್ಜಿಸುತ್ತಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಅರಕಲಗೂಡಿನ ಗಂಗೂರು ಈಗ ರಾಜ್ಯದ ಗಮನ ಸೆಳೆಯುತ್ತಿದೆ. ಕಳೆದ ಒಂದು ತಿಂಗಳಿನಿಂದ ಇಲ್ಲಿನ ಜೀತ ವಿಮುಕ್ತ ದಲಿತ ಕುಟುಂಬಗಳು ಭೂಮಿಯ ಬೇಡಿಕೆಗಾಗಿ ಅರಣ್ಯ ಇಲಾಖೆಗೆ ಸೇರಿದ ಗೊಬ್ಬಳಿ ಪ್ರದೇಶದಲ್ಲಿ ಅಕ್ರಮ ಗುಡಿಸಲು ನಿರ್ಮಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಹಿನ್ನೆಲೆ: ಅರಕಲಗೂಡು ತಾಲೂಕಿನ ಕೊಣನೂರು ಹೋಬಳಿಗೆ ಸೇರಿದ ಗ್ರಾಮ ಗಂಗೂರು. ಸವರ್ಣೀಯರ ಪ್ರಾಬಲ್ಯ ಈ ಗ್ರಾಮದಲ್ಲಿ ಈಗ ಸುಮಾರು 1000 ಮನೆಗಳು ವಾಸವಾಗಿವೆ. ಇಲ್ಲಿ ವಾಸವಾಗಿದ್ದ ಸುಮಾರು 100 ದಲಿತ ಕುಟುಂಬಗಳನ್ನು ಸವರ್ಣೀಯರ ಜಮೀನ್ದಾರರು ಜೀತಕ್ಕೆ ಇಟ್ಟುಕೊಂಡಿದ್ದರು. 1972 ರಲ್ಲಿ ಆಗಿನ ತಹಶೀಲ್ದಾರ್ ಕೃಷಿ ಭೂಮಿ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಿದ್ದರು. ಅದಕ್ಕಾಗಿ ದಲಿತ ಕುಟುಂಬಗಳಿಂದ ಶುಲ್ಕವಾಗಿ 'ಕಿಮ್ಮತ್' ನ್ನು ಪಡೆದುಕೊಂಡಿದ್ದರು. ಆದರೆ, ಸವರ್ಣೀಯರು ಈ ಪ್ರಕ್ರಿಯೆಗೆ ತಡೆ ಹಾಕಿ ಜೀತ ಮುಂದುವರೆಯುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

1992 ರ ವರೆಗೆ ಈ ಗ್ರಾಮದ ಬಗ್ಗೆ ಹಾಸನ ಜಿಲ್ಲೆಯವರಿಗೆ ಅಷ್ಟಾಗಿ ತಿಳಿದಿರಲಿಲ್ಲ. ಇಲ್ಲಿನ ಜೀತ ಪ್ರಕರಣ ಬೆಳಕಿಗೆ ಬಂದಾಗ ರಾಜ್ಯದ ಜನತೆಯೇ ಬೆಚ್ಚಿ ಬಿದ್ದಿದ್ದರು. ವಿಧಾನಸಭೆಯಲ್ಲಿ ಗಂಗೂರು ಬಗ್ಗೆ ಪ್ರಸ್ತಾಪವಾದಾಗ ರಾಜ್ಯ ಸರ್ಕಾರ ಎಚ್ಚರಗೊಂಡಿತ್ತು. ಆಗಿನ ಜಿಲ್ಲಾಧಿಕಾರಿ ಮಹೇಂದ್ರ ಜೈನ್ ಸ್ಥಳಕ್ಕೆ ಭೇಟಿ ನೀಡಿ ಜೀತದಾಳುಗಳನ್ನು ಬಿಡುಗಡೆ ಮಾಡಿದರು. ಆ ಸಂದರ್ಭದಲ್ಲಿ ಜೀತ ವಿಮುಕ್ತರಿಗೆ ನೀಡಬೇಕಾದ ಕನಿಷ್ಟ ಸೌಲಭ್ಯಗಳನ್ನು ನೀಡಲಾಗಿತ್ತು. ಪ್ರತಿಯೊಬ್ಬರಿಗೆ ಸುಮಾರು 6000 ರೂ. ಮೌಲ್ಯದ ದನ-ಕರುಗಳನ್ನು ನೀಡಲಾಗಿತ್ತು. ಆ ಸಾಲವನ್ನು ಬಹುತೇಕ ದಲಿತರು ತೀರಿಸಿಯೂ ಆಗಿದೆ. ಆದರೆ ಬರ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಇವನ್ನು ಕಳೆದುಕೊಂಡ ಜೀತ ವಿಮುಕ್ತರು ಮತ್ತೆ ಅದೇ ಜಮೀನ್ದಾರರ ಹೊಲಗಳಲ್ಲಿ ಕೂಲಿಗೆ ಶರಣಾದರು.

ಈಡೇರದ ಭೂಮಿಯ ಭರವಸೆ

ಈಗ ಮತ್ತೆ ಗಂಗೂರು ರಾಜ್ಯದ ಗಮನ ಸೆಳೆಯುತ್ತಿದೆ. 1994 ರಲ್ಲಿ ನೀಡಲಾದ ಭೂಮಿಯ ಭರವಸೆ ಇನ್ನೂ ಈಡೇರಿಲ್ಲ. ಇದಕ್ಕೆ ಸತತ 10 ವರ್ಷ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ಈ ಸಮಸ್ಯೆಗೆ ಗಮನ ನೀಡುವ ಗೋಜಿಗೂ ಹೋಗಲಿಲ್ಲ. ಜೀತ ವಿಮುಕ್ತರಿಗೆ ಕಂದಾಯ ಭೂಮಿ ಗುರುತಿಸುವ ಪ್ರಕ್ರಿಯೆ ನಿಂತುಹೋಯಿತು. ಭರವಸೆ ಕೇವಲ ಕಾಗದಲ್ಲೇ ಉಳಿಯಿತು. ಇದರಿಂದ ಸಹನೆ ಕಳೆದುಕೊಂಡ ಗಂಗೂರಿನ ಜೀತವಿಮುಕ್ತ ಕುಟುಂಬಗಳು ಜೂನ್ 25 ರಂದು ಪ್ರತಿಭಟನೆ ಆರಂಭಿಸಿಯೇ ಬಿಟ್ಟರು. ಗಂಗೂರು ಸಮೀಪದ ಗೊಬ್ಬಳಿ ಪ್ರದೇಶದ ಅರಣ್ಯ ಪ್ರದೇಶವೆಂದು ಗುರುತಿಸಲ್ಪಟ್ಟ ಜಮೀನಿನಲ್ಲಿ ಜಿಲ್ಲಾಡಳಿತಕ್ಕೆ ಸವಾಲು ಹಾಕಿದರು.

ಸಂಘಟನೆಗಳ ಮಧ್ಯಪ್ರವೇಶ

ಜೀತವಿಮುಕ್ತರ ಹೋರಾಟ ತೀವ್ರಗೊಳ್ಳುತ್ತಿರುವಂತೆಯೇ ಹಲವು ಸಂಘಟನೆಗಳು ಗಮನ ಹರಿಸಿವೆ. ಸಿಪಿಐ(ಎಂ), ಡಿವೈಎಫ್ಐ ನಾಯಕರು ಅಲ್ಲಿಗೆ ಭೇಟಿ ನೀಡಿದ್ದಾರೆ. ಹೋರಾಟ ಯಶಸ್ವಿಗೊಳಿಸಲು ವಿವಿಧ ಹಂತಗಳಲ್ಲಿ ಮದ್ಯ ಪ್ರವೇಶ ಮಾಡಲು ಮುಂದಾಗಿವೆ. ಅಲ್ಲದೇ ಕೋಲಾರ ಮೂಲದ ಜೀವಿಕಾ ಸಂಸ್ಥೆ, ಬಹುಜನ ಸಮಾಜ ಪಕ್ಷ ಕೂಡ ಮಧ್ಯಪ್ರವೇಶ ಮಾಡಿ ಬೆಂಬಲ ನೀಡಿ ಒಲವು ಗಳಿಸಲು ಯತ್ನಿಸಿವೆ. ಅರಕಲಗೂಡಿನಲ್ಲಿ ನಾಲ್ಕು ಬಣಗಳಾಗಿ ಒಡೆದುಹೋಗಿರುವ ಡಿಎಸ್ಎಸ್ ನಾಯಕರಲ್ಲೇ ಈ ಬಗ್ಗೆ ಭಿನ್ನಾಭಿಪ್ರಾಯವಿದ್ದು, ಹೋರಾಟದಲ್ಲಿ ಭಾಗವಹಿಸುವ ಕುರಿತು ಗೊಂದಲ ಇನ್ನೂ ಮುಂದುವರೆದಿದೆ.

ರಾಜಕೀಯ ನಾಯಕರ ನಿರ್ಲಕ್ಷ್ಯ

ಆರಂಭದಿಂದಲೂ ಜಿಲ್ಲೆಯ ಅಧಿಕಾರಸ್ಥ, ರಾಜಕೀಯ ಪಕ್ಷಗಳು ತಮ್ಮ ಹಿತಕ್ಕಾಗಿ ಈ ಸಮಸ್ಯೆಯನ್ನು ಜೀವಂತವಾಗಿರಿಸಿಕೊಂಡೇ ಬಂದವು. ಭೂಮಿ ಮಂಜೂರಾಗಿದ್ದರೂ 1999 ರಲ್ಲಿ ಶಾಸಕರಾಗಿದ್ದ ಎ.ಮಂಜು ಹಂಚಲು ಮುಂದಾಗಲಿಲ್ಲ. ಜನಪ್ರತಿನಿಧಿಗಳ ಈ ಅಸಹಕಾರ ಇದಕ್ಕೆ ಕಾರಣ ಎಂದು ಈಗ ರಾಗ ಎಳೆಯುತ್ತಿದ್ದಾರೆ. ಆ ಪ್ರದೇಶದ ಪ್ರಭಾವಿ ರಾಜಕಾರಣಿ ಈಗಿನ ಶಾಸಕ ಎ.ಟಿ.ರಾಮಸ್ವಾಮಿ ಕೂಡ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಲ್ಲಿ ಗಮನ ನೀಡಲಿಲ್ಲ. ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಇವರು ಹೆಜ್ಜೆ ಇಡುತ್ತಿರುವುದರಿಂದ ಜೀತವಿಮುಕ್ತರಿಗೆ ಪರಿಹಾರ ಎನ್ನುವುದು ಮರೀಚಿಕೆಯಾಗಿಯೇ ಉಳಿಯಿತು.

ಸರ್ಕಾರ ನಿರ್ಲಕ್ಷ್ಯ

ಕಳೆದ 10 ವರ್ಷಗಳಲ್ಲಿ ಸರ್ಕಾರ ಕೂಡ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ-ಪಂಗಡಗಳ ಆಯೋಗ ಗಂಗೂರಿನ ಕಡೆ ಕಣ್ಣೆತ್ತಿಯೂ ನೋಡದಿರುವುದು ವಿಷಾದಕರ ಸಂಗತಿ.

ಹೋರಾಟ ತೀವ್ರತೆ

ಈಗ ಹೋರಾಟ ತೀವ್ರತೆ ಪಡೆಯುತ್ತಿರುವುದರಿಂದ ಎಲ್ಲಾ ನಾಯಕರೂ ಅನಿವಾರ್ಯವಾಗಿ ಅಲ್ಲಿಗೆ ಹೋಗಬೇಕಾಯಿತು. ಶಾಸಕ ಎ.ಟಿ.ರಾಮಸ್ವಾಮಿ ಭೂಮಿಯನ್ನು ಹುಡುಕಲು ತಹಶೀಲ್ದಾರರಿಗೆ ಆದೇಶ ನೀಡಿದ್ದು, ನೀ ಸತ್ತಂತೆ ಮಾಡು ನಾ ಅತ್ತಂತೆ ಮಾಡುವೆ ಎಂಬ ನಾಟಕದಂತಾಯಿತು. ಸ್ಥಳೀಯ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಜೀತವಿಮುಕ್ತ ಜಿ.ಎಚ್.ಚಂದ್ರಯ್ಯ ಹೋರಾಟದ ನೇತೃತ್ವ ವಹಿಸಿದ್ದು, ಜನಪರ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ನಮ್ಮ ಸಮಸ್ಯೆಗೆ ಪರಿಹಾರ ಬೇಕು ಎನ್ನುವ ಇವರಿಗೆ ಹೋರಾಟದಲ್ಲಿ ಅಚಲ ವಿಶ್ವಾಸವಿದೆ.

ಪ್ರಜಾಪ್ರಭುತ್ವ ಬುಡಮೇಲು......

ಪುಟ 5 ರಿಂದ

ತೋರಿಸಿದರು. ಇತರ ಕಾರಣಗಳೆಂದರೆ ಎನ್‌ಡಿಎ ಆಡಳಿತದ ಆರ್ಥಿಕ ನೀತಿಗಳು, ಭ್ರಷ್ಟಾಚಾರ, ವಿದೇಶಾಂಗ ನೀತಿಯ ಪ್ರಮಾದಗಳು ಇತ್ಯಾದಿ. ಆದರೆ ಆರ್‌ಎಸ್‌ಎಸ್ ಈ ಬಗ್ಗೆ ಒಂದು ಕಠಿಣ ನಿಲುವು ತಳೆದ ಕೂಡಲೇ ವಾಜಪೇಯಿ ಬೇರೆಯೇ ಮಾತಾಡಲಾರಂಭಿಸಿದರು.

ಏನೇ ಇರಲಿ, ಆರ್‌ಎಸ್‌ಎಸ್ ತನ್ನ ವಿಚಾರವನ್ನು ಸ್ಪಷ್ಟಪಡಿಸಿದೆ - ಪರಾಭವಕ್ಕೆ ಕಾರಣ ಹುಡುಕಲು ಬೇಕಾದರೆ ಉತ್ತರ ಧ್ರುವಕೂ ಹೋಗಿ, ಆದರೆ ಅದು ಹಿಂದುತ್ವದಿಂದ ಎಂದು ಮಾತ್ರ ಸೂಚಿಸಲೂ ಹೋಗಬೇಡಿ. ಈ ಪ್ರಕ್ರಿಯೆಯಲ್ಲಿ ಬಡ ಮೋದಿಗೆ (ತಾತ್ಕಾಲಿಕ) ಬಿಡುಗಡೆ ಸಿಕ್ಕಿತು.

ಧರ್ಮ ಮತ್ತು ರಾಜಕೀಯ ಮತ್ತು ಅಡ್ವಾಣಿ

ಈ ಹಿನ್ನೆಲೆಯಲ್ಲಿಯೇ ಅಡ್ವಾಣಿ ಧರ್ಮ ಮತ್ತು ರಾಜಕೀಯವನ್ನು ಬೆರೆಸುವ ಬಗ್ಗೆ ವಾದ ಮಾಡುತ್ತಾ ಪಕ್ಷದಲ್ಲಿ ತನ್ನ ಸ್ಥಾನವನ್ನು ಇನ್ನಷ್ಟು ಗಟ್ಟಿಗೊಳಿಸಲು ಪ್ರಯತ್ನಿಸಿದ್ದಾರೆ. ಜುಲೈ 26 ರಂದು ಅಹಮದಾಬಾದಿನ ಒಂದು ಸಮಾರಂಭದಲ್ಲಿ ಮಾತನಾಡುತ್ತಾ ಬಿಜೆಪಿ ಗಿಡುಗಗಳ ಈ ಮುಖಂಡ ಧರ್ಮ ಮತ್ತು ರಾಜಕೀಯವನ್ನು ಬೆರೆಸಬಾರದು ಎಂಬುದರ ವಿರುದ್ಧ ಮಾತಾಡಿದರು, 'ರಾಜಕೀಯದಲ್ಲಿ ಧರ್ಮವಿಲ್ಲದಿದ್ದರೆ ಅದರಲ್ಲಿ ನನಗೆ ಆಸಕ್ತಿಯಿಲ್ಲ' ಎಂದರು. "ಭಾರತದಲ್ಲಿ ಸಂಸ್ಕೃತಿಯಲ್ಲಿ ಧರ್ಮ ಬೆರೆತಿರುವಂತೆ, ರಾಜಕೀಯದಲ್ಲು ಬೆರೆತಿದೆ" ಎಂದೂ ಉಪದೇಶ ನೀಡಿದರು. ಇದು ಆರ್‌ಎಸ್‌ಎಸ್ ನ ಸರ್ವವಿಧಿತ ವಿಚಾರ. ಅಷ್ಟೇ ಅಲ್ಲ, ಅದರ ಆಧಾರವೇ ಈ ವಿಚಾರ.

ಅಡ್ವಾಣಿಯವರಿಗೆ ಭಾರತದ ಸಂಸ್ಕೃತಿಯ ಬಗ್ಗೆ ಎಷ್ಟು ತಿಳಿದಿದೆಯೆಂಬ ವಿಚಾರದಲ್ಲಿ ನಮಗೇನೂ ಆಸಕ್ತಿಯಿಲ್ಲ, ಆದರೆ ಒಂದೇ ಉದಾಹರಣೆ ತಗೊಳ್ಳಿ - ಭಾರತೀಯ ತತ್ವಶಾಸ್ತ್ರದ ಒಂಬತ್ತು ಪಂಥಗಳಲ್ಲಿ ಆರು ನಾಸ್ತಿಕವಾದಿ ಪಂಥಗಳು - ಅದರಲ್ಲಿ ಮೂರು 'ವೈದಿಕ' ಪಂಥಗಳೂ ಸೇರಿವೆ!

ಇನ್ನು ತತ್ವವನ್ನು ಬದಿಗಿಟ್ಟು ಆಚರಣೆಗೆ ಬಂದರೂ ಭಾರತ ಎಂದೂ ಒಂದು ಮತೀಯ ಪ್ರಭುತ್ವವಾಗಿರಲಿಲ್ಲ. ನಿಜ, ಕೆಲವು ಅರಸರು ಧರ್ಮವನ್ನು ಸಂಕುಚಿತ ಉದ್ದೇಶಗಳಿಗೆ ಬಳಸಲು, ದುರುಪಯೋಗಪಡಿಸಲು ಪ್ರಯತ್ನಿಸಿದರು. 1857 ರ ನಂತರ ಹಾಗೂ ಅದರ ಮೊದಲೂ ಕೂಡಾ ನಮ್ಮ ಸ್ವಾತಂತ್ರ್ಯ ಹೋರಾಟ ಜಾತ್ಯತೀತ ತತ್ವಗಳ ಮೇಲೆ ನಿಂತಿತ್ತು. ಗಾಂಧೀಜಿಯವರ ಮೊದಲಿನ ಮಂದಗಾಮಿಗಳು ಮತ್ತು ಉಗ್ರಗಾಮಿಗಳು ಸ್ವತಃ ಧಾರ್ಮಿಕ ಜನಗಳಾಗದಿದ್ದರೂ ಅವರು ತಮ್ಮ ದೌರ್ಬಲ್ಯಗಳ ನಡುವೆಯೂ ಜಾತ್ಯತೀತರಾಗಿದ್ದರು. ಏಕೆಂದರೆ ಅವರ ದರ್ಮ ಯಾವುದೇ ಇನ್ನೊಂದು ಧರ್ಮಕ್ಕೆ ವಿರುದ್ಧವಾಗಿರಲಿಲ್ಲ. 1905 ರಲ್ಲಿ ಬಂಗಾಳ ವಿಭಜನೆಯ ವಿರುದ್ಧ ಹಿಂದೂಗಳೂ, ಮುಸಲ್ಮಾನರೂ ಒಟ್ಟೊಟ್ಟಿಗೇ ಹೋರಾಡಿದರು. ಒಂದು ದಶಕದ ನಂತರ ಸ್ವಾಮಿ ಶ್ರದ್ಧಾನಂದರನ್ನು ದಿಲ್ಲಿಯ ಜಾಮಾ ಮಸೀದಿಯ ಪೀಠದಿಂದ ಒಂದು ಅಪಾರ ಜನಸಮೂಹವನ್ನು ಉದ್ದೇಶಿಸಿ ಮಾತನಾಡಲು ಆಹ್ವಾನಿಸಿದ್ದನ್ನು ನಾವು ನೋಡುತ್ತೇವೆ. 1919 ರಲ್ಲಿ ಜಲಿಯಾನ ವಾಲಾ ಬಾಗ್‌ನಲ್ಲಿ ಹಿಂದೂಗಳು, ಮುಸಲ್ಮಾನರು, ಸಿಕ್ಖರ ರಕ್ತ ಒಟ್ಟಿಗೇ ಸುರಿಯಿತು. ಗಾಂಧೀಜಿ ಖಿಲಾಫತ್ ಆಂದೋಲನವನ್ನು ತನ್ನದಾಗಿಸಿಕೊಂಡರು. ಗದರ್ ಕ್ರಾಂತಿಕಾರಿಗಳು, ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು, ಕಾಂಗ್ರೆಸ್ ಸೋಶಲಿಸ್ಟ್ ಹಾಗೂ ಕಮ್ಯುನಿಸ್ಟ್ ಆಂದೋಲನಗಳು ಹಾಗೂ ಇನ್ನೂ ಹಲವು ಧಾರೆಗಳು ನಮ್ಮ ಸ್ವಾತಂತ್ರ್ಯ ಹೋರಾಟದ ಜಾತ್ಯತೀತ ಸ್ವರೂಪಕ್ಕೆ ಸಾಕ್ಷಿಗಳು. ಅಡ್ವಾಣಿಯವರು ನಮ್ಮ ಈ ಅಮೂಲ್ಯ ಪರಂಪರೆಯನ್ನು ಉಪೇಕ್ಷಿಸುತ್ತಾರೆ.



ಅಡ್ವಾಣಿ ಉವಾಚ

ಇಲ್ಲಿ ನಾವು ಸ್ವತಃ ಅಡ್ವಾಣಿಯವರು ನವೆಂಬರ್ 18, 2002 ರಂದು ಲೋಕಸಭೆಯಲ್ಲಿ ಏನು ಹೇಳಿದರು ಎಂಬುದನ್ನು ನೆನಪಿಸಿದರೆ ತಪ್ಪೇನೂ ಆಗದು. ಗುಜರಾತ್ ಪ್ರಶ್ನೆಯ ಮೇಲೆ ನಿಲುವಳಿ ಸೂಚನೆಯ ಮೇಲೆ ಚರ್ಚೆಗೆ ಉತ್ತರ ಕೊಡುತ್ತಾ ಆಗ ಗೃಹಮಂತ್ರಿ - ಕಂ - ಉಪ ಪ್ರಧಾನಿಯಾಗಿದ್ದ ಇವರು ಕೆಲವು ಸರಿಯಾದ ಅಂಶಗಳನ್ನು ಮುಂದಿಟ್ಟಿದ್ದರು. ಅದರ ಸಾರಾಂಶ ಹೀಗಿದೆ - 1. ಭಾರತ ಎಂದೆಂದೂ ಜಾತ್ಯತೀತ ರಾಷ್ಟ್ರವಾಗಿತ್ತು, ಅದು ಜಾತ್ಯತೀತ ರಾಷ್ಟ್ರವಾಗಿಯೇ ಉಳಿಯುತ್ತದೆ, 2. ಸಂವಿಧಾನಸಭೆ ಸ್ವತಂತ್ರ ಭಾರತದ ಸಂವಿಧಾನವನ್ನು ಸಿದ್ಧಪಡಿಸುತ್ತಿದ್ದಾಗ ಒಬ್ಬನೇ ಒಬ್ಬ ಸದಸ್ಯ ಕೂಡಾ ಭಾರತವನ್ನು ಒಂದು ಮತೀಯ ಪ್ರಭುತ್ವ ಎಂದು ಘೋಷಿಸಬೇಕೆಂದು ಆಗ್ರಹಿಸಲಿಲ್ಲ ಮತ್ತು 3. ಭಾರತದ ಜಾತ್ಯತೀತತೆ ಯಾವುದೇ ಒಂದು ಪಕ್ಷ ಅಥವಾ ಮುಖಂಡನ ಕೊಡುಗೆಯಲ್ಲ, ಅದು ಭಾರತೀಯ ಜನಸಮೂಹಗಳ ನಡುವಿನಿಂದ ಬಂದದ್ದು'

ಇದು ಸರಿಯಾದ ಅಂಶಗಳು ಎಂದು ನಾವು ಮತ್ತೆ ಹೇಳುತ್ತೇವೆ. ಆದರೆ ಅವು ಪ್ರತಿಪಕ್ಷಗಳ ಧಾಳಿಯನ್ನು ಎದುರಿಸುವ ಬಲವಂತಕ್ಕೆ ಕಟ್ಟುಬಿದ್ದು ಹೇಳಿದ ಮಾತುಗಳಾದ್ದರಿಂದ ಅಡ್ವಾಣಿಯಂತಹವರು ಬೇಗನೆ ಅದನ್ನು ಮರೆತುಬಿಟ್ಟರು. ಆಗ ಸಿಂಘಾನಿಯಾಗಳು, ತೊಗಾಡಿಯಾಗಳಿಗೆ ಅಡ್ವಾಣಿಯವರ ಈ ತಾಂತ್ರಿಕ ಪ್ರಯತ್ನವನ್ನೂ ಕೂಡಾ ಅರಗಿಸಿಕೊಳ್ಳಲಾಗಲಿಲ್ಲ. ಅವರನ್ನೇ ಟೀಕಿಸಿದರು ಎಂಬುದು ಬೇರೆ ಮಾತು.

ಆದರೆ ಅದೇ ಭಾಷಣದಲ್ಲಿ ಅಡ್ವಾಣಿಯವರು ತಮ್ಮದು ಮಾತ್ರ 'ನೈಜ ಜಾತ್ಯತೀತತೆ' ಇತರರದ್ದು 'ಹುಸಿ ಜಾತ್ಯತೀತತೆ' ಎಂದು ಸಂಘ ಪರಿವಾರದ ಎಂದಿನ ಚರ್ವಿತ ಚರ್ವಣವನ್ನು ಪುರರುಚ್ಚರಿಸಿ ದರು. ಹೀಗೆ ಹೇಳುವಾಗ ಅವರು ಜಾತ್ಯತೀತತೆ ಎಂದರೆ ಧರ್ಮ ಮತ್ತು ರಾಜಕೀಯ ಸಂಪೂರ್ಣ ಬೇರ್ಪಡೆ, ಈ ಜಾತ್ಯತೀತೆಯೇ ಭಾರತೀಯ ಸಂವಿಧಾನದ ಅಡಿಗಲ್ಲು ಎಂದು ಸುಪ್ರೀಂಕೋರ್ಟ್ ಹೇಳಿರುವುದನ್ನು ಉಪೇಕ್ಷಿಸಿರುವುದು, ಈಗಲೂ ಉಪೇಕ್ಷಿಸುತ್ತಿರುವುದು ಸ್ಪಷ್ಟ. ಜಾತ್ಯತೀತತೆಯ ಈ ಪರಿಕಲ್ಪನೆಯನ್ನು ಅವರು ಒಪ್ಪುತ್ತಾರೋ ಇಲ್ಲವೋ ಎಂಬುದನಿನ್ನೂ ಸ್ಪಷ್ಟಪಡಿಸಿಲ್ಲ.

ಆದರೆ ಮುಖ್ಯ ಸಂಗತಿಯೆಂದರೆ ಅಡ್ವಾಣಿಯವರು ತಮ್ಮ ನಿಲುವನ್ನು ಸ್ಪಷ್ಟಪಡಿಸದಿದ್ದರೂ ನಮ್ಮ ಜನ ಯಾರ ನಿಲುವು ಎಂತದ್ದು ಎಂದು ತಿಳಿದಿದ್ದಾರೆ. **'ಮಂದಗಾಮಿ' ವಾಜಪೇಯಿ ಹಾಗೂ ಅಡ್ವಾಣ ಮತ್ತು ವೆಂಕಯ್ಯನವರು ದಿಲ್ಲಿಯಲ್ಲಿನ ಝುಂಡೆವಾಲನ್ ನ ಆರ್‌ಎಸ್‌ಎಸ್ ಮುಖ್ಯಾಲಯಕ್ಕೆ ನಡೆಸಿರುವ ತೀರ್ಥಯಾತ್ರೆಗಳು ಮತ್ತು ತಾವು 'ಮತ್ತೆ ಮೂಲಕ್ಕೆ ಹಿಂದಿರುಗುತ್ತೇವೆ' ಎಂಬ ಭರವಸೆ ಈಗಲೂ ಬಿಜೆಪಿಯ ಬಗ್ಗೆ ಏನೋ ಭ್ರಮೆಯಿರುವವರ ಭ್ರಮೆಗಳನ್ನೆಲ್ಲಾ ನಿವಾರಿಸಲು ಸಾಕು.**

ಮೋದಿ ನುಡಿಮುತ್ತು - 2004 ರ ಮಹಾ ಜೋಕು

ಜುಲೈ 26 ರ ಅಹಮದಾಬಾದ್ ಸಭೆಯಲ್ಲಿ ಮೋದಿಗೆ ತನಗೂ ಸಾಕಷ್ಟು ಬುದ್ಧಿವಂತಿಕೆ ಇದೆ ಎಂದು ತೋರಿಸುವ ಅಗತ್ಯ ಕಂಡುಬಂತು. 'ಭಾರತೀಯ ರಾಜಕಾರಣದಲ್ಲಿ ಒಂದು ಹೊಸ ಪ್ರವೃತ್ತಿ ಕಂಡುಬಂದಿದೆ. ಸ್ವಾತಂತ್ರ್ಯ ಹೋರಾಟದ ಬದಲು ಬಂದೂಕಿನ ನಳಿಗೆಗಳಿಂದ ರಾಜಕಾರಣಿಗಳು ಮೂಡಿಬರುತ್ತಿದ್ದಾರೆ' - ಇದು ಅವರ ನುಡಿಮುತ್ತು. ಆದರೆ ಸಂಘ ಪರಿವಾರದಲ್ಲಿ ಕೆ.ಎಸ್.ಸುದರ್ಶನ್‌ರಿಂದ ಹಿಡಿದು ವಾಜಪೇಯಿಯವರೆಗೆ, ಅಡ್ವಾಣಿಯಿಂದ ಹಿಡಿದು ಮೋದಿಯ ವರೆಗೆ ಯಾರು ಸ್ವಾತಂತ್ರ್ಯ ಹೋರಾಟದಿಂದ ಬಂದವರು ಎಂದು ನಮಗೆ ಜ್ಞಾನೋದಯ ಮೂಡಿಸುವ ತೊಂದರೆ ತಗೊಂಡಿಲ್ಲ. ಮೋದಿಯ ಬಗ್ಗೆ ಹೇಳುವುದಾದರೆ ಆತ ಸ್ವಾತಂತ್ರ್ಯ ಹೋರಾಟದಲ್ಲಿ ಪಾತ್ರವಹಿಸಿದ ಕಾರಣದಿಂದಾಗಿ ತನ್ನ ಪೀಠ ಪಡೆದದ್ದಲ್ಲ, ಬದಲಾಗಿ ಆರ್‌ಎಸ್‌ಎಸ್ ಬಾಸ್‌ಗಳ ಆಶೀರ್ವಾದದಿಂದ ಮಾತ್ರ ಎಂಬುದು ನಮಗೆ ಗೊತ್ತು. ಆ ಸ್ಥಾನವನ್ನು ಆತ ಬಂದೂಕುಗಳು, ಚಾಕು, ಚೂರಿ ಮತ್ತು ಇನ್ನೇನೇನೋ ಆಯುಧಗಳಿಂದ ಕ್ರೋಢೀಕರಿಸಲು ಪ್ರಯತ್ನಿಸಿದರು ಎಂದೂ ಗೊತ್ತು. ಮೋದಿಯವರ ನುಡಿಮುತ್ತು ಭಾರತೀಯ ಇತಿಹಾಸದಲ್ಲಿ 2004 ರ ಮಹಾಜೋಕು ಎಂದು ದಾಖಲಾಗುವುದು ಖಂಡಿತ.

ಸವದತ್ತಿ : ಅರಣ್ಯಭೂಮಿ ಸಾಗುವಳಿದಾರರ ಚಳುವಳಿ

ಸಾಗುವಳಿ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸುತ್ತಿರುವುದರ ವಿರುದ್ಧ ಚಳುವಳಿ ಆರಂಭಗೊಂಡಿದೆ

ಕಳೆದ 20-30 ವರ್ಷಗಳಿಂದ ಬೆಳಗಾಂವ್ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬದುಕುತ್ತಿದ್ದ ಬಡರೈತರನ್ನು ಮತ್ತು ಭೂಹೀನ ಕೃಷಿ ಕೂಲಿಕಾರರನ್ನು ಒಕ್ಕಲೆಬ್ಬಿಸುವ ಅರಣ್ಯ ಇಲಾಖೆಯ ದಬ್ಬಾಳಿಕೆಯನ್ನು ನಿಲ್ಲಿಸಲು ಆಗ್ರಹಿಸಿ ಚಳುವಳಿಯೊಂದನ್ನು ಆರಂಭಿಸಲಾಗಿದೆ. ಜುಲೈ 7 ರಂದು ಮದ್ಲೂರು, ಮಬನೂರು, ಗೊಂದಿ, ಮುನವಳ್ಳಿ, ಹಾಲಕಟ್ಟಿ, ಆಲದಕಟ್ಟಿ, ಸುಬ್ಬಾಪೂರ, ರಾಮಾಪುರ, ನುಗ್ಗಾನಟ್ಟಿ, ತೆರೆದಕೊಪ್ಪ, ಎಕ್ಕೇರಿ, ಶಿಂದೋಗಿ ಮೊದಲಾದ ಗ್ರಾಮಗಳ ಅರಣ್ಯ ಭೂಮಿ ಸಾಗುವಳಿದಾರರು ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆಯೊಂದನ್ನು ಹೊರಡಿಸಿ ಬಡ ಭೂಹೀನರನ್ನು ಅವರು ಸಾಗುವಳಿ ಮಾಡಿಕೊಂಡು ಉಪಜೀವನ ಸಾಗಿಸುತ್ತಿದ್ದ ಅರಣ್ಯ ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸಿ ಅವರು ಸಾಗುವಳಿ ಮಾಡಿದ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಸಸಿ ನೆಡುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸುವ ಮನವಿಯೊಂದನ್ನು ತಾಲ್ಲೂಕ ತಹಶಿಲ್ದಾರರ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು. ಸರ್ಕಾರದಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಬಾರದಿದ್ದುದರಿಂದ ಜುಲೈ 12 ರಿಂದ ತಹಶಿಲ್ದಾರರ ಕಛೇರಿಯ ಎದುರು ಸಾಮೂಹಿಕ ಧರಣೀ ಸತ್ಯಾಗ್ರಹವನ್ನು ಆರಂಭಿಸಲಾಯ್ತು. ಒಂದೊಂದು ದಿನ ಒಂದೊಂದು ಗ್ರಾಮದ ಅರಣ್ಯ ಭೂಮಿ ಸಾಗುವಳಿದಾರರು ಸತ್ಯಾಗ್ರಹದಲ್ಲಿ ಭಗವಹಿಸುತ್ತಿದ್ದರು.

ಸರದಿ ಉಪವಾಸ ಸತ್ಯಾಗ್ರಹ: ಹತ್ತು ದಿನಗಳ ಕಾಲ ಸಾಮೂಹಿಕ ಸತ್ಯಾಗ್ರಹ ನಡೆದರೂ ಸರ್ಕಾರದ ಪ್ರತಿನಿಧಿಗಳು ಸ್ಪಂಧಿಸಲಿಲ್ಲ. ಜುಲೈ 21, 'ರೈತ ಹುತಾತ್ಮರ ದಿನ'. ಸುಮಾರು 24 ವರ್ಷಗಳ ಹಿಂದೆ ಭುಗಿಲೆದ್ದ ಮಲಪ್ರಭಾ ರೈತರ ಚಳುವಳಿಯನ್ನು ಹತ್ತಿಕ್ಕಲು ಪೊಲೀಸರು ಗುಂಡು ಹಾರಿಸಿದಾಗ ನರಗುಂದದಲ್ಲಿ ಚಿಕ್ಕನರಗುಂದ ಗ್ರಾಮದ ಈರಪ್ಪ ಬಸಪ್ಪ ಕಡ್ಡಿಕೊಪ್ಪ ಮತ್ತು ನವಲಗುಂದದಲ್ಲಿ ಅಳಗವಾಡಿ ಗ್ರಾಮದ ಬಸಪ್ಪ ಶಿವಪ್ಪ ಲಕ್ಕುಂಡಿ ಎಂಬ ಯುವ ರೈತರು ಗುಂಡಿನೇಟಿಗೆ ಬಲಿಯಾಗಿ ಅಸುನೀಗಿದ್ದರು. ಮಲಪ್ರಭಾ ರೈತ ಚಳುವಳಿಯ ಭಾಗವಾಗಿದ್ದ ಸವದತ್ತಿಯಲ್ಲಿ ಅಂದಿನಿಂದ ಪ್ರತಿ ವರ್ಷವೂ ಕರ್ನಾಟಕ ಪ್ರಾಂತ ರೈತ ಸಂಘವು ಜುಲೈ 21 ರಂದು 'ರೈತ ಹುತಾತ್ಮರ ದಿನ'ವನ್ನು ಆಚರಿಸುತ್ತಾ ಬರುತ್ತಿದೆ. ಈ ಸಲವೂ ರೈತ ಹುತಾತ್ಮರ ದಿನಾಚರಣೆಯ ಅಂಗವಾಗಿ ಏರ್ಪಡಿಸಲಾದ ಸಭೆಯಲ್ಲಿ ತೀವ್ರಗೊಳ್ಳುತ್ತಿರುವ ಕಾರ್ಷಿಕ ಬಿಕ್ಕಟ್ಟಿಗೆ ಕಾರಣವಾದ ಸರ್ಕಾರಗಳ ಧೋರಣೆಯ ವಿರುದ್ಧ ಹೋರಾಟವನ್ನು ಮುನ್ನಡೆಸಲು ಸಂಕಲ್ಪ ಮಾಡಲಾಯಿತಲ್ಲದೆ ಜುಲೈ 12 ರಿಂದ ಆರಂಭಿಸಲಾಗಿದ್ದ ಸಮೂಹಿಕ ಧರಣಿ ಸತ್ಯಾಗ್ರಹವನ್ನು ನಿಲ್ಲಿಸಿ ಜುಲೈ 22 ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಲು ನಿರ್ಧರಿಸಲಾಯಿತು. 24 ಗಂಟೆಗಳ ಈ ಸರದಿ ಉಪವಾಸ ಸತ್ಯಾಗ್ರಹದಲ್ಲಿ ಮುನವಳ್ಳಿ, ಗೊಂದಿ, ಬಡ್ಲಿ, ಬಡ್ಲಿ ತಾಂಡೆ, ಮದ್ಲೂರು, ಮಬನೂರು ಗ್ರಾಮಗಳ ಅರಣ್ಯ ಭೂಮಿ ಸಾಗುವಳಿದಾರರು ಸದರಿ ಪ್ರಕಾರ ಉಪವಾಸ ಸತ್ಯಾಗ್ರಹ ನಡೆಸಿದರು.

ಜುಲೈ 24 ರಂದು ತಾಲ್ಲೂಕ ತಹಶಿಲ್ದಾರರು ಚಳುವಳಿ ನಿರತರ ಮುಖಂಡರನ್ನು ಮಾತುಕತೆಗೆ ಕರೆದರು. ವಲಯ ಅರಣ್ಯ ಅಧಿಕಾರಿ ಸಹ ಉಪಸ್ಥಿತರಿದ್ದರು. ಸರ್ಕಾರದ ಆದೇಶದ ಪ್ರಕಾರ ಅರಣ್ಯಭೂಮಿ ಸಾಗುವಳಿ ಪ್ರಕರಣಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ತಾಲೂಕ ಮಟ್ಟದ ಸಮಿತಿಯನ್ನು ರಚಿಸುವಂತೆ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ತಹಶಿಲ್ದಾರರು ಭರವಸೆ ನೀಡಿದರು. ಅಲ್ಲಿಯವರೆಗೆ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸುವ ಆದೇಶವನ್ನು ಮಾನವೀಯತೆಯ ದೃಷ್ಟಿಯಿಂದ ಪರಿಗಣಿಸಿ ತಾತ್ಕಾಲಿಕವಾಗಿ ತಡಹಿಡಿಯಲಾಗುವುದು ಎಂದು ಅರಣ್ಯ ಅಧಿಕಾರಿ ಹೇಳಿದರು. ಇದರೊಂದಿಗೆ ಚಳುವಳಿ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕ ಸಮಿತಿಯ ಅಧ್ಯಕ್ಷರಾದ ಜಿ.ಬಿ.ತೊರಗಲ್ಲ, ಇತರ ಮುಖಂಡರುಗಳಾದ ಎಸ್.ಐಚ್.ಕಪ್ಪಣ್ಣವರ್, ಎಲ್.ಎಸ್.ನಾಯ್ಕ, ಶ್ರೀಕಾಂತ ಹಟ್ಟಿಹೊಳಿ, ಎಫ್.ಎಂ. ನಧಾಫ್, ಯಲ್ಲಪ್ಪ ಚಂದರಗಿ ಮೊದಲಾದವರು ಚಳುವಳಿಯ ನೇತೃತ್ವ ವಹಿಸಿದ್ದರು.

ಅರಣ್ಯ ಭೂಮಿಯ ಪ್ರಶ್ನೆ : ಮಲಪ್ರಭಾ ನದಿಗೆ ಅಡ್ಡವಾಗಿ ಸವದತ್ತಿಯ ನವಿಲು ತೀರ್ಥದಲ್ಲಿ ಕಟ್ಟಲಾದ ಅಣೆಕಟ್ಟಿನಲ್ಲಿ 1970ನೇ ಸಾಲಿನಲ್ಲಿ ನೀರು ನಿಲ್ಲಸಲಾದಾಗ ನದಿಯ ಎರಡೂ ದಂಡೆಯ ಮೇಲಿನ ಅನೇಕ ಗ್ರಾಮಗಳು ಮತ್ತು ಆ ಗ್ರಾಮಗಳ ಫಲವತ್ತಾದ ಕೃಷಿ ಭೂಮಿ ಮುಳುಗಡೆ ಆಯಿತು. ಸಣ್ಣ ಹಿಡುವಳಿದರರು ಭೂಮಿ ಕಳೆದುಕೊಂಡು ನಿರ್ಗತಿಕರಾದರು. ಕೃಷಿ ಚಟುವಟಿಕೆಗಳು ಕಡಿಮೆಯಾದವು. ಕೃಷಿ ಕೂಲಿಕಾರರಿಗೆ ಉದ್ಯೋಗವಿಲ್ಲದಂತಾಯಿತು. ಮುಳುಗಡೆಯಾದ ಗ್ರಾಮಗಳ ಜನರ ಪುನರ್ವಸತಿಗಾಗಿ ಗುಡ್ಡಗಳ ಅಕ್ಕಪಕ್ಕಗಳಲ್ಲಿ ಹೊಸ ಊರುಗಳು ತಲೆಎತ್ತಿದವು. ಭೂಹೀನ ಬಡವರು ಗುಡ್ಡಗಳ ಇಳಿಜಾರುಗಳಲ್ಲಿನ ಭೂಮಿಯನ್ನು ಸಾಗುವಳಿ ಮಾಡಿ ಜೀವನ ನಡೆಸಲು ಆರಂಭಿಸಿದರು. ದಾಖಲೆಗಳಲ್ಲಿ 'ಸರ್ಕಾರಿ ಗುಡ್ಡ' ಎಂದು ಗುರುತಿಸಲ್ಪಟ್ಟ ಈ ಭೂಮಿಯಲ್ಲಿ ನಿರಾಶ್ರಿತ ಬಡವರು ಬಗರ್‌ಹುಕ್ಕು ಸಾಗುವಳಿ ಆರಂಭಿಸಿದಾಗ ಅಂದಿನ ಸರ್ಕಾರ ಅದನ್ನು ತಡೆಗಟ್ಟಲಿಲ್ಲ. ಕೆಲವು ವರ್ಷಗಳ ತರುವಾಯ ಅರಣ್ಯವನ್ನು ಅಭಿವೃದ್ಧಿ ಪಡಿಸುವ ಹೆಸರಿನಲ್ಲಿ ರಾಜ್ಯ ಸರ್ಕಾರ ಇಂತಹ ಭೂಮಿಯನ್ನೆಲ್ಲಾ ಅರಣ್ಯ ಇಲಾಖೆಗೆ ವರ್ಗಾಯಿಸಿತು. ಹೀಗೆ ಆದೇಶ ನೀಡುವ ಮೊದಲು ಭೂಹೀನ ಬಡವರು ಸಾಗುವಳಿ ಮಾಡುತ್ತಿರುವ ಪ್ರಕರಣಗಳನ್ನು ಗುರುತಿಸಿ ಅವರಿಗೆ ಹಕ್ಕುಪತ್ರಗಳನ್ನು ನೀಡಿ ಸಕ್ರಮಗೊಳಿಸುವ ಗೋಜಿಗೆ ಸರ್ಕಾರ ಹೋಗಲಿಲ್ಲ. ಪರಿಣಾಮವಾಗಿ ಅರಣ್ಯ ಇಲಾಖೆಯವರ ಕಿರುಕುಳ ಪ್ರಾರಂಭವಾಯಿತು. ದಂಡ ವಸೂಲಿ ಮತ್ತು ಲಂಚ ವಸೂಲಿಯ ನಡುವೆ ವ್ಯತ್ಯಾಸವಿರಲಿಲ್ಲ. ಅಕ್ರಮ ಭೂಮಿ ಸಾಗುವಳಿ ಎಂದು ಪ್ರಕರಣ ದಾಖಲು ಮಾಡಿಕೊಳ್ಳದೆ 'ಮರಗಳನ್ನು ಕಡಿದಿದ್ದಾರೆ' ಎಂದು ಸುಳ್ಳು ಕೇಸು ದಾಖಲು ಮಾಡಿ ದಂಡ ವಸೂಲಿ ಮಾಡಲಾಗುತ್ತಿತ್ತು. ದಂಡದ ದಾಖಲೆಗಳನ್ನು ನೀಡುತ್ತಿರಲಿಲ್ಲ. ಹೀಗಾಗಿ 1970 ಕಾಲದಿಂದಲೂ ಇಲ್ಲಿ ಭೂಹೀನ ಬಡವರು ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿದ್ದರು. ಅವರ ಬಳಿ ಆ ಕುರಿತು ದಾಖಲೆಗಳು ಸಿಗುವುದು ವಿರಳ.

1980ರ ಅರಣ್ಯ ಸಂರಕ್ಷಣಾ ಕಾಯ್ದೆಯ ಪ್ರಕಾರ 1978ರ ನಂತರ ಅರಣ್ಯ ಅತಿಕ್ರಮಣ ಮಾಡಿದವರನ್ನೂ ಒಕ್ಕಲೆಬ್ಬಿಸಬೇಕೆಂಬ ಸುಪ್ರೀಂ ಕೋರ್ಟಿನ ಆದೇಶವನ್ನು ಮುಂದೆಮಾಡಿ ಅರಣ್ಯ ಇಲಾಖೆಯವರು ಹಾವಳಿ ಎಬ್ಬಿಸಿದ್ದಾರೆ. 1978 ರಿಂದ ಸಾಗುವಳಿ ಮಾಡಲಾದ ಪ್ರಕರಣಗಳನ್ನು ಗುರುತಿಸಲು ಹಿಂದಿನ ಸರ್ಕಾರ ಸಮಿತಿಗಳನ್ನು ರಚಿಸುವುದಾಗಿ ನೀಡಿ ಭರವಸೆ ಜಾರಿಯಾಗಿಲ್ಲ. 1978 ರ ಹಿಂದೆ ಈ ಭೂಮಿ ಅರಣ್ಯ ಭೂಮಿಯೇ ಆಗಿರಲಿಲ್ಲ. ಅಂದಿನಿಂದ ಸಾಗುವಳಿ ಮಾಡುತ್ತಿದ್ದವರನ್ನು ದಾಖಲೆಗಳಿಲ್ಲ ಎಂಬ ಕಾರಣಕ್ಕೆ ಒಕ್ಕಲೆಬ್ಬಿಸುವ ಕ್ರಮದ ವಿರುದ್ಧ ಸವದತ್ತಿ ತಾಲೂಕಿನ ಭಗರ ಹುಕುಂ ಸಾಗುವಳಿದಾರರು ತಮ್ಮ ಹೋರಾಟವನ್ನು ಮುನ್ನಡೆಸಲು ನಿರ್ಧರಿಸಿದ್ದಾರೆ.

- ಜಿ.ಬಿ. ತೊರಗಲ್ಲ

ಬಂಟ್ವಾಳ : ಫೈನಾನ್ಸ್ ಕಂಪನಿಯಿಂದ ಕೋಟ್ಯಾಂತರ ರೂ. ವಂಚನೆ

ಕಳೆದ ಕೆಲವು ವರ್ಷಗಳಿಂದ ರಾಜ್ಯದಾದ್ಯಂತ ಹಣಕಾಸು ವ್ಯವಹಾರ ನಡೆಸುತ್ತಿದ್ದ ಶ್ರೀ ಮೂಕಾಂಬಿಕ ಫೈನಾನ್ಸ್ ಮತ್ತು ಶ್ರೀ ಅಂಬಿಕಾ ನಿಧಿ ಲಿಮಿಟೆಡ್ ಎಂಬ ಹೆಸರಿನ ಖಾಸಗಿ ಸಂಸ್ಥೆಯೊಂದು ಜನರಿಂದ 50 ಕೋಟಿಗೂ ಹೆಚ್ಚು ಠೇವಣಿ ಸಂಗ್ರಹಿಸಿ ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಇದು ರಾಜ್ಯದಾದ್ಯಂತ ಬೆಂಗಳೂರು, ಮಂಗಳೂರು, ಕಾಸರಗೋಡು, ಬೆಳ್ತಂಗಡಿ ಸೇರಿದಂತೆ 13 ಶಾಖೆಗಳನ್ನು ಹೊಂದಿದೆ. ಇದು ಪ್ರಧಾನ ಕಛೇರಿ ಪುತ್ತೂರಿನಲ್ಲಿದೆ.

ಕಳೆದ ಒಂದು ವರ್ಷದಿಂದೀಚೆಗೆ ಠೇವಣಿದಾರರಿಗೆ ಯಾವುದೇ ಸೂಚನೆ ನೀಡದೆ ತನ್ನ 12 ಶಾಖೆಗಳನ್ನು ಮುಚ್ಚಿ ಪುತ್ತೂರಿನ ಪ್ರಧಾನ ಕಛೇರಿಯನ್ನು ಮಾತ್ರ ನಡೆಸುತ್ತಿದೆ. ಇದರ ಬಗ್ಗೆ ಠೇವಣಿದಾರರು ವಿಚಾರಿಸಿದರೆ ಪ್ರಧಾನ ಕಛೇರಿಯಲ್ಲಿ ಸಮರ್ಪಕ ಉತ್ತರ ಸಿಗುತ್ತಿಲ್ಲ.

ಇದಲ್ಲದೆ ಸಂಸ್ಥೆಯ ಶ್ರೀ ರಾಘವೇಂದ್ರ ಟ್ರೇಡರ್ಸ್ ಮತ್ತು ರಾಘವೇಂದ್ರ ಸರ್ವಿಸ್ ಡಿವಿಜನ್ ಎಂಬ ಸಂಸ್ಥೆಗಳನ್ನು ತಮ್ಮ ಸಹ ಸಂಸ್ಥೆ ಎಂಬ ಹೆಸರಿನಲ್ಲಿ ನಡೆಸುತ್ತಿದ್ದು ಈಗ ಅದನ್ನು ಮುಚ್ಚಿ ಬಾಕಿದಾರರಿಗೆ ಮಾರಲು ಮುಂದಾಗಿದೆ.

ಈ ಹಣಕಾಸು ಸಂಸ್ಥೆಯಲ್ಲಿ ಠೇವಣಿ ಇಟ್ಟು ಹಣ ಕಳೆದುಕೊಂಡ ಠೇವಣಿದಾರರು 'ಶ್ರೀ ಮೂಕಾಂಬಿಕ ಫೈನಾನ್ಸ್ ಮತ್ತು ಅಂಬಿಕಾ ನಿಧಿಯ ಹೋರಾಟ ಸಮಿತಿ' ಹೆಸರಿನಲ್ಲಿ ಹೋರಾಟ ಸಮಿತಿಯೊಂದನ್ನು ರಚಿಸಿಕೊಂಡಿದ್ದಾರೆ. ಎ.ರಾಮಣ್ಣ ವಿಟ್ಲ ಈ ಹೋರಾಟ ಸಮಿತಿಯ ಸಂಚಾಲಕರಾಗಿದ್ದಾರೆ. ಸಂಸ್ಥೆಯ ಎಲ್ಲಾ ಪಾಲುದಾರರನ್ನು ಕಾರ್ಯನಿರ್ವಾಹಕ ಪಾಲುದಾರರನ್ನು ಹಾಗು ನಿರ್ದೇಶಕರುಗಳನ್ನು ಬಂಧಿಸಬೇಕು. ಮತ್ತು ಸಂಸ್ಥೆಯ ಆಸ್ತಿಪಾಸ್ತಿಗಳನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡು ಠೇವಣಿದಾರರಿಗೆ ಹಣ ಹಿಂತಿರುಗಿಸುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿ

ಕಾಂಗ್ರೆಸ್‌ಗೆ ಮತ್ತೊಂದು ಪ್ರಹಾರ - ಸಿಪಿಐ(ಎಂ) ಗೆ ವಿಜಯದ ಹಾರ

ಮೇ 13 ರ ವಿಧಾನಸಭಾ ಚುನಾವಣೆ ಮತ್ತು ಫಲಿತಾಂಶದ ನಂತರ ಬಾಗೇಪಲ್ಲಿ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಜಡ್ಡುಗಟ್ಟಿಹೋಗಿದ್ದ ಆಡಳಿತ ಯಂತ್ರಾಂಗ ಚುರುಕುಗೊಂಡಿದೆ. ಕ್ಷೇತ್ರ ಅಭಿವೃದ್ಧಿಯತ್ತ ನಡೆಯುತ್ತಿರುವುದರೊಂದಿಗೆ, ರಾಜಕೀಯ ಬದಲಾವಣೆ ಕೂಡಾ ಕಾಣುತ್ತಿದೆ. ಅದಕ್ಕೆ ಉದಾಹರಣೆಯಾಗಿ ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತು ಮೊಟ್ಟಮೊದಲ ಬಾರಿಗೆ ಸಿಪಿಐ(ಎಂ) ತೆಕ್ಕೆಗೆ ಬಿದ್ದಿದೆ. ತಾಲ್ಲೂಕು ಪಂಚಾಯ್ತಿ ಸಿಪಿಐ(ಎಂ)ನ 5 ಸದಸ್ಯರು ಕಾಂಗ್ರೆಸ್‌ನ 9 ಸದಸ್ಯರು ಇದ್ದರು. ಕಾಂಗ್ರೆಸ್‌ನ ನಾಲ್ಕು ಸದಸ್ಯರು ಸಿಪಿಐ(ಎಂ)ನ ಅಭ್ಯರ್ಥಿಗೆ ಬೆಂಬಲ ಸೂಚಿಸಿದ ಪರಿಣಾಮ ಕಾಂಗ್ರೆಸ್‌ನ ಮಂಜುಳಾಚಾರಿಯವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಸಿ.ಪಿ.ಐ(ಎಂ)ನ ಕಾಂ! ಯೈ.ಬಿ. ಬೈಯಪ್ಪನವರನ್ನು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಮಂಜುಳಾ ರವರು ಅಧ್ಯಕ್ಷರಾದಾಗಿನಿಂದ ಒಂದೇ ಒಂದು ಬಾರಿ ಕೂಡಾ ಕಛೇರಿಯ ಕಡೆಗೆ ಬಂದವರಲ್ಲ, ಜನರ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಂಡವರಲ್ಲ, ಆಶ್ರಯ ಅಂಬೇಡ್ಕರ್ ಮನೆಗಳ ಫಲಾನುಭವಿಗಳ ಪಾಡು ಹೇಳತೀರದು. ಅಧಿಕಾರಿಗಳು ಮನಬಂದಂತೆ ವರ್ತಿಸಿ. ಜನರು ಒಂದು ಬಿಲ್ಲಿಗೆ ಹತ್ತಾರು ದಿನ ಸುತ್ತುವಂತೆ ಮಾಡುತ್ತಿದ್ದರು. ಎಸ್.ಜಿ.ಆರ್.ವೈ. ಯೋಜನೆಯ 'ಕ್ರಿಯಾಶೀಲ ಯೋಜನೆ' ಜುಲೈ ತಿಂಗಳಿಗೆ ಮುಗಿಯುವಂತೆ ಕೆಲಸ ಮಾಡಿದ್ದರೆ, ಸೆಪ್ಟಂಬರ್ ತಿಂಗಳಲ್ಲಿ ಮತ್ತೆ ಅನುದಾನ ಬರುತ್ತಿತ್ತು. ಆದರೆ, ಇಂದಿಗೂ ಕ್ರಿಯಾಶೀಲ ಯೋಜನೆ ತಯಾರಿಸಿಲ್ಲ. ಅದರಿಂದ ತಾಲ್ಲೂಕಿಗೆ ಬರಬೇಕಾದ ಸುಮಾರು ಒಂದು ಕೋಟಿ ರೂ.ಗಳು ಬರದೆ ಇರುವ ನಷ್ಟವನ್ನು ಯಾರು ತುಂಬುತ್ತಾರೆ. ಕಛೇರಿಯ ಯಾವುದೇ ಫೈಲಿಗೆ ಸಹಿ ಬೇಕಾದರೆ ಫೈಲು ಮನೆಗೆ ಹೋಗಬೇಕು. ಇದರಿಂದ ಅಧಿಕಾರಿಗಳಿಗೂ ತೊಂದರೆಯಾಗಿತ್ತು. ಜನರಿಗೆ, ಸದಸ್ಯರಿಗೆ ಎಲ್ಲರಿಗೂ ಅಸಮಾಧಾನ ಮಡುಗಟ್ಟಿತ್ತು.

ಚುನಾವಣೆಯ ನಂತರ ಸಿಪಿಐ(ಎಂ) ಶಾಸಕರು ಅಧಿಕಾರಿಗಳಲ್ಲಿ ಚುರುಕು ಮುಟ್ಟಿಸುವ ಕೆಲಸ ಪ್ರಾರಂಭಿಸಿದರು. ಜನರನ್ನು ಪದೇ ಪದೇ ಕಛೇರಿಗಳಿಗೆ ಅಲೆಯುವಂತೆ ಮಾಡಿದರೆ, ತಾವು ಸುಮ್ಮನೆ ಕೂರುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಅದರಿಂದ ಅಭಿವೃದ್ಧಿಯನ್ನು ಬಯಸುತ್ತಿದ್ದ ಕೆಲ ಕಾಂಗ್ರೆಸ್ ಸದಸ್ಯರು ಅಧ್ಯಕ್ಷೆ ಮಂಜುಳಾ ರವರ ವಿರುದ್ಧ ಸೆಟೆದು ನಿಂತರು. ಅಭಿವೃದ್ಧಿಯತ್ತು ದೃಷ್ಟಿ, ಜನಕಾಳಜಿಯೊಂದಿಗೆ ಶ್ರಮಿಸುತ್ತಿರುವ ಶಾಸಕರಿಗೆ ಇನ್ನಷ್ಟು ನೆರವಾಗಬೇಕೆಂದು ಬಯಸಿದರು. ಪರಿಣಾಮವಾಗಿ ಸಿಪಿಐ(ಎಂ) ನ ಯೈ.ಬಿ.ಬೈಯಪ್ಪರವರಿಗೆ ನಾಲ್ಕು ಜನ ಕಾಂಗ್ರೆಸ್‌ನ ಸದಸ್ಯರು ಬೆಂಬಲ ಸೂಚಿಸಿದರು. 27.7.04 ರಂದು ನಡೆದ ಚುನಾವಣೆಯಲ್ಲಿ ಯೈ.ಬಿ. ಬೈಯಪ್ಪನವರು ಹಿಂದುಳಿದ ವರ್ಗಕ್ಕೆ ಮೀಸಲಿಟ್ಟ ಸ್ಥಾನದಲ್ಲಿ ಅಧ್ಯಕ್ಷರಾಗಿ ಚುನಾಯಿತರಾದರು.

ಯೈ.ಬಿ.ಬೈಯಪ್ಪರವರು, ಗೊರ್ತಪಲ್ಲಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರವನ್ನು ಪ್ರತಿನಿಧಿಸಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಿನ ಮತಗಳಿಂದ ಗೆಲುವನ್ನು ಪಡೆದಿದ್ದರು.

- ಭಾಸ್ಕರರೆಡ್ಡಿ

ಇರಾಕಿ ದುರಂತದಲ್ಲೂ ತೂರಿಬಂದ ಹೊಂಬೆಳಕು

ಜಗತ್ತನ್ನೊಂದು ಸುತ್ತು


ಶರತ್‌ಚಂದ್ರ

ಇರಾಕಿನ ಪರಿಸ್ಥಿತಿ ದಿನೇದಿನೇ ಇನ್ನಷ್ಟು ದುರಂತಮಯವಾಗುತ್ತಿದೆ. ಆದರೆ ಆ ದುರಂತದ ನಡುವೆಯು ಹೊಂಬೆಳಕು ತೂರಿಬರುತ್ತಿದೆ. ಸೋವಿಯೆತ್ ಪತನದ ನಂತರ ಆರಂಭದ ಏಕಮಾತ್ರ ಸೂಪರ್ ಪವರ್ ಅಮೆರಿಕದ ಚಕ್ರಾಧಿಪತ್ಯಕ್ಕೆ ಮೊದಲ ಬಾರಿ ತೀವ್ರ ಪ್ರತಿರೋಧ ಬಂದಿದೆ. ಹಲವು ಅಂತರ್‍ರಾಷ್ಟ್ರೀಯ ಮಹತ್ವದ ಬೆಳವಣಿಗೆಗಳು.- ಯುರೋಪಿಯನ್ ಒಕ್ಕೂಟದ ವಿಸ್ತಾರ, ಅಮೇರಿಕ-ಬ್ರಿಟನ್ ತಮ್ಮ ಯುದ್ಧಕೋರತನಕ್ಕೆ ಅಲ್ಪಸ್ವಲ್ಪ ಇದ್ದ ಅಂತರ್‍ರಾಷ್ಟ್ರೀಯ ಮಾನ್ಯತೆ ಕಳೆದುಕೊಂಡಿರುವುದು, ಬುಶ್-ಬ್ಲೇರ್ ತಮ್ಮ ದೇಶಗಳಲ್ಲಿ ತಮ್ಮ ರಾಜಕೀಯ ಅಸ್ತಿತ್ವಕ್ಕೆ ಹೋರಾಡಬೇಕಾಗುವ ಪ್ರಸಂಗ ಬಂದಿರುವುದು, ರಶ್ಯಾ-ಚೀನಾ, ಭಾರತ-ದ.ಆಫ್ರಿಕಾ-ಬ್ರೆಜಿಲ್ ಹಲವು ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲಿ ಜಂಟಿ ಕಾರ್ಯಾಚರಣೆ ನಡೆಸುತ್ತಿರುವುದು, ಚೀನಾ ಸಾರ್ಕ್ ಜತೆ ಸಹಕಂಸಲು ಮುಂದೆ ಬಂದಿರುವುದು, ಇವೆಲ್ಲಕ್ಕೆ ತಿಲಕವಿಟ್ಟಂತೆ ಇರಾಕಿ ಜನತೆಯ ತೀವ್ರ ಪ್ರತಿರೋಧ. ಅಂತರ್‍ರಾಷ್ಟ್ರೀಯ ಸನ್ನಿವೇಶ ಒಂದು ತಿರುವಿನಲ್ಲಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಯ ಆಟಾಟೋಪವನ್ನು ಜನ ಒಪ್ಪುವುದಿಲ್ಲ, ತಿರಸ್ಕರಿಸುತ್ತಾರೆ - ಇದು ಆ ಪ್ರಮುಖ ತಿರುವು. ತೀವ್ರ ಇರಾಕಿ ಪ್ರತಿರೋಧದ ಸಂದರ್ಭದಲ್ಲಿ ಒಟ್ಟಾರೆ ಅಂತರ್‍ರಾಷ್ಟ್ರೀಯ ಸನ್ನಿವೇಶವನ್ನು ಅರ್ಥೈಸಿರುವ ಹಿರಿಯ ನಾಯಕ ಹರ್ಕಿಶನ್ ಸಿಂಗ್ ಸುರ್ಜಿತ್‌ರವರ ವಿಶ್ಲೇಷಣೆ ಆಧಾರಿತ ಲೇಖನ

ಇರಾಕಿ ಪ್ರತಿರೋಧ ದಿನೇದಿನೇ ತೀವ್ರವಾಗುತ್ತಿದ್ದು ಅಂತರ್‍ರಾಷ್ಟ್ರೀಯ ಸನ್ನಿವೇಶದ ಸ್ವರೂಪವನ್ನೇ ಬದಲಾಯಿಸಿದೆ. ಜಗತ್ತಿನ ಅತ್ಯಂತ ಪ್ರಬಲ ಮಿಲಿಟರಿ ಸಹ ಇರಾಕ್ ಮೇಲೆ ತಮ್ಮ ದರ್ಬಾರು ನಡೆಸಲು ಸಾಧ್ಯವಾಗುತ್ತಿಲ್ಲ. ಅಮೆರಿಕನ್ ಸೈನ್ಯ ಮತ್ತು ಅದರ ಬಲದ ಮೇಲೆ ನಿಂತಿರುವ ಕೈಗೊಂಬೆ ಇರಾಕಿ ಸರ್ಕಾರದ ಅಧಿಕಾರ ಬಾಗ್ದಾದ್‌ನ ಹೊರಗೆ ಎಲ್ಲೂ ಚಲಾಯಿಸಲು ಆಗುತ್ತಿಲ್ಲ. ಎಲ್ಲಾ ಹೆದ್ದಾರಿಗಳಲ್ಲೂ, ಪ್ರಮುಖ ಪಟ್ಟಣಗಳಲ್ಲೂ ಇರಾಕಿ ಗೆರಿಲ್ಲಾಗಳದ್ದೇ ಅಧಿಕಾರ. ಹಲವು ಕಡೆ ಅಮೆರಿಕನ್ ಸೈನ್ಯ ಮತ್ತು ಗೆರಿಲ್ಲಾಗಳ ನಡೆವ ಅಧಿಕೃತ 'ಕದನ ವಿರಾಮ' ಒಪ್ಪಂದವಾಗಿದೆ. ಇಂತಹ ಹಲವು 'ಕದನವಿರಾಮ' ದ ಕೆಲವು ಷರತ್ತುಗಳು, ಇರಾಕಿ ಸರ್ಕಾರ ಬರಿ 'ನಾಮ್ ಕಾ ವಾಸ್ತೆ' ಸರ್ಕಾರ ಎಂದು ಸ್ಪಷ್ಟವಾಗುತ್ತದೆ. ಇಂತಹ ಒಂದು ಒಪ್ಪಂದದ ಪ್ರಕಾರ ಅಮೆರಿಕನ್ ಸೈನ್ಯ ಹಗಲಲ್ಲಿ ನಿಗದಿತ ಸಮಯ ಬಿಟ್ಟರೆ ತನ್ನ ಅದರ ನೆಲೆ ಬಿಟ್ಟು ಹೊರಬರುವ ಹಾಗೆ ಇಲ್ಲ. ನಿಗದಿತ ಸಮಯದಲ್ಲಿ ನಿಗದಿತ ಹಾದಿಯಲ್ಲಿ ಮಾತ್ರ ಓಡಾಡಬಹುದು ಎಂದು ಹಲವು ಪ್ರತ್ಯಕ್ಷದರ್ಶಿ ಪಾಶ್ಚಿಮಾತ್ಯ ವರದಿಗಾರರು ವರದಿ ಮಾಡಿದ್ದಾರೆ.

ಇರಾಕಿಗಳು ಇರುವ ಪೋಲೀಸರು, ಸೈನ್ಯಗಳ ರಚನೆ, ಹಲವು ಜನ ವಿಭಾಗಗಳನ್ನು ಹತಾಶೆ - ಆಮಿಷ -ಬೆದರಿಕೆಗಳಿಂದ ಗೆದ್ದುಕೊಳ್ಳುವುದು, ಧಾರ್ಮಿಕ (ಶಿಯಾ-ಸುನ್ನಿ ಜನಾಂಗೀಯ, ಅರಬ್-ಕುರ್ದಿಶ್) ಮತಬೇಧದ ಮೂಲಕ ಜನರ ಐಕ್ಯತೆ ಒಡೆಯುವುದು - ಮುಂತಾದ ಎಲ್ಲಾ ಸಾಮ್ರಾಜ್ಯಶಾಹಿಯ ಬತ್ತಳಿಕೆಯಲ್ಲಿರುವ ಎಲ್ಲಾ ಅಸ್ತ್ರ ಪ್ರಯೋಗಿಸಿ ಸೋತು ಕುಸಿದು ಕುಳಿತಿದೆ - ಅಮೆರಿಕಾ. ಗೆರಿಲ್ಲಾ ಪ್ರತಿರೋಧ ವ್ಯವಸ್ಥಿತವಾಗಿ, ಅಮೆರಿಕನ್ ಕೈಗೊಂಬೆ ಸರ್ಕಾರವನ್ನು ಇರಾಕ್ ಆಳಗೊಡದಂತಹ ಪರಿಸ್ಥಿತಿ ತಂದಿಟ್ಟಿದೆ. ಇಂತಹ ಪ್ರಚಂಡ ಪ್ರತಿರೋಧದಿಂದಲೇ ಅಮೆರಿಕನ್ 'ವೈಸರಾಯ್' ಗಡಿಬಿಡಿಯಲ್ಲಿ ಕೈಗೊಂಬೆ ಇರಾಕಿಗಳಿಗೆ ಅಧಿಕಾರ ವಹಿಸುವ ನಾಟಕ ಮಾಡಬೇಕಾಯಿತು. ಆದರೆ ಇರಾಕಿನ ಯಾವ ಪ್ರಜೆಯೂ ಇದು ಇರಾಕಿ ಸರ್ಕಾರ ಎಂದು ಅಂಗೀಕರಿಸಿಲ್ಲ. ಅಮೆರಿಕನ್ ಸೈನಿಕರ ಬಲಿ ಸಂಖ್ಯೆ ಹೆಚ್ಚುತ್ತಿದ್ದು ಅಮೆರಿಕ-ಬ್ರಿಟನ್‌ಗಳಲ್ಲಿ ಇದು ಆಂತರಿಕ ರಾಜಕೀಯ ಬಿಕ್ಕಟ್ಟಿಗೆ ಕಾರಣವಾಗಿದೆ. ಸದ್ದಾಂ ಹುಸ್ಸೇನ್ ಸೆಪ್ಟೆಂಬರ್ 11 (2001) ರ ಭಯೋತ್ಪಾದಕ ಧಾಳಿಗೆ ಆಲ್‌ಖೈದಾಗೆ ನೆರವು ನೀಡಿದ್ದಾನೆ, ಇರಾಕಿನಲ್ಲಿ ಸಮೂಹ ನಾಶಕ ಶಸ್ತ್ರಗಳಿವೆ ಮತ್ತು ಇರಾಕ್‌ನಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಬೇಕು - ಇವು ಬುಶ್-ಬ್ಲೇರ್ ಗ್ಯಾಂಗ್ ಇರಾಕಿನಲ್ಲಿ ಯುದ್ಧ ಆರಂಭಿಸಲು ಜಗತ್ತಿಗೆ ತೋರಿದ ನೆಪಗಳು. ಮೊಧಲ ಎರಡನ್ನೂ 'ಅಧಿಕೃತ' ಕಮಿಶನ್‌ಗಳೇ ಸುಳ್ಳು ಎಂದು ಸಾಬೀತು ಮಾಡಿವೆ. ಇರಾಕ್‌ನ ಚುನಾವಣೆಯನ್ನು ಈಗಾಗಲೇ ಮೂರು ಬಾರಿ ಮುಂದೂಡಿ, ಯಾರಿಗೂ ಅದರ ಬಗ್ಗೆ ನಂಬಿಕೆ ಉಳಿದಿಲ್ಲ. ಅಫಘಾನಿಸ್ತಾನದಲ್ಲಿ ಒಂದುವರೆ ವರ್ಷಗಳ ನಂತರವೂ ಯಾವುದೇ ಚುನಾವಣೆ ನಡೆಯದಿರುವುದು ಇದಕ್ಕೆ ಪುಷ್ಟಿಕ ಕೊಟ್ಟಿದೆ. ಇರಾಕಿ ಪ್ರತಿರೋಧ ಇಷ್ಟುಬೇಗ ತೀವ್ರವಾಗಿ ಬೆಳೆಯಬಹುದು, ಅಮೆರಿಕನ್ ಕೈಗೊಂಬೆ ಸರ್ಕಾರವನ್ನು ಆಳಲು ಸಾಧ್ಯವಾಗದಂತೆ ಮಾಡಬಹುದು - ಇರಾಕಿ ಪ್ರತಿರೋಧದ ಅತ್ಯಂತ ಪ್ರಬಲ ಬೆಂಬಲಿಗರೂ ಅಂದುಕೊಂಡಿರಲಲ್ಲ. ಇಂದಿನ ಅಂತರ್‍ರಾಷ್ಟ್ರೀಯ ಸನ್ನಿವೇಶದಲ್ಲಿ ಪ್ರಬಲ ಇರಾಕಿ ಪ್ರತಿರೋಧ, ಮಹತ್ವದ ತಿರುವು ತಂದಿದೆ.


ಬುಶ್


ಬ್ಲೇರ್

ಯುರೋಪಿಯನ್ ಒಕ್ಕೂಟದ ಬಲಾಬಲ ಹೆಚ್ಚಳ

ಇನ್ನೊಂದು ಪ್ರಮುಖ ಬೆಳವಣಿಗೆಯೆಂದರೆ ಯುರೋಪಿಯನ್ ಒಕ್ಕೂಟದ ವಿಸ್ತಾರ. ಪೂರ್ವ ಯುರೋಪಿನ ಸಮಾಜವಾದಿ ದೇಶಗಳು ಸೇರಿದಂತೆ 10 ದೇಶಗಳ ಒಕ್ಕೂಟಕ್ಕೆ ಸೇರಿದ್ದು ಒಕ್ಕೂಟದ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದೆ. ಪೂರ್ವ ಯುರೋಪಿನ ಹಾಗೂ ಇತರ ಕೆಲವು ಹಿಂದುಳಿದಿರುವ ದೇಶಗಳು ಅಭಿವೃದ್ಧಿ ಪಶ್ಚಿಮ ಯುರೋಪಿನ ದೇಶಗಳಿಗೆ 'ಹಿತ್ತಲು' ಆಗಲಿವೆ. ಈ ದೇಶಗಳ ಜನರಿಗೆ ಯುರೋಪು ಒಕ್ಕೂಟ ಸೇರಿದ್ದರಿಂದ ಪ್ರಯೋಜನ ಆಗಬಹುದು ಎಂಬ ಭ್ರಮೆ ಇದೆ. ಯುರೋಪಿಯನ್ ಒಕ್ಕೂಟ ಆರ್ಥಿಕವಾಗಿ ಪ್ರಬಲವಾಗ ಬಹುದು - ಎಂದು ಕೆಲವು ವೀಕ್ಷಕರ ಅಂದಾಜು. ಅಮೆರಿಕ ತನ್ನ ಹಿತ್ತಲು (ದಕ್ಷಿಣ ಅಮೆರಿಕದ ದೇಶಗಳು) ಕಳೆದುಕೊಳ್ಳುತ್ತಿರು ವಾಗ, ಯುರೋಪು ಒಕ್ಕೂಟಕ್ಕೆ ಇಂತಹ 'ಹಿತ್ತಲು' ದೊರೆಯುತ್ತಿದೆ. ಇದು ಯುರೋಪ್ ಒಕ್ಕೂಟ ಬಲಪಡಿಸುತ್ತದೆ. ಆದರೆ ಇದು ಎಷ್ಟರಮಟ್ಟಿಗೆ ರಾಜಕೀಯ-ರಾಜಭಾರ-ಮಿಲಿಟರಿ ಬಲದಲ್ಲೂ ಪ್ರತಿಫಲಿತಗೊಳ್ಳುತ್ತದೆ ಎಂದು ಕಾದು ನೋಡಬೇಕಾಗಿದೆ. ಯುರೋಪಿಯನ್ ಒಕ್ಕೂಟ ತನ್ನದೇ ಸೈನ್ಯ ಹೊಂದಬೇಕೆಂಬ ಹಿಂದಿನ ಜರ್ಮನ್ ಸೂಚನೆ ಪುನಃ ಬಂದರೆ ಆಶ್ಚರ್ಯವಿಲ್ಲ. ಇತ್ತೀಚೆಗೆ ಜರ್ಮನ್ ವಿದೇಶಮಂತ್ರಿ ಭಾರತ ಭೇಟಿ ಸಂದರ್ಭದಲ್ಲಿ ನಯವಾಗಿ ಇರಾಕ್ ಮತ್ತು ಅಮೆರಿಕದ ಇತರ ಹಲವು ಅಂತರ್‍ರಾಷ್ಟ್ರೀಯ ವರ್ತನೆಗಳನ್ನು ಒಪ್ಪುವುದಿಲ್ಲ ಎಂದು ಹೇಳಿದರು. ಅಮೆರಿಕವನ್ನು ಮಿಲಿಟರಿಯಾಗಿ ಇರಾಕ್ ಯುದ್ಧದಲ್ಲಿ ಬೆಂಬಲಿಸುತ್ತಿದ್ದ ಸ್ಪೈನ್, ಇಟಲಿ ಮುಂತಾದ ದೇಶಗಳಲ್ಲಿ ಇರಾಕಿ ಪ್ರತಿರೋಧ ನೋಡಿ ನಡುಕ ಹುಟ್ಟಿದೆ. ಸ್ಪೈನ್ ನ ಹೊಸ ಸರ್ಕಾರ ಆಗಲೇ ತನ್ನ ಸೈನ್ಯ ವಾಪಾಸು ಕರೆಸಿಕೊಳ್ಳುವ ಬಗ್ಗೆ ನಿರ್ಧರಿಸಿದೆ. ಇರಾಕ್ ಬಗ್ಗೆ ಅಮೆರಿಕ ನೀತಿ ಬಗ್ಗೆ ಯುರೋಪಿಯನ್ ಸರ್ಕಾರಗಳಲ್ಲಿ ತೀವ್ರ ವಿರೋಧವಿದೆ.


ಇರಾಕಿನ ಮಧ್ಯಂತರ ಸರ್ಕಾರದ ಅಧ್ಯಕ್ಷ ಮತ್ತು

ಯುರೋಪು ಒಕ್ಕೂಟದ ಆರ್ಥಿಕ- ರಾಜಕೀಯ- ರಾಯಭಾರ-ಮಿಲಿಟರಿ ಬಲಾಬಲ ಅಂತರ್‍ರಾಷ್ಟ್ರೀಯವಾಗಿ ಏರುತ್ತಿದೆ. ಇದು ಅಮೆರಿಕದ 'ಏಕ-ಧ್ರುವೀಯ' ಅಧಿಪತ್ಯಕ್ಕೆ ಸವಾಲು ಹಾಕಿತೆ? ಎನ್ನುವುದನ್ನು ಕಾದು ನೋಡಬೇಕು.

ಬುಶ್ - ಬ್ಲೇರ್ ರಾಜಕೀಯ ಬಿಕ್ಕಟ್ಟು

ಬುಶ್ ಮತ್ತು ಬ್ಲೇರ್ ಆಂತರಿಕವಾಗಿ ಅವರ ದೇಶಗಳಲ್ಲಿ ತಮ್ಮ ವೈಯಕ್ತಿಕ ರಾಜಕೀಯ ಅಸ್ತಿತ್ವಕ್ಕೆ ಹೋರಾಡುತ್ತಿದ್ದಾರೆ. ಬುಶ್ ನವೆಂಬರ್‌ನ ಅಧ್ಯಕ್ಷೀಯ ಚುನಾವಣಾ-ಪೂರ್ವ ಮತ ಸಂಗ್ರಹಗಳಲ್ಲಿ ಡೆಮಾಕ್ರೆಟಿಕ್ ಅಭ್ಯರ್ಥಿ ಕೆರ್ರಿಯಿಂದ ಸುಮಾರು ಶೇಕಡಾ 4 ಮತಗಳಷ್ಟು ಹಿಂದೆ ಬಿದ್ದಿದ್ದಾರೆ. 'ಬುಶ್ ಉತ್ತಮ ಅಧ್ಯಕ್ಷ' ಎನ್ನುವವರ ಸಂಖ್ಯೆ ಶೇಕಡಾ 42 ಕ್ಕೆ ಕುಸಿದಿದೆ. (ಕಳೆದ ಐದು ವರ್ಷಗಳಲ್ಲಿ ಇದು ಅತ್ಯಂತ ಕಡಿಮೆ).

ಬ್ಲೇರ್ ಇನ್ನಷ್ಟು ತೀವ್ರವಾದ ರಾಜಕೀಯ ಬಿಕ್ಕಟ್ಟು ಎದುರಿಸಿದ್ದಾರೆ. ಇರಾಕ್ ಯುದ್ಧಕ್ಕೆ ಕಾರಣವಾದ ಗೂಢಚಾರ ವರದಿ ಸತ್ಯಾಸತ್ಯತೆ ಬಗ್ಗೆ ನೇಮಿಸಲಾದ ಬಟ್ಲರ್ ಕಮಿಶನ್ ವರದಿ ಹಿನ್ನೆಲೆಯಲ್ಲಿ ಅವರ ಪಕ್ಷದ ಎಂ.ಪಿ.ಗಳೇ ಅವರನ್ನು ಪಾರ್ಲಿಮೆಂಟಿನಲ್ಲಿ ತರಾಟೆಗೆ ತೆಗೆದುಕಕೊಂಡು ಲೇಬರ್ ಪಾರ್ಟಿ ಸ್ಥಳೀಯ ಸಂಸ್ಥೆಗಳ, ಯುರೋ ಪಾರ್ಲಿಮೆಂಟಿನ ಉಪ ಚುನಾವಣೆಗಳಲ್ಲಿ ಪರಾಭವ ಹೊಂದಿದೆ. ಇದಕ್ಕೆ ಬ್ಲೇರ್ ಇರಾಕ್ ನೀತಿ ಕಾರಣ. ಬ್ಲೇರನ್ನು ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಲೇಬರ್ ಪಕ್ಷಕ್ಕೆ ಭವಿಷ್ಯವಿಲ್ಲ. ಲೇಬರ್ ಪಾರ್ಟಿಯಲ್ಲಿ ಹಲವರು ಈ ಧೋರಣೆ ಹೊಂದಿದ್ದು, ಬ್ಲೇರನ್ನು ನಾಯತ್ವದಿಂದ ಇಳಿಸುವ ದಿನಗಳು ದೂರವಿಲ್ಲ.

ಮಹತ್ವದ ತಿರುವು

ಅಮೆರಿಕದ ಏಕಮಾತ್ರ - ಚಕ್ರಾಧಿಪತ್ಯಕ್ಕೆ ಇರಾಕಿ ಗೆರಿಲ್ಲಾ ಪ್ರತಿರೋಧ, ಯುರೋಪಿಯನ್ ಒಕ್ಕೂಟದ ಹೆಚ್ಚಿನ ಬಲ ಮಾತ್ರವಲ್ಲದೆ, ಹಲವು ಎಡೆಗಳಿಂದ ಪ್ರತಿರೋಧ ಬಂದಿದೆ. ರಶ್ಯಾ-ಚೀನಾ ನಿಕಟ ಸಂಬಂಧ ಮತ್ತು ದೂರಗಾಮಿ ವ್ಯೂಹ ರಚನೆ, ಭಾರತ-ಬ್ರೆಜಿಲ್ - ದ.ಆಫ್ರಿಕಾ WTO ನಲ್ಲಿ ಮೂರನೇ ಸುತ್ತಿನ ದೇಶಗಳ ನಾಯಕತ್ವ ವಹಿಸಿದ್ದು, ಚೀನಾ ಶಾಂಘಾಯ್-6 ಎಂಬ ಮಧ್ಯ-ಏಶ್ಯಾ ದೇಶಗಳ ಕೂಟ ರಚಿಸಿರುವುದು, ಇವು ಇಂತಹ ಮಹತ್ವದ ಬೆಳವಣಿಗೆಗಳು. ಇತ್ತೀಚೆಗೆ ಚೀನಾ-ಇಂಡಿಯಾ ಮೂಲಕ ಸಾರ್ಕ್ ಜತೆ ಸಹಕಾರಕ್ಕೆ ಮುಂದೆ ಬಂದಿರುವುದು ಇತ್ತೀಚಿನ ಇಂತಹ ಬೆಳವಣಿಗೆಗಳು.

ಮೇಲೆ ಹೇಳಿರುವ ಎಲ್ಲಾ ಬೆಳವಣಿಗೆಗಳು ಒಟ್ಟಾರೆಯಾಗಿ 90 ರ ದಶಕದ ಆದಿಯಿಂದ ಆರಂಭವಾದ (ಸೋವಿಯತ್ ಒಕ್ಕೂಟದ ಪತನದ ನಂತರ) ಅಮೆರಿಕದ ಏಕಚಕ್ರಾಧಿಪತ್ಯದ ಹಾದಿಯಲ್ಲಿ ಮಹತ್ವದ ತಿರುವು ತಂದಿದೆ. ಪ್ರಬಲ ಇರಾಕಿ ಗೆರಿಲ್ಲಾ ಪ್ರತಿರೋಧ ಅಮೆರಿಕದ ಸಾಮ್ರಾಜ್ಯಶಾಹಿ ಅಧಿಪತ್ಯಕ್ಕೆ ಜಗತ್ತಿನ ಸಾಮಾನ್ಯ ಜನ ಸವಾಲು ಹಾಕಬಲ್ಲರು. ಸೋಲಿಸುವ ಹಾದಿಯಲ್ಲಿದ್ದಾರೆ - ಎನ್ನುವುದರ ಪ್ರತೀಕ. ಇದು ಇರಾಕಿ ದೈನಂದಿನ ದುರಂತದಲ್ಲೂ ತೂರಿ ಬಂದ ಹೊಂಬೆಳಕು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH